# ಪ್ರಸಾದ

ಮಾಸಿಕ

ಸಂಪುಟ 38 ಸಂಚಿಕೆ 11 ನವೆಂಬರ್ 2023




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಹದಿನಾಲ್ಕನೆಯ ಘಟಿಕೋತ್ಸವದಲ್ಲಿ ಡಾ. ಬಿ. ಮಂಜುನಾಥ್, ಡಾ. ಆರ್. ಸುಧೀಂದ್ರ ಭಟ್, ಡಾ. ಹೆಚ್. ಬಸವನಗೌಡಪ್ಪ, ಡಾ. ಸಿ.ಜಿ. ಬೆಟಸೂರಮಠ, ಡಾ. ಸುರೀಂದರ್ ಸಿಂಗ್, ಯುಜಿಸಿ ಅಧ್ಯಕ್ಷರಾದ ಪ್ರೊ. ಎಂ. ಜಗದೀಶ್ ಕುಮಾರ್, ಡಾ. ಬಿ. ಸುರೇಶ್, ಡಾ. ಯೋಗೇಶ್ ಕೆ. ಚಾವ್ಲಾ, ಡಾ. ಎಂ.ಆರ್. ದಾಕ್ಷಾಯಿಣಿ, ಡಾ. ಟಿ.ಎಂ. ಪ್ರಮೋದ್ ಕುಮಾರ್‌ರವರುಗಳೊಂದಿಗೆ ಪದಕ ಮತ್ತು ಪ್ರಶಸ್ತಿ ವಿಜೇತರುಗಳಿದ್ದಾರೆ (20 ನವೆಂಬರ್ 2023)

# ಪ್ರಸಾದ

**ಸಂಪುಟ 38 : ಸಂಚಿಕೆ 11** **ನವೆಂಬರ್ 2023**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ನೊಯಿಡಾದ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿಯಲ್ಲಿ ಸೀಪಾ ಆಯೋಜಿಸಿದ್ದ "ಸುಸ್ಥಿರ ಭಾರತ–2023" ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಉದ್ಘಾಟಿಸಿದರು. ಶ್ರೀ ಹೆಚ್.ಆರ್. ಮಹದೇವಸ್ವಾಮಿ, ಡಾ. ರಘುರಾಮ್ ಅರ್ಜುನನ್, ಪ್ರೊ. ಆರ್.ಪಿ. ಗುಪ್ತಾ, ಡಾ. ಸಿ.ಜಿ. ಬೆಟಸೂರಮಠ ಮತ್ತು ಪ್ರೊ. ಅಮರ್ಜೀತ್ ಸಿಂಗ್‌ರವರುಗಳಿದ್ದಾರೆ (21 ನವೆಂಬರ್ 2023)

**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ

ಗುರುವಾಣಿ 5

ಸಂಪಾದಕೀಯ 7

ಹಂಬಲ 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಹೇಮ ನಿನ್ನದಲ್ಲ 12
ಡಾ. ಎಂ.ಎನ್. ನಂದೀಶ್ ಹಂಚೆ

ಶಬರಶಂಕರ ವಿಲಾಸ–ಟೀಕು 16
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಹೊಳಲ್ಕೆರೆ ತಾಲೂಕಿನ ದೇವಾಲಯಗಳ ಕ್ಷೇತ್ರದರ್ಶನ 23
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಲಿಕೆ)

ಸರ್ವಜ್ಞ ವಚನ ವ್ಯಾಖ್ಯಾನ 27
ಪ್ರೊ. ಮೊರಬದ ಮಲ್ಲಿಕಾರ್ಜುನ

ಮಹೇಶಸ್ಥಲ : ಒಂದು ಚಿಂತನೆ 31
ಪ್ರಕಾಶ ಗಿರಿಮಲ್ಲನವರ

ಕರಿಯಂಜುವುದು ಅಂಕುಶಕ್ಕಯ್ಯಾ 41
ನಗರ್ಲೆ ಶಿವಕುಮಾರ

ವಚನ ಸಾಹಿತ್ಯ 46
ಎಂ.ಎಸ್. ಚಂದ್ರಶೇಖರ ಅಯ್ಯರ್

ಗ್ರಂಥ ಪರಾಮರ್ಶೆ 50

ವಾರ್ತಾ ವಿಹಾರ 51
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

ಕಾಮಧೇನುವಿನಲ್ಲಿ
ಕಲ್ಪಿಸಿದ ಸವಿಯಿಪ್ಪುದಲ್ಲದೆ –
ಮರ್ತ್ಯದ ಪಶುವಿನಲ್ಲಿ ಉಂಟೇನಯ್ಯ?

ಮಹಾಶೇಷನಲ್ಲಿ
ಮಾಣಿಕ್ಯ(ವು) ಪ್ರಭಾವಿಸುತ್ತಿಪ್ಪುದಲ್ಲದೆ –
ಕೆರೆಯೊಳಗಣ ಒಳ್ಳೆಯೊಳಗುಂಟೇನಯ್ಯ?

ವಾರಣದ ಕುಂಭಸ್ಥಳದಲ್ಲಿ
ಮೌಕ್ತಿಕ ಬೆಳಗುತ್ತಿಪ್ಪುದಲ್ಲದೆ –
ಊರ ಹಂದಿಯಲ್ಲಿ ಉಂಟೇನಯ್ಯ?

ಶರಣರ ಮನೋಮಧ್ಯದಲ್ಲಿ
ಆ ಶಿವನು ಮೂರ್ತಿಗೊಂಡು
ಆ ಶರಣರ ಜಿಹ್ವೆಯ ಕೊನೆಯ ಮೊನೆಯ ಮೇಲೆ
ವಚನವೆಂಬ ಪರಮಾಮೃತವ ಕರೆದು
ಕೆಲಬಲದ ಗಣಂಗಳಿಗೆ ಸವಿದೋರಿ
ಆ ಶರಣರಲ್ಲಿ ಪರಿಪೂರ್ಣನಾಗಿಪ್ಪನಲ್ಲದೆ –
ದ್ವೈತಿ-ಅದ್ವೈತಿಗಳೆಂಬ
ಮನೆ ಶುನಕ ಸೂಕರರಲ್ಲಿ ಉಂಟೇನಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

ಭಾರತೀಯ ಪರಂಪರೆಯ ಎಲ್ಲ ಆಚರಣೆಗಳ ಹಿಂದೆ ಮಹತ್ವದ ಉದ್ದೇಶ ಮತ್ತು ಆಶಯಗಳಿವೆ. ಈ ಆಶಯಗಳನ್ನು ಅರಿತು ಆಚರಿಸಿದರೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ಆಚರಣೆಗಳು ಕೆಲವರಿಗೆ ಮೌಢ್ಯದಂತೆ ಕಾಣಬಹುದು. ವಾಸ್ತವದಲ್ಲಿ ಮೌಢ್ಯವೆಂದರೆ ಒಂದು ವಸ್ತು ಅಥವಾ ವಿಷಯದ ಬಗೆಗೆ ಸರಿಯಾದ ತಿಳಿವಳಿಕೆಯನ್ನು ಹೊಂದದೆ ಇರುವುದು. ವಚನಕಾರರು 'ಅರಿವು' ಎಂದು ಕರೆದದ್ದು ಈ ತಿಳಿವಳಿಕೆಯನ್ನೇ. ಆಚರಣೆಗಳ ಹಿಂದಿನ ಉದ್ದೇಶಗಳನ್ನು ಮುಂದಿನವರಿಗೆ ದಾಟಿಸುವುದು ಅಗತ್ಯ. ಯಾವುದೇ ಆಚರಣೆ ದೀರ್ಘಕಾಲ ಉಳಿದು ಬಂದಿದೆ ಎಂದರೆ ಅದರಲ್ಲಿ ಏನೋ ಒಂದು ಸತ್ವವಿದೆ ಎಂದರ್ಥ. ಬಹುಶಃ ಜಾತಿ–ಮತ–ಪಂಥಗಳ ಹಿಂದೆಯೂ ಒಂದು ಕಾಲಕ್ಕೆ ಇಂಥ ಆಲೋಚನೆ ಇದ್ದಿರಬೇಕು. ಅವುಗಳನ್ನು ಇಂದಿಗೂ ಯಥಾವತ್ತಾಗಿ ಮುಂದುವರಿಸಬೇಕು ಎಂಬುದು ಇದರರ್ಥವಲ್ಲ. ಮೊದಲಿದ್ದ ವರ್ಣಗಳು ಅನಂತರದಲ್ಲಿ ಜಾತಿಗಳಾಗುವ ಸ್ವಲ್ಪ ಮುಂಚೆ, ಅಂದರೆ ಋಗ್ವೇದದ ಕಾಲಕ್ಕೆ, ವೃತ್ತಿಗಳನ್ನು ದಾಟುವ ಪ್ರಕ್ರಿಯೆ ಸಹಜವಾಗಿತ್ತು. ಆಗ ಹುಟ್ಟಿನಿಂದ ಮಾತ್ರ ವ್ಯಕ್ತಿಗೆ ಜಾತಿ ಅಥವಾ ವರ್ಣ ದೊರೆಯುತ್ತಿರಲಿಲ್ಲ. ಆತ ಮಾಡುವ ಕಾಯಕದಿಂದ ಅವನಿಗೆ ವರ್ಣ ಅಥವಾ ಜಾತಿ ದೊರಕುತ್ತಿತ್ತು. ಮುಂದೆ ವೃತ್ತಿಗಳೇ ಜಾತಿಯಾಗಿ ಅದು ದುರ್ಗಮವಾದ ಬಗ್ಗೆ ಎಲ್ಲರಿಗೂ ಖೇದವಿರುವ ಹಿನ್ನೆಲೆಯಲ್ಲಿ ನೋಡುವುದಾದರೆ ಪೂರ್ವಿಕರು ವರ್ಣ–ಜಾತಿಗಳನ್ನು ಮಾಡಿದ ಆಶಯ ಮತ್ತು ಉದ್ದೇಶ ಮುಂದಿನವರಿಗೆ ಬಹುಶಃ ಸರಿಯಾಗಿ ಅರ್ಥವಾಗಿಲ್ಲದಿರಬಹುದು.

ಇದು ಪರಂಪರೆಯನ್ನು ಬಿಂಬಿಸುವ ಆಚರಣೆಗಳನ್ನು ಸೂಕ್ತವಾಗಿ ಅರ್ಥೈಸಬೇಕಾದ ಕಾಲ. ಇಂಥ ಸಂದರ್ಭ ಈಗ ಮಾತ್ರ ಬಂದಿದೆ ಎಂದು ಭಾವಿಸಬೇಕಾಗಿಲ್ಲ. ವೇದ, ಪುರಾಣ, ಶಾಸ್ತ್ರಗಳಿಗೆ ಭಾಷ್ಯ, ಟೀಕು, ವ್ಯಾಖ್ಯಾನಗಳೆಲ್ಲ ಬಂದದ್ದು, ಅವುಗಳನ್ನು ಅರ್ಥೈಸುವ ದೃಷ್ಟಿಯಿಂದಲೇ. ಹಾಗೆಯೇ ಆಚರಣೆಗಳನ್ನೂ ಅರ್ಥೈಸುವ ಕಾಲ ಬಂದಿದೆ. ಉದಾಹರಣೆಗೆ, ಈಗ ನಾಡಿನಾದ್ಯಂತ ಕಾರ್ತಿಕ ಮಾಸವನ್ನು ಎಲ್ಲರೂ ಭಕ್ತಿ ಶ್ರದ್ಧೆಗಳಿಂದ ಆಚರಿಸುತ್ತಿದ್ದು ದೇವಸ್ಥಾನಗಳಲ್ಲಿ ದೀಪ ಬೆಳಗುವ ವಿಶೇಷ ಕ್ರಿಯೆಯ ಹಿಂದಿನ ಅರ್ಥ ಮತ್ತು ವೈಶಿಷ್ಟ್ಯವೇನು ಎಂದು ಚಿಂತಿಸುವವರು ಬಹಳ ವಿರಳ.

ಕಾರ್ತಿಕ ಮಾಸವನ್ನು ಎರಡು ಭಿನ್ನ ದೃಷ್ಟಿಗಳಿಂದ ನೋಡಬಹುದು. ಒಂದು ಪುರಾಣದ ಹಿನ್ನೆಲೆಯಲ್ಲಿ; ಮತ್ತೊಂದು ವಾಸ್ತವದ ದೃಷ್ಟಿಕೋನದಲ್ಲಿ. ಬಹುತೇಕ ಸಂಗತಿಗಳನ್ನು ಪುರಾಣವಾಗಿಸಿ ಹೇಳುವುದರ ಹಿಂದೆ ಅವುಗಳನ್ನು ಶಾಶ್ವತವಾಗಿ ಕಾಪಾಡಿಕೊಳ್ಳುವ ಉದ್ದೇಶವಿರುತ್ತದೆ. ಕಾರ್ತಿಕ ಮಾಸವನ್ನು ಪುರಾಣಗಳು ವಿಷ್ಣುವಿನ ಮಾಸವೆನ್ನುತ್ತವೆ. ವಿಷ್ಣುವು ನಾರಾಯಣನ ರೂಪದಲ್ಲಿ ನೀರಿನಲ್ಲಿ ನೆಲೆಸಿರುತ್ತಾನೆ. ಆದ್ದರಿಂದ ಈ ತಿಂಗಳಿನಲ್ಲಿ ಸೂರ್ಯೋದಯಕ್ಕೆ ಮೊದಲು ನದಿಯಲ್ಲಿ ಸ್ನಾನ ಮಾಡುವ ಪದ್ಧತಿ ಇದೆ. ಇದರಿಂದ ಆಯುಷ್ಯ ವೃದ್ಧಿಯಾಗುತ್ತದೆ ಎಂಬ ನಂಬಿಕೆಯೂ ಇದೆ. ಅಂತೆಯೇ ಶಿವನ ಮಗನಾದ ಕಾರ್ತಿಕೇಯನು ತಾರಕಾಸುರನನ್ನು ಸಂಹಾರ ಮಾಡಿದ್ದೂ ಈ ಮಾಸದಲ್ಲಿಯೇ. ಆದುದರಿಂದ ಇದಕ್ಕೆ ಕಾರ್ತಿಕ ಮಾಸ ಎಂಬ ಹೆಸರು ಬಂದಿದೆ. ಈ ಮಾಸದ ಮಹತ್ವವನ್ನು ಕುರಿತು ಸ್ಕಂದಪುರಾಣ, ಪದ್ಮಪುರಾಣಗಳಲ್ಲಿ ಹಲವಾರು ಕಥೆಗಳಿವೆ. ಕಾರ್ತಿಕ ಮಾಸದ ಅಂತ್ಯದಲ್ಲಿ ದಕ್ಷಿಣಾಯನ ಮುಗಿಯುವ ಹೊತ್ತಿಗೆ ಉತ್ತರಾಯಣ ಆರಂಭವಾಗುತ್ತದೆ. ಕುರುಕ್ಷೇತ್ರ ಯುದ್ಧದಲ್ಲಿ ಶರಶಯ್ಯೆಯಲ್ಲಿ ಒರಗಿದ ಭೀಷ್ಮರು ಉತ್ತರಾಯಣ ಬರುವವರೆಗೂ ಸಾವಿಗಾಗಿ ನಿರೀಕ್ಷಿಸಿದ ಪ್ರಸಂಗ ಜನಜನಿತ.

ಕಾರ್ತಿಕ ಮಾಸದ ಮುಖ್ಯ ಸಂಪ್ರದಾಯ ಎಂದರೆ ದೇವತಾರಾಧನೆ ಹಾಗೂ ದೀಪಾರಾಧನೆ. ಇದೊಂದು ಸಾಂಕೇತಿಕ ಕ್ರಿಯೆ. ಕತ್ತಲೆ ಅಜ್ಞಾನವನ್ನೂ, ಬೆಳಕು ಜ್ಞಾನವನ್ನೂ ಸಂಕೇತಿಸುತ್ತದೆ. ಭಗವಂತ ಚೈತನ್ಯಸ್ವರೂಪಿ ಎಂದು ಜ್ಞಾನಮಾರ್ಗವು ಪರಿಭಾವಿಸುತ್ತದೆ. ಆದುದರಿಂದಲೇ ದೀಪವನ್ನು–

> ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನಸಂಪದಃ ।
> ಶತ್ರುಬುದ್ಧಿವಿನಾಶಾಯ ದೀಪಜ್ಯೋತಿ ನಮೋಸ್ತು ತೇ ॥

ಎಂದು ವರ್ಣಿಸಲಾಗುತ್ತದೆ. ಸಮೃದ್ಧಿ, ಆರೋಗ್ಯ, ಐಶ್ವರ್ಯವನ್ನು ನೀಡುವ ಮತ್ತು ಬುದ್ಧಿಯ ಶತ್ರುಗಳ (ಅರಿಷಡ್ವರ್ಗಗಳ) ನಾಶಮಾಡುವ ದೀಪದ ಬೆಳಕಿಗೆ ನಮಸ್ಕರಿಸುತ್ತೇನೆ. ಮುಂದುವರೆದು–

> ದೀಪಜ್ಯೋತಿ ಪರಬ್ರಹ್ಮ ದೀಪಜ್ಯೋತಿ ಜನಾರ್ದನಃ ।
> ದೀಪೋ ಮೇ ಹರತು ಪಾಪಂ ದೀಪಜ್ಯೋತಿ ನಮೋಸ್ತು ತೇ ॥

ಬೆಳಕಿನ ಸೃಷ್ಟಿಕರ್ತನಾದ ಬ್ರಹ್ಮನಿಗೆ, ಜನಾರ್ದನನಿಗೆ ನಾನು ಈ ಬೆಳಕಿನ ತಿಂಗಳಿನಲ್ಲಿ ನಮಸ್ಕರಿಸುತ್ತೇನೆ. ನನ್ನ ಲೋಪದೋಷಗಳಿಂದುಂಟಾಗುವ ದುಃಖಗಳನ್ನು ಆತನು ನಾಶಮಾಡಲಿ. ಕಾರ್ತಿಕ ಮಾಸದ ದೀಪಾರಾಧನೆಯು ನಾಡಿನ ಜನರೆಲ್ಲರಿಗೂ ಸಂತೋಷ, ಸಮಾಧಾನಗಳನ್ನು ತರುವಂತಾಗಲಿ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ದೇಹಾತುಮಂಗಳೆರಡಂಗಗಳು ಜೀವನಕೆ
ನೇಹದಿಂದೊಂದನೊಂದಾದರಿಪೆ ಲೇಸು ।
ದಾಹಗೊಂಡಿರಲೊಂದು ಮಿಕ್ಕೊಂದಕೆಲ್ಲಿ ಸುಖ
ದ್ರೋಹ ಬೇಡೊಂದಕಂ – ಮಂಕುತಿಮ್ಮ ॥

ಡಿ.ವಿ.ಜಿ.ಯವರು ಮನುಷ್ಯನ ಶರೀರದ ಲಕ್ಷಣವನ್ನು, ಸ್ವಭಾವವನ್ನು ಈ ಕಗ್ಗದಲ್ಲಿ ಪೃಥಕ್ಕರಿಸಿದ್ದಾರೆ. ಮನುಷ್ಯನ ಜಡ ಶರೀರ ಹಾಗೂ ಚೈತನ್ಯಯುಕ್ತವಾದ ಆತ್ಮ ಎರಡೂ ಘಟಕಗಳೂ ಅಗತ್ಯ. ಆತ್ಮವಿಲ್ಲದ ಶರೀರ ಕೇವಲ ಶವ. ಶರೀರವಿಲ್ಲದ ಆತ್ಮ ಪ್ರೇತ. ಶರೀರಕ್ಕೆ ಬೆಲೆ ಬರುವುದು ಆತ್ಮನಿಂದ. ಆತ್ಮನಿಗೆ ಕಾರ್ಯಸಾಧನೆ ಮಾಡಲು ಶರೀರ ಸಾಧನ. ಒಂದನ್ನೊಂದು ಪರಸ್ಪರ ಅವಲಂಬಿಸಿವೆ. ನಮ್ಮ ಪೂರ್ವಿಕರೂ ಸಹ ಶರೀರ ನಾಶವಾಗುವಂಥದ್ದು, ಆತ್ಮ ಅವಿನಾಶಿಯಾದದ್ದು ಎಂದಿದ್ದಾರೆ. ಅವಿನಾಶಿಯಾದ ಆತ್ಮಕ್ಕೆ, ನಾಶಹೊಂದುವ ಶರೀರವೇ ಆಶ್ರಯತಾಣ. ಎಂಥ ವಿಚಿತ್ರವೆಂದರೆ ಆತ್ಮಕ್ಕೆ ಸಾಧನವಾದ ಶರೀರವೇ ಆತ್ಮಕ್ಕೆ ಬಂಧನ ಕೂಡ. ಹಾಗೇ ನೋಡಿದರೆ ದೇಹವೇ ಮನುಷ್ಯನ ಪ್ರಥಮ ಶತ್ರು. ಶರೀರ ಕಾರಣದಿಂದಲೇ ಅವನು ಅಹಂಕಾರ ಪಡುತ್ತಾನೆ, ಮೆರೆಯುತ್ತಾನೆ. ಮರೆಗೆ ಸರಿಯುತ್ತಾನೆ, ರೋಗರುಜಿನಗಳಿಂದ ನರಳುತ್ತಾನೆ. ದೇಹವೇ ಬಾಲ್ಯ, ಯೌವನ, ವೃದ್ಧಾಪ್ಯ, ಮುಪ್ಪು ಎಲ್ಲ ಘಟ್ಟಗಳನ್ನೂ ಆವರಿಸುತ್ತದೆ. ದೇಹದ ಮಾಯೆಯಿಂದ ಮನುಷ್ಯನು ತನ್ನ ದೇಹವೇ ಪ್ರಧಾನ, ಶಾಶ್ವತವೆಂಬ ಭ್ರಮೆಯಲ್ಲಿ ಬಳಲುವುದು ಮಾತ್ರವಲ್ಲದೆ ಸ್ವಯಂರತಿಯಲ್ಲಿ ತೊಡಗುತ್ತಾನೆ. ವಿಚಿತ್ರವೆಂದರೆ ಈ ಸ್ವಯಂರತಿಯಲ್ಲಿ ಆತ್ಮವನ್ನೇ ಮರೆತು ಲೋಕವ್ಯವಹಾರಗಳಲ್ಲಿ ಮುಳುಗುತ್ತಾನೆ. ಅದಕ್ಕೇ ಡಿ.ವಿ.ಜಿ.ಯವರು ಶರೀರ ಮತ್ತು ಆತ್ಮ ಒಂದನ್ನೊಂದು ಸ್ನೇಹದಿಂದ ಆಧರಿಸಿ ನಡೆದರೆ ಒಳ್ಳೆಯದು ಎನ್ನುತ್ತಾರೆ.

ಸ್ನೇಹ ಎಂದರೆ ಪರಸ್ಪರ ಅವಲಂಬನೆ. ಅದು ದುಃಖವಾಗಿರಲಿ, ಸುಖವಾಗಿರಲಿ ಎಲ್ಲ ಸಂದರ್ಭಗಳಲ್ಲಿಯೂ ಸಹ ಹಿತವನ್ನು ಬಯಸುವವನೇ ಸ್ನೇಹಿತ. ದೇಹ ಆತ್ಮದ ಹಿತವನ್ನು, ಆತ್ಮ ದೇಹದ ಹಿತವನ್ನು ಬಯಸಬೇಕು. ಈ ಪರಸ್ಪರ ಹಿತಾಕಾಂಕ್ಷೆಯಲ್ಲಿ ಯಾವುದು ಶ್ರೇಷ್ಠ, ಯಾವುದು ಅಲ್ಲ ಎಂಬ ಮಾತು ಅಪ್ರಸ್ತುತ. ವಾಸ್ತವವಾಗಿ ದೇಹ ಕಣ್ಣಿಗೆ ಕಾಣುತ್ತದೆ, ಅದು ಇಂದ್ರಿಯಗ್ರಾಹ್ಯವಾದುದು. ಆತ್ಮವಾದರೋ

ಅತೀಂದ್ರಿಯವಾದದ್ದು. ಅದನ್ನು ಕಾಣುವ ಕ್ರಿಯೆ ಕೂಡ ದುರ್ಗಮವಾದದ್ದು. ಕಣ್ಣಿಗೆ ಕಾಣುವ ದೇಹದ ಪೋಷಣೆ ಸುಲಭ. ಅದರ ಸುಖ ಕೂಡ ಭೌತಿಕ ಮಟ್ಟದಲ್ಲಿಯೇ ಇರುತ್ತದೆ. ಈ ಭೌತಿಕ ಸುಖದ ನಡುವೆ ಅಭೌತಿಕವಾದ ಆತ್ಮದ ಇರವನ್ನು ದೇಹವೇ ಮರೆಯುತ್ತದೆ. ಆತ್ಮನಾಶ ಮಾಡಿಕೊಳ್ಳುತ್ತದೆ. ಆತ್ಮದ ನಾಶ ದೇಹದ ನಾಶಕ್ಕಿಂತಲೂ ಅಪಾಯಕಾರಿ. ದೇಹವನ್ನು ಪೋಷಣೆ ಮಾಡಿದಂತೆ ಭೌತಿಕ ವಸ್ತುಗಳಿಂದ ಆತ್ಮವನ್ನು ಸಂತೃಪ್ತಿಗೊಳಿಸಲಾಗುವುದಿಲ್ಲ.

ನಮ್ಮಲ್ಲಿ ಸಂತೋಷ ಮತ್ತು ಆನಂದ ಎಂಬ ಎರಡು ಪದಗಳನ್ನು ಬಹಳಷ್ಟು ಸಂದರ್ಭಗಳಲ್ಲಿ ಸಮಾನಾರ್ಥಕಗಳಂತೆ ಬಳಸುತ್ತಾರೆ. ಆದರೆ ಸಂತೋಷ ಎನ್ನುವುದು ಭೌತಿಕ ಮಟ್ಟದಲ್ಲಿ ಲಭಿಸುವ ಸುಖ. ಆನಂದವೆಂಬುದು ಆತ್ಮಕ್ಕೆ ಸಂಬಂಧಿಸಿದ ಭಾವ. ಆದುದರಿಂದಲೇ ನಮ್ಮಲ್ಲಿ ಸಾಧನೆಯ ಅತ್ಯುಚ್ಚ ಸ್ಥಿತಿಯನ್ನು 'ಸಚ್ಚಿದಾನಂದ' ಎನ್ನುತ್ತಾರೆ. ಸತ್–ಚಿತ್–ಆನಂದವಾದ ಅದು ಅಲೌಕಿಕ ಸುಖದ ಒಂದು ಪರಮ ಅವಸ್ಥೆ. ಆದರೆ ಈ ಅವಸ್ಥೆಯನ್ನು ತಲುಪಲು ಸಂತೋಷವೇ ಮೊದಲ ಮೆಟ್ಟಿಲು ಎಂಬುದೂ ನಿಜವೆ.

ಮಹಾಕವಿ ಕಾಳಿದಾಸ "ಶರೀರಮಾದ್ಯಂ ಖಲು ಧರ್ಮಸಾಧನಂ' ಎನ್ನುತ್ತಾನೆ. (ಧರ್ಮಾಚರಣೆಗಾಗಿ ಶರೀರವೇ ಮೊದಲನೆಯ ಅವಶ್ಯಕತೆ). ಆದರೆ ದೇಹ ಮತ್ತು ಆತ್ಮ ಎರಡರಲ್ಲಿ ಯಾವುದೇ ಒಂದು ಬಳಲಿದರೂ ಉಳಿದ ಇನ್ನೊಂದಕ್ಕೆ ಸುಖವಿರುವುದಿಲ್ಲ. ದೇಹ ದಾಹಗೊಂಡರೆ ತಾತ್ಕಾಲಿಕವಾಗಿ ತಣಿಸಬಹುದು. ಆದರೆ ಆತ್ಮ ದಾಹಗೊಂಡರೆ ಅವರ ತಣಿಯುವಿಕೆಗೆ ದಾರಿಯೇ ಇರುವುದಿಲ್ಲ. ಉದಾಹರಣೆಗೆ ದೇಹದ ನಾಲ್ಕು ಮೂಲಭೂತ ಬಯಕೆಗಳೆಂದರೆ ಹಸಿವು, ನಿದ್ರೆ, ಭಯ, ಮೈಥುನ. ಅವುಗಳ ಬಯಕೆಯನ್ನು ತಾತ್ಕಾಲಿಕವಾಗಿ ತಣಿಸಬಹುದು. ಆದರೆ ಆತ್ಮ ದಾಹಗೊಂಡರೆ ಅದನ್ನು ತಣಿಸಲಾಗುವುದಿಲ್ಲ. ಹಾಗಾಗಿ ಯಾವ ಒಂದು ಘಟಕಕ್ಕೂ ದ್ರೋಹ ಮಾಡಬಾರದು ಎನ್ನುತ್ತಾರೆ ಡಿ.ವಿ.ಜಿ.ಯವರು. ದೇಹಕ್ಕೆ ವಿವೇಕ ನೀಡುವುದು ಆತ್ಮದ ಕೆಲಸವಾಗಬೇಕು. ಆತ್ಮದ ಸಾಧನೆಗೆ ದೇಹ ಉಪಕರಣವಾಗಬೇಕು. ಇವೆರಡರ ಅಂತಸ್ಸಂಬಂಧ ವಿವೇಕದಲ್ಲಿ ಅರಳಬೇಕು. ಹಾಗೆ ಸರ್ವತೋಮುಖವಾದ ಅರಳುವಿಕೆಯಲ್ಲಿಯೇ ನಿಜವಾದ ಆನಂದದ ಸೆಲೆ ಇರುವುದು. ಆದ್ದರಿಂದಲೇ "ಬ್ರಹ್ಮಾನಂದಂ ಪರಮಸುಖದಂ" ಎಂಬ ಮಾತು ಪ್ರಸಿದ್ಧವಾಗಿದೆ. ಇಂಥ ಅರ್ಥಪೂರ್ಣ ಅರಳುವಿಕೆಯೇ ಇಹಪರಗಳ ವಡುವಣ ಸೇತುವೆ. ಇದುವೇ ಮನುಷ್ಯ ಜೀವನದ ಸುಖಕ್ಕೆ ರಹದಾರಿ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಹಂಬಲ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಭಕ್ತಿ ಎಂಬುದು ಅತ್ಯಂತ ಮಧುರ ಭಾವ. ಅದು ವಿಕಾಸಗೊಂಡು, ನಿಸ್ಸೀಮವಾದ, ಪರಮೋನ್ನತ ಅವಸ್ಥೆಯನ್ನು ತಲುಪಬೇಕು. ಕೆಲವು ಪೋಷಕಾಂಶ ಗಳಿದ್ದರೆ ಅದು ಸಾಧ್ಯ. ಭಕ್ತಿಗೆ ಅತ್ಯಂತ ಅನಿವಾರ್ಯವಾದ, ಮಹತ್ವದ ಪೋಷಕಾಂಶವೆಂದರೆ ಸತ್ಸಂಗ!

ವಾಲ್ಮೀಕಿ ಮೊದಲು ಒಬ್ಬ ದರೋಡೆಕೋರನಾಗಿದ್ದ. ಆಗ ಅವನ ಕಣ್ಣಲ್ಲಿ ಕ್ರೋಧ, ಕೈಯೊಳಗೆ ಕ್ರೌರ್ಯ, ಮನದೊಳಗೆ ಹಿಂಸೆಯ ಭಾವ. ಇಂಥ ವಾಲ್ಮೀಕಿಗೆ ನಾರದ ಮಹರ್ಷಿಗಳ ಸತ್ಸಂಗ ದೊರೆಯಿತು. ಎಂಥ ಅಗಾಧ ಪರಿವರ್ತನೆಯಾಯಿತು!

ಅದೇ ವಾಲ್ಮೀಕಿಯ ಹೃದಯದಿಂದ ಹಿಂಸಾಭಾವ ಶಾಶ್ವತವಾಗಿ ಮರೆಯಾಯಿತು! ಅನಂತ ಮಾಧುರ್ಯಭಾವ ಹೊರಹೊಮ್ಮಿತು! ಕಣ್ಣೊಳಗಿನ ಕ್ರೋಧ ದೂರವಾಗಿ ಅಪ್ರತಿಮ ಶಾಂತಿರಸ ಚಿಮ್ಮಿತು! ಕೈಯೊಳಗಿನ ಕ್ರೌರ್ಯ ನಿಂತು ಅಮರಕಾವ್ಯ ಪ್ರವಹಿಸಿತು! ಅವನ ಶಬ್ದಗಳಲ್ಲಿ ನಿಶ್ಶಬ್ದಬ್ರಹ್ಮನೇ ನೆಲೆಸಿದ! ಇತಿಹಾಸದಲ್ಲಿ ಇಂಥ ಹೃದಯಪರಿವರ್ತನೆಯ ಘಟನೆಗಳು ಅಪರೂಪ. ಅಂಗುಲಿಮಾಲ, ನಾಮದೇವರಂತೆ ಅಲ್ಲೊಂದು, ಇಲ್ಲೊಂದು! ಅಂಥ ಅಪರೂಪದ ಶಕ್ತಿ ಆ ಸತ್ಸಂಗದಲ್ಲಿ!

ಏಸು, ಬುದ್ಧ, ಬಸವ, ಮಹಾವೀರ, ಶಂಕರ ಮುಂತಾದ ಮಹಾತ್ಮರ ಸಂಗ ನಾವು ಮಾಡಬೇಕು, ನಿಜ. ಆದರೆ ಅಂಥವರು ಎಷ್ಟು ಜನ? ಬೆರಳೆಣಿಕೆ ಯಷ್ಟಲ್ಲವೆ? ಹಾಗಾದರೆ ನಮಗೆಲ್ಲರಿಗೆ ಸತ್ಸಂಗ ಹೇಗೆ ಸಾಧ್ಯ? ಇದು ಕೆಲವರ ಸಮಸ್ಯೆ.

ಯಾವುದೇ ಕ್ಷೇತ್ರದಲ್ಲಿ ಶ್ರೇಷ್ಠ ಜನ ವಿರಳ. ಹರಿದಾಸರಂಥ ಸಂಗೀತಜ್ಞರು, ಮೈಕಲ್ ಎಂಜಲೋನಂಥ ಕಲಾವಿದರು ಎಷ್ಟು ಜನ? ಉತ್ತುಂಗ ಎವರೆಸ್ಟ್ ಶಿಖರವನ್ನು ಏರಿದವರು ಎಷ್ಟು ಜನ? ತೇನ್‌ಸಿಂಗ್, ಹಿಲೇರಿನಂತೆ ಅಲ್ಲೊಬ್ಬರು, ಇಲ್ಲೊಬ್ಬರು. ಹಾಗೆಯೇ ಅಪರೂಪವಾದ ಅಧ್ಯಾತ್ಮವಿದ್ಯೆಯಲ್ಲಿ ಸತ್ಯದ ಪರಮೋನ್ನತ ಬೆಟ್ಟವನ್ನೇರಿದ ಸಂತರು ವಿರಳವಾಗಿರುವುದು ಸಹಜ!

ಕೌಶಿಕ ಮಹಾರಾಜನು ಅಕ್ಕಮಹಾದೇವಿಯನ್ನು ಪಟ್ಟದ ಅರಸಿಯನ್ನಾಗಿ ಮಾಡುತ್ತೇನೆಂದರೂ ಅದನ್ನು ನಿರಾಕರಿಸಿದಳು, ಆ ಮಹಾತಾಯಿ! ರಾಜಕುಮಾರಿ ಮಾಯಾದೇವಿ, ಅಲ್ಲಮಪ್ರಭುದೇವರಿಗೆ ಮನವೊಲಿದು ಬಂದರೂ ಅವಳನ್ನು ನಿರಾಕರಿಸಿದನು, ಆ ಯೋಗೇಶ್ವರನು. ಅಕ್ಕ ಅಲ್ಲಮರಿಗೆ ಸಾಧ್ಯವಾದ ಆ ವಿರತಿ ಎಷ್ಟು ಜನರಿಗೆ ಸಾಧ್ಯ?

ಉತ್ತರಧ್ರುವದಲ್ಲಿ ಚಳಿಗಾಲದಲ್ಲಿ ಸೂರ್ಯನು ಕಾಣುವುದೇ ಅಪರೂಪ. ಅರಬಸ್ತಾನದಲ್ಲಿ ಯಾವ ಕಾಲದಲ್ಲಿಯೂ ಮಳೆಯಾಗುವುದೇ ಅಪರೂಪ. ಹೀಗಿದ್ದರೂ ಅಲ್ಲಿಯ ಪಶುಪಕ್ಷಿ, ಜೀವರಾಶಿ ಬದುಕಿದೆ. ಜನಜೀವನ ಸಾಗಿದೆ. ಅಪರೂಪವಾಗಿರುವುದನ್ನೇ ಹಿತಮಿತವಾಗಿ ಬಳಸಿಕೊಂಡು ಬದುಕುವುದೊಂದು ಕಲೆ. ಹಾಗೆಯೇ ಅಧ್ಯಾತ್ಮಕ್ಷೇತ್ರದಲ್ಲಿ ವಿರಳವಾಗಿರುವ ಸಂತರ, ಶರಣರ ಸಂಗದಿಂದಲೇ ನಮ್ಮ ಜೀವನ ಪಾವನ ಮಾಡಿಕೊಳ್ಳಲು ಸಾಧ್ಯವಿದೆ! ಆದರೆ ಅಂಥ ಶರಣರ ಸಜ್ಜನರ ಸಂಗಕ್ಕಾಗಿ ನಾವು ಹಂಬಲಿಸಬೇಕು. ಬಸವಣ್ಣನವರಂತೆ ಶರಣರು ಬರುವುದೇ ನಮಗೆ ಪ್ರಾಣಜೀವಾಳವಾಗಬೇಕು. ಅವರು ಬರದಿದ್ದರೆ, ಅವರನ್ನೇ ಹುಡುಕಿಕೊಂಡು ಹೋಗುವಷ್ಟು ನಮ್ಮ ಹಂಬಲ ತೀವ್ರವಾಗಿ ಇರಬೇಕಷ್ಟೆ!

ಒಬ್ಬ ರೈತ ಹೊಲಕ್ಕೆ ಹೋದ. ಕಿಸೆಯೊಳಗೆ ಕೈ ಹಾಕಿದ. ಬೀಡಿ ಇರಲಿಲ್ಲ. ಜೀವ ತಾಳಲಿಲ್ಲ. ಎದ್ದ. ನೆರೆಹೊರೆಯ ತೋಟಗಳನ್ನೆಲ್ಲ ಸುತ್ತಾಡಿದ. ದುರ್ದೈವ ದಿಂದ ಆ ದಿನ ಯಾರೂ ಬೀಡಿ ತಂದಿರಲಿಲ್ಲ. ನಿರಾಶೆಯಿಂದ ಹಿಂತಿರುಗಿದ.

ಬರುವಾಗ ದಾರಿಯಲ್ಲಿ ಒಬ್ಬರು ಭೇಟಿಯಾದರು. ಈತನಿಗೆ ಹೋದ ಜೀವ ಬಂದಂತಾಯಿತು! ಆದರೆ ಅವರು ಮಹಾತ್ಮರು. ಯಾರಾದರೇನು? ಅವರಿಗೂ ಆತ ಬೀಡಿಯನ್ನು ಕೇಳಿದ. ಪರಮಾತ್ಮನೇ ಭೇಟಿಯಾದರೂ ಅದನ್ನೇ ಕೇಳುತ್ತಿದ್ದನೇನೋ, ಆ ಪುಣ್ಯಾತ್ಮ!

ಅನಾರೋಗ್ಯಕರವಾದ ಒಂದು ಬೀಡಿಗೇ ಮನುಷ್ಯ ಇಷ್ಟು ಹಂಬಲಿಸು ತ್ತಾನೆ. ಇನ್ನು ಸತ್ಯದ ಸಾಕ್ಷಾತ್ಕಾರ ಮಾಡಿಸಿಕೊಡುವ, ಭವರೋಗವನ್ನು ಕಳೆದು ಜೀವನ್ಮುಕ್ತರನ್ನಾಗಿಸುವ ಶರಣರ, ಸಂತರ ಸಂಗಕ್ಕಾಗಿ ಎಷ್ಟು ಹಂಬಲಿಸಬೇಕಾದೀತು? ಒಬ್ಬ ಅಳಿಯದೇವರನ್ನು ಹುಡುಕಲು ಕನ್ಯೆಯ ತಂದೆ ವರುಷ-ವರುಷ ಕಳೆಯುತ್ತಾನೆ. ನಾಡ-ನಾಡ ತಿರುಗುತ್ತಾನೆ. ಇನ್ನು ಆ ದೇವರಿಗೂ ದೇವರಾದ, ಗುರುದೇವರನ್ನು ಹುಡುಕಲು ಎಷ್ಟು ತ್ಯಾಗ ಮಾಡಬೇಕಾದೀತು? ಸತ್ಸಂಗವಿಲ್ಲದೆ ಸದ್ಗತಿಯೇ ಇಲ್ಲ, ಚಿರಶಾಂತಿಯೇ ಇಲ್ಲ ಎಂಬ ಅರಿವು ನಮ್ಮಲ್ಲಿ ಮೂಡಬೇಕು. ಆಗ ಸತ್ಸಂಗದ ಹಂಬಲ ಉಂಟಾಗುತ್ತದೆ!

ಸತ್ಸಂಗ ಮಾಡಬೇಕು, ನಿಜ. ಆದರೆ ಅಂಥ ಸಂತರನ್ನು ಶರಣರನ್ನು ಗುರುತಿಸುವುದು ಹೇಗೆ? ಅವರು ವಿದ್ಯಾವಂತರೆ, ಸಿರಿವಂತರೆ? ಸುರೂಪಿಗಳೆ? ಸಶಕ್ತರೆ? ಅವರು ಏನಾದರೂ ಆಗಿರಬಹುದು. ಅವೆಲ್ಲ ಹೊರಗಿನ ಲಕ್ಷಣಗಳು. ಅವುಗಳ ಮೂಲಕವಷ್ಟೆ ಅವರನ್ನು ಗುರುತಿಸಲಾಗದು. ಅದಕ್ಕೆ ಭಕ್ತಿಯ ಹೃದಯ ಬೇಕಾಗುತ್ತದೆ.

ನಾಲ್ಕು ಜನ ರಾಜಪುತ್ರರು, ಸಂತರನ್ನು, ಮಹಾತ್ಮರನ್ನು ಅರಸಿಕೊಂಡು ಹೊರಟರು. ದೂರ, ದೂರ ಸಾಗಿ ಹಿಮದ ಬೆಟ್ಟ ಸಮೀಪಿಸಿದರು. ಆ ಬೆಟ್ಟದಡಿಯಲ್ಲಿ ಓರ್ವ ಮಹಾತ್ಮರು ಇರುವುದಾಗಿ ಕೇಳಿದ್ದರು. ದಾರಿಮಧ್ಯದಲ್ಲಿ ಒಂದು ಹೊಳೆ. ಅಲ್ಲೊಬ್ಬ ನಾವಿಕ ಮುದುಕ ಇವರನ್ನು ಸ್ವಾಗತಿಸಿ ಸತ್ಕರಿಸಿದ. "ತಾವು ಯಾರು? ಎಲ್ಲಿಗೆ ಹೊರಟಿರುವಿರಿ?" ಎಂದು ನಾವಿಕ ಕೇಳಿದ. "ನಾವು ರಾಜಪುತ್ರರು. ಇಲ್ಲಿ ಒಬ್ಬ ಮಹಾತ್ಮರು ಇರುವರಂತೆ. ಅವರಿಂದ 'ಶಾಂತಿಪಥ' ತಿಳಿಯಲು ಬಂದೆವು" ಎಂದರು ಯುವಕರು.

ಮುದುಕ ಮುಗುಳ್ನಕ್ಕ. ಅವರನ್ನು ನಾವೆಯಲ್ಲಿ ಕೂಡಿಸಿಕೊಂಡು ಆಚೆಯ ದಡದಲ್ಲಿ ಬಿಟ್ಟು ಹೇಳಿದ "ಇಲ್ಲೇ ಸಮೀಪದಲ್ಲಿ ಮಹಾತ್ಮರಿದ್ದಾರೆ. ದರ್ಶನ ಪಡೆಯಿರಿ."

ಆಗಲೇ ಸಂಜೆಯಾಗಿತ್ತು. ಯುವಕರು ಮಹಾತ್ಮರ ಬಳಿಗೆ ಧಾವಿಸಿ, ವಂದಿಸಿದರು. ಮಹಾತ್ಮರು ಕೇಳಿದರು, "ಇಷ್ಟು ದೂರ ಬಂದ ಕಾರಣ?" "ತಾವು ಮಹಾತ್ಮರು. ತಮ್ಮಿಂದ ಶಾಂತಿಪಥವ ತಿಳಿಯಬಂದೆವು" ಎಂದರು ಯುವಕರು. "ಸರಿ ನಿಮಗೆ ಶಾಂತಿಪಥವೇ ತಿಳಿಯಬೇಕಾಗಿದ್ದರೆ ಆ ನಾವಿಕ ಮುದುಕನ ಬಳಿ ಹೋಗಿರಿ" ಎಂದರು ಮಹಾತ್ಮರು.

ಯುವಕರಿಗೆ ಪರಮಾಶ್ಚರ್ಯ! ತಪಸ್ಸು, ಧ್ಯಾನ, ಚಿಂತನೆ ಏನೊಂದು ಇಲ್ಲದ ಮುದುಕ ಆ ನಾವಿಕ. ಅವನಿಂದ ಮಾರ್ಗದರ್ಶನ ಪಡೆಯಲು ಅವನನ್ನು ಗುರುವೆಂದು ಸ್ವೀಕರಿಸಲು ಅವರ ಮನಸ್ಸು ಒಪ್ಪಲಿಲ್ಲ. ಆದರೆ ಮಹಾತ್ಮರ ಮಾತು ಮೀರುವುದೆಂತು?

ನಾವಿಕನು ಬೆಳದಿಂಗಳ ಬೆಳಕಿನಲ್ಲಿ ಈಚೆಯೇ ದಡದಲ್ಲಿ ಚಳಿ ಕಾಯಿಸುತ್ತಾ ಹಾಡಿಕೊಂಡಿದ್ದ. ಯುವಕರು ಅವನ ಬಳಿ ಸಾರಿದರು. 'ಮತ್ತೇಕೆ ಇಲ್ಲಿಗೆ ಬಂದಿರಿ?" ಎಂದ ನಾವಿಕ. "ಕ್ಷಮಿಸಬೇಕು, ನಾವು ಅರಿಯದೇ ಹೋದೆವು. ತಾವು ನಮಗೆ ದಯವಿಟ್ಟು ದಿವ್ಯ ಶಾಂತಿಪಥವನ್ನು ತೋರಬೇಕು" ಎಂದು ಯುವಕರು ವಿನಂತಿಸಿದರು. ಅವರ ಹಂಬಲ ಕಂಡು ಹರ್ಷಗೊಂಡು ಮುದುಕ ಮನದೆರೆದು ಮಾತನಾಡಿದ.

"ಜೀವನದ ಹೊಳೆಗೆ ಎರಡು ದಂಡೆ. ಪ್ರಪಂಚ, ಪಾರಮಾರ್ಥ. ಎಲ್ಲಿದ್ದರೂ ನಾವು ನೆಮ್ಮದಿಯಿಂದಿರಬೇಕು. ಒಂದರಲ್ಲಿ ಇದ್ದು ಇನ್ನೊಂದನ್ನು ಚಿಂತಿಸಿದರೆ ಯಾವುದೂ ರುಚಿಸದು. ಎರಡನ್ನೂ ಸಮದೂಗಿಸಿಕೊಂಡು ಹೋಗುವುದರಲ್ಲಿಯೇ ಶಾಂತಿ ಸಮಾಧಾನ!" ನಾವಿಕನು ನಿಜ ನುಡಿದನು. ಯುವಕರು ಚಂದಿರನ ಶೀತಲ ಕಿರಣಗಳಲ್ಲಿ ಶಾಂತಿಯ ಬೆಳಗನ್ನು ಕಂಡರು. ಆಗ ಸಂತರನ್ನು ಕಾಣಬೇಕೆಂಬ ಅವರ ಹಲವು ದಿನಗಳ ಹಂಬಲ ಫಲಿಸಿತ್ತು.

ಒಂದು ದುಂಬಿ ಹೊರಟಿತ್ತು. ಯಾವುದೋ ಬೆಟ್ಟದಲ್ಲಿ ಹೂವೊಂದು ಅರಳಿತ್ತು ಇದಕ್ಕಾಗಿ. ದಾರಿಯಲ್ಲಿ ಓರ್ವ ಸಂತ ಭೇಟಿಯಾದ. ದುಂಬಿಗೆ ಕೇಳಿದ, "ಎಲ್ಲಿಗೆ ಪಯಣ?" "ಹೂವೊಂದು ಅರಳಿದೆ. ಮಕರಂದ ತುಂಬಿದೆ. ಸುಗಂಧ ಸೂಸಿದೆ. ಅಲ್ಲಿಗೆ, ಅಲ್ಲಿಗೆ!" ಎಂದಿತು ದುಂಬಿ.

"ಎಲ್ಲಿದೆ ಆ ಹೂವು?" ವಿಚಾರಿಸಿದರು ಸಂತರು. "ಅದು ನನ್ನ ಕಣ್ಣಿಗೂ ಕಾಣದು. ನಿನ್ನ ಕಣ್ಣಿಗೂ ಕಾಣದು. ನನ್ನ ಹೃದಯ ಮಾತ್ರ ಎಳೆಯುತ್ತಲಿದೆ. ನಾನು ಬರುತ್ತೇನೆ. ನಮಸ್ಕಾರ!" ಎಂದಿದ್ದೇ ದುಂಬಿ ಹಾರಿತು.

ಹಾರಿ, ಹಾರಿ ದೂರದ ಬೆಟ್ಟದ ತುದಿಯನೇರಿತು. ಅಲ್ಲಿ ಅರಳಿದ ಹೂವು ದುಂಬಿಯ ದಾರಿ ಕಾಯುತ್ತಿತ್ತು. ಅದ ಕಂಡು ದುಂಬಿ ಜಗವನ್ನೆಲ್ಲ ಮರೆಯಿತು. ಪುಷ್ಪದಲ್ಲಿ ಬೆರೆಯಿತು!

ದುಂಬಿಯಂಥ ಸಣ್ಣ ಕೀಟವೂ ಹುಡುಕಿ ತನ್ನ ಪ್ರಾಣಕ್ಕೆ ಪ್ರಾಣವಾದ ಹೂವನ್ನು ಪಡೆಯುತ್ತದೆ. ಮನುಷ್ಯರಾದ ನಾವು ಹೃದಯಾರೆ ಹಂಬಲಿಸಿದರೆ, ಹುಡುಕಿದರೆ ಸಂತರ ಸಾನ್ನಿಧ್ಯ ದೊರೆಯದೆ? ಭಕ್ತಿಗೆ ಭೀಮಬಲವನ್ನೀಯುವ ಸತ್ಸಂಗ ಉಂಟಾಗದೆ?

□

# ಹೇಮ ನಿನ್ನದಲ್ಲ

**ಡಾ. ಎಂ.ಎನ್. ನಂದೀಶ್ ಹಂಚೆ**

ಹಕ್ಕಿಗಳು ಚಿಲಿಪಿಲಿಗುಟ್ಟಲು ಆರಂಭಿಸುವ ಮೊದಲೇ ಪೂಜೆ ಪೂರೈಸಿ, ಸೂರ್ಯರಶ್ಮಿ ಗಿಡಮರಗಳ ಮೇಲೆ ಬಿದ್ದು ಹೊಂಬಣ್ಣದಿಂದ ಹೊಳೆಯುವ ಹೊತ್ತಿಗೆ, ಹೊಳೆಯುವ ಅದೇ ಬಣ್ಣದ ಕಾವಿಯಲ್ಲಿ, ಪ್ರಸಾದ ಸ್ವೀಕರಿಸಿ ನಿತ್ಯದಂತೆ ಶ್ರೀಮಠದ ಕಾಗದಪತ್ರಗಳ ಕಡತವನ್ನು ಪರಿಶೀಲಿಸುವ ಕಾರ್ಯದಲ್ಲಿ ತೊಡಗಿದ್ದರು ಪೂಜ್ಯ ರಾಜೇಂದ್ರ ಶ್ರೀಗಳು. ಅರಮನೆಯ ಬಳಿಯಿರುವ ಮೈಸೂರಿನ ಶಾಖಾ ಮಠದ (ಇಂದಿನ ಜೆಎಸ್ಎಸ್ ಮಹಾವಿದ್ಯಾಪೀಠ) ಸುತ್ತ ವಿರಳವಾಗಿ ಓಡಾಡುವ ವಾಹನಗಳ ಶಬ್ದ ಕಿವಿಗೆ ಬಿದ್ದು ಏಕಾಗ್ರತೆಯು ಅವರ ಕೆಲಸಕ್ಕೆ ಅಡ್ಡಿಯಾಗುತ್ತಿತ್ತು. ಅಷ್ಟರಲ್ಲಿ ಶ್ರೀಮಠದ ಮುಖ್ಯ ದ್ವಾರದ ಪೌಳಿಗೋಡೆಗೆ ಕಾವಲಾಗಿದ್ದ ದೊಡ್ಡ ಕಬ್ಬಿಣದ ಗೇಟ್ ಅನ್ನು ಯಾರೋ ತಳ್ಳುತ್ತಿದ್ದರು. ಗೇಟಿನಲ್ಲಿದ್ದ ಕಾವಲುಗಾರನಿಗೆ, ತೀರಾ ಹಳೆಯದಾಗಿದ್ದರಿಂದ ಗೇಟನ್ನು ತೆರೆಯಲು ಸ್ವಲ್ಪ ಹೆಚ್ಚೇ ಶ್ರಮ ಆಗುತ್ತಿತ್ತು. ಆಗ ಕಿರ್ ಎಂದು ಶಬ್ದ ಮಾಡುತ್ತಾ ಆ ಬಾಗಿಲು ತೆರೆದುಕೊಳ್ಳುತ್ತಿತ್ತು. ಹಾಗೆ ತೆಗೆದ ಗೇಟಿನ ಕಡೆ ತಿರುಗಿದ ಶ್ರೀಗಳು ಆ ವ್ಯಕ್ತಿಗಳನ್ನು ನೋಡಿ ಮನಸ್ಸಿನಲ್ಲಿ ಕಸಿವಿಸಿಗೊಂಡರು. ನೋಡುತ್ತಿದ್ದ ಕಡತಗಳನ್ನೆಲ್ಲ ಜೋಡಿಸಿ ಬದಿಗಿಟ್ಟು ಬೆಳಗಿನ ಪೂಜೆಯಲ್ಲಿ ತಮ್ಮೊಡನೆ ಪಾಲ್ಗೊಂಡಿದ್ದ ಶ್ರೀಮಠದ ಆತ್ಮೀಯರಾಗಿದ್ದ ಕಸುವಿನಹಳ್ಳಿಯ ಶ್ರೀಗಳನ್ನು ಕರೆದರು. ಎದುರು ನಿಂತ ಕಸುವಿನಹಳ್ಳಿ ಶ್ರೀಗಳಿಗೆ ಪೂಜ್ಯ ರಾಜೇಂದ್ರರು, "ನೋಡಿ ಸ್ವಾಮಿಗಳೇ, ಇಂದು ಪಾರ್ವತಮ್ಮ ಬೆಳ್ಳಂಬೆಳಗೆಯೇ ಬಂದುಬಿಟ್ಟಿದ್ದಾರೆ. ಜೊತೆಗೆ ಯಜಮಾನರನ್ನೂ ಕರೆತಂದಿದ್ದಾರೆ. ಇಂದು ನೀವು ಹೇಗಾದರೂ ಮಾಡಿ ಅವರನ್ನು ಸಂಬಾಳಿಸಲೇಬೇಕು" ಎಂದು ಹೇಳಿ ತಮ್ಮ ವಿಶ್ರಾಂತಿ ಕೊಠಡಿಗೆ ತೆರಳಿದರು.

ಪಾರ್ವತಮ್ಮ ದಂಪತಿಗಳು ಶ್ರೀಮಠದ ಒಳಪ್ರವೇಶ ಮಾಡುವ ಮೊದಲೇ ಕಸುವಿನಹಳ್ಳಿ ಶ್ರೀಗಳು ಹೊರಗೆ ಬಂದು, "ಇದೇನಮ್ಮ ಪಾರ್ವತಮ್ಮ ಇಷ್ಟು ಬೇಗ ಮಠಕ್ಕೆ ಬಂದಿದ್ದೀರಿ. ಏನಾದರೂ ತುರ್ತು ಇತ್ತೆ" ಎಂದರು. ಅದಕ್ಕೆ ಪಾರ್ವತಮ್ಮನವರು "ಅಯ್ಯೋ ಬುದ್ಧೀ, ತುರ್ತೇನೂ ಇಲ್ಲ. ಆದರೆ ನಾವು ಪ್ರತಿ ಬಾರಿ ಬಂದಾಗಲೂ ಶ್ರೀಗಳು ಮಠದಲ್ಲಿ ಇಲ್ಲ, ಹೊರಗೆ ಹೋಗಿದ್ದಾರೆ, ಪೂಜೆಗೆ ಹೋಗಿದ್ದಾರೆ ಎಂದೆಲ್ಲ ಹೇಳುತ್ತಿದ್ದೀರಿ. ಇಂದು ಧನುರ್ಮಾಸ, ಸೋಮವಾರ ಬೇರೆ, ಬೆಳಗ್ಗೆ ಶ್ರೀಗಳು

ಶ್ರೀಮಠದಲ್ಲಿಯೇ ಪೂಜೆ ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ ತಾನೆ. ಹಾಗಾಗಿ ಬುದ್ಧಿಯವರನ್ನು ಕಾಣಲು ಬಂದಿದ್ದೇವೆ. ಈವತ್ತು ಅವರನ್ನು ಕಂಡೇ ನಾವು ತೆರಳುವುದು" ಎಂದರು. "ಅಯ್ಯೋ ಅಷ್ಟೇ ತಾನೇ, ತಮ್ಮದು ಸ್ನಾನ ಪೂಜೆ ಆಗಿದೆಯೇ ಹೇಳಿ" ಎಂದರು ಕಸುವಿನಹಳ್ಳಿ ಶ್ರೀಗಳು. ಪಾರ್ವತಮ್ಮನವರು "ಅಲ್ಲ ಬುದ್ಧಿ, ಧನುರ್ಮಾಸ ಅಲ್ಲವೆ, ನಾವು ಬೆಳಗ್ಗೆಯೇ ಸ್ನಾನ ಪೂಜೆ ಮಾಡಿದ್ದೇವೆ" ಎಂದರು. "ಹಾಗಿದ್ದರೆ ಬನ್ನಿ, ಪ್ರಸಾದ ಮಾಡಿ ಮೊದಲು" ಎಂದರು. "ಪ್ರಸಾದ ಗಿಸಾದ ಏನೂ ಬೇಡಿ, ಮೊದಲು ಬುದ್ಧಿಯವರನ್ನು ನೋಡಬೇಕು" ಎಂದರು ಪಾರ್ವತಮ್ಮ. "ಅಯ್ಯೋ ಈಗ ತಾನೇ ಅವರು ಹೊರಗೆ ಹೋದರಲ್ಲ" ಎಂದರು ಶ್ರೀಗಳು. "ಅಲ್ಲ, ಇಷ್ಟು ಬೇಗ ಎಲ್ಲಿಗೆ ಹೋದರು! ಕಾರು ಬೇರೆ ಇಲ್ಲಿಯೇ ನಿಂತಿದೆಯಲ್ಲ" ಎಂದಾಗ ಕಸುವಿನಹಳ್ಳಿಯ ಶ್ರೀಗಳು ತಬ್ಬಿಬ್ಬಾದರು. ಸುಧಾರಿಸಿಕೊಂಡು "ಯಾರೋ ಬಂದಿದ್ದರು, ಅವರ ಜೊತೆ ಈಗ ತಾನೇ ಹೋದರು" ಎಂದರು.

ಪಾರ್ವತಮ್ಮನವರಿಗೆ ಬೇಸರ ಮತ್ತು ಅಳು ಎರಡು ಒಟ್ಟೊಟ್ಟಿಗೆ ಉಮ್ಮಳಿಸಿ ಬಂದಿತು. ಅವರ ಯಜಮಾನರು ಸಮಾಧಾನಪಡಿಸಿದರೂ ಅವರಿಗೆ ಸಮಾಧಾನವಾಗಲಿಲ್ಲ. ಏನು ಮಾಡಬೇಕೆಂದು ತಿಳಿಯದೆ ಕಸುವಿನಹಳ್ಳಿ ಶ್ರೀಗಳು ತವಕಿಸತೊಡಗಿದರು. ಪಾರ್ವತಮ್ಮನವರನ್ನು ಹೇಗೆ ಸಮಾಧಾನ ಮಾಡಬೇಕೆಂದು ತಿಳಿಯದೆ ದಿಕ್ಕೆಟ್ಟರು. ಸಾವರಿಸಿಕೊಂಡು "ಪಾರ್ವತಮ್ಮ, ಹೀಗೆಲ್ಲ ಮಠದಲ್ಲಿ ಅಳಬಾರದು. ನೀವೇ ಹೀಗೆ ಅತ್ತರೆ ಹೇಗೆ? ನೀವು ಮೊದಲು ಕುಳಿತುಕೊಳ್ಳಿ. ಸಮಾಧಾನ ಮಾಡಿಕೊಳ್ಳಿ" ಎಂದರೂ, ಒಂದೇಸಮನೆ ಅವರ ಕಂಬನಿ ಧಾರಾಕಾರವಾಗಿ ಹರಿಯುತಿತ್ತು. ಪಾರ್ವತಮ್ಮನವರು ಯಜಮಾನರು ಮತ್ತೆ ಮತ್ತೆ ಸಮಾಧಾನಿಸಿದರೂ ಪಾರ್ವತಮ್ಮನವರ ನೋವು ಕಡಿಮೆಯಾಗಲಿಲ್ಲ. ಕಸುವಿನಹಳ್ಳಿ ಶ್ರೀಗಳಿಗೆ ದಿಕ್ಕೇ ತೋಚದೆ, ಪಾಪಪ್ರಜ್ಞೆಯಲ್ಲಿ ಬಳಲಿದವರಂತೆ ನಿಂತರು. ಪಾರ್ವತಮ್ಮನವರು "ಅಲ್ಲ ಬುದ್ಧಿ, ನೀವು ಗುರುಗಳು ಹೇಳಿದ್ದಾರೆ ಅಂತ ಎಷ್ಟು ಬಾರಿ ನನ್ನ ಒಡವೆಯನ್ನು ತೆಗೆದುಕೊಂಡು ಬಂದು ಗಿರವಿ ಇಟ್ಟಿಲ್ಲ. ನಾನು ಕೊಟ್ಟಿಲ್ಲ ಹೇಳಿ. ಆದರೆ ಈ ಬಾರಿ ನೀವು ಒಂದು ವರ್ಷವಾದರೂ ಒಡವೆಯನ್ನು ವಾಪಸ್ಸು ನೀಡಿಲ್ಲ. ನನ್ನ ಒಡವೆ ನನಗೆ ಬೇಕು. ದಯಮಾಡಿ ಕೊಡಿ ಬುದ್ಧೀ" ಎಂದಳು. ಪಾರ್ವತಮ್ಮನವರು ಪರಮಪೂಜ್ಯ ಜಗದ್ಗುರುಗಳ ಪೂರ್ವಾಶ್ರಮದ ತಂಗಿ. ಶ್ರೀಮಠ ನಡೆಸುತ್ತಿದ್ದ ವಿದ್ಯಾರ್ಥಿನಿಲಯ, ಶಾಲಾಕಾಲೇಜುಗಳ ಅಧ್ಯಾಪಕರಿಗೆ ಸಕಾಲದಲ್ಲಿ ಸಂಬಳ ಕೊಡಲು ತೊಂದರೆಯಾದ ಸಂದರ್ಭದಲ್ಲಿ ಕಸುವಿನಹಳ್ಳಿಯ ಶ್ರೀಗಳನ್ನು ಕಳುಹಿಸಿ ಪಾರ್ವತಮ್ಮನವರ ಒಡವೆಗಳನ್ನು ತರಿಸಿ ಗಿರವಿ ಇಟ್ಟು ಬಂದ ಹಣದಿಂದ ಸಮಸ್ಯೆಯನ್ನು ಜಗದ್ಗುರುಗಳು ಪರಿಹರಿಸುತ್ತಿದ್ದರು. ಅನುಕೂಲವಾದಾಗ ಒಡವೆಗಳನ್ನು ಬಿಡಿಸಿ, ಕೊಟ್ಟು ಪಾರ್ವತಮ್ಮನವರಿಗೆ ಕಸುವಿನಹಳ್ಳಿ ಶ್ರೀಗಳವರ ಮೂಲಕವೇ ತೆಗೆದುಕೊಂಡು ತಲುಪಿಸಲು ವ್ಯವಸ್ಥೆ ಮಾಡುತ್ತಿದ್ದರು. ಎಲ್ಲವೂ

ಅನುಕೂಲವಾಗಿ ನಡೆದುಕೊಂಡು ಬರುತ್ತಿತ್ತು. ಆದರೆ ಈ ಬಾರಿ ತಂದು ಗಿರವಿ ಇಟ್ಟ ಒಡವೆಯನ್ನು ಬಿಡಿಸಿಕೊಳ್ಳಲು ಆಗದೆ ವರ್ಷ ದಾಟಿದ್ದರಿಂದ ಪಾರ್ವತಮ್ಮನವರು ಶ್ರೀಮಠಕ್ಕೆ ಎಡತಾಕಲಾರಂಭಿಸಿದರು. ಹಾಗೇ ಅವರು ಬಂದಾಗಲೆಲ್ಲ ಜಗದ್ಗುರುಗಳು ಪಾರ್ವತಮ್ಮನವರನ್ನು ನೇರವಾಗಿ ಭೇಟಿ ಮಾಡದೆ, ಯಾರ ಮೂಲಕವಾದರೂ ಸಾಗಹಾಕುತ್ತಿದ್ದರು. ಆದರೆ ಪಾರ್ವತಮ್ಮನವರ ಸಹನೆ ಮಿತಿ ಮೀರಿತ್ತು. ಜಗದ್ಗುರುಗಳು ಇಂದು ಸಿಕ್ಕೇ ಸಿಕ್ಕುತ್ತಾರೆ ಎಂಬ ಭರವಸೆಯಿಂದ ಬಂದಿದ್ದ ಆ ದಂಪತಿಗಳನ್ನು ಹೇಗೆ ಎದುರಿಸಬೇಕೆಂದು ಕಸುವಿನಹಳ್ಳಿ ಶ್ರೀಗಳಿಗೆ ಹೊಳೆಯಲಿಲ್ಲ.

ಇಷ್ಟು ಸಂಭಾಷಣೆ ನಡೆಯುವ ಹೊತ್ತಿಗೆ ಶ್ರೀಮಠದ ಒಳಗಡೆಯಿಂದ ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳು ಹೊರಬಂದರು. ಅವರು ಕಾಲಿಗೆರಗಿದ ಪಾರ್ವತಮ್ಮ ದಂಪತಿಗಳನ್ನು ನೋಡಿದರು. ಅವರಿಗೆ ಪಾರ್ವತಮ್ಮನವರ ದುಃಖದ ಕಾರಣ ತಿಳಿದಿತ್ತು. ಕಸುವಿನಹಳ್ಳಿಯ ಶ್ರೀಗಳ ಮುಖವನ್ನು ನೋಡಿ ಮಗದೊಮ್ಮೆ ಪಾರ್ವತಮ್ಮ ದಂಪತಿಗಳ ಮುಖವನ್ನು ನೋಡಿದರು. “ಯಾಕೆ ಅಳ್ತಾ ಇದ್ದೀಯ ಪಾರ್ವತಮ್ಮ, ಏನಾಗಿದೆ ನಿನಗೆ” ಎಂದರು. ಶಿವಪ್ರಭುಸ್ವಾಮಿಗಳ ಎದುರು ಯಾರೂ ಗಟ್ಟಿಯಾಗಿ ಮಾತನಾಡುತ್ತಿರಲಿಲ್ಲ. ಅವರು ತುಂಬ ಕಟುವಾಗಿ ಮಾತನಾಡುತ್ತಿದ್ದರೆಂಬ ಪ್ರತೀತಿಯಿತ್ತು. ಆದರೆ ಆ ಕಟುನುಡಿಯಲ್ಲಿ ಪ್ರಖರ ಸತ್ಯ ಮಾತ್ರವಿರುತ್ತಿತ್ತು ಅಥವಾ ಅದರ ಕಾರಣದಿಂದಲೇ ಅವರ ಮಾತು ಕೊಂಚ ಕಟುವಾಗಿರುತ್ತಿತ್ತು. ಸುಧಾರಿಸಿಕೊಂಡ ಪಾರ್ವತಮ್ಮ, “ತಮಗೆ ಗೊತ್ತಿಲ್ಲವೆ ಬುದ್ಧಿ, ನನ್ನ ಒಡವೆ” ಎಂದಷ್ಟೆ ಹೇಳಿದರು. ವಿಷಯವನ್ನು ಮೊದಲೇ ತಿಳಿದಿದ್ದ ಶಿವಪ್ರಭುಸ್ವಾಮಿಗಳು ಕಸುವಿನಹಳ್ಳಿ ಶ್ರೀಗಳ ಕಡೆ ತಿರುಗಿ “ಅಲ್ಲ ಸ್ವಾಮಿಗಳೇ, ಒಡವೆಯನ್ನು ಬಿಡಿಸಿಕೊಡಲು ಆಗದೆ ಅವು ಹರಾಜಾದವು ಎಂದು ಹೇಳಲಿಲ್ಲವೆ” ಎಂದರು. ಕಸುವಿನಹಳ್ಳಿ ಶ್ರೀಗಳ ಮುಖ ವಿವರ್ಣವಾಯಿತು. ಪಾರ್ವತಮ್ಮನವರಿಗೆ ದಿಗ್ಭ್ರಮೆಯಾಯಿತು. ದಂಪತಿಗಳು ಪರಸ್ಪರ ಮುಖ ನೋಡಿಕೊಂಡು “ಅಯ್ಯೋ ನನ್ನ ಒಡವೆಯೆಲ್ಲ ಹೋಯ್ತು. ದೇವರೇ ನನ್ನ ಗತಿಯೇನು, ನಾನೇನು ಮಾಡಲಿ, ನಿಮ್ಮ ನಂಬಿ ನನ್ನ ಒಡವೆ ಕೊಟ್ಟು ಕೆಟ್ಟೆ” ಎಂದು ರೋದಿಸಲು ಆರಂಭಿಸಿದಳು. ಪಾರ್ವತಮ್ಮನವರ ಮಾತು ಕಸುವಿನಹಳ್ಳಿಯ ಸ್ವಾಮಿಗಳು ಮತ್ತು ಶಿವಪ್ರಭುಸ್ವಾಮಿಗಳ ಮನಸ್ಸನ್ನು ಕಲಕಿತು. ಪಾರ್ವತಮ್ಮನವರನ್ನು ಹೇಗೆ ಸಮಾಧಾನ ಮಾಡಬೇಕೆಂಬುದು ತಿಳಿಯಲಿಲ್ಲ. ಆಗ ಪಾರ್ವತಮ್ಮನವರ ಯಜಮಾನರೇ ಪಾರ್ವತಮ್ಮನವರನ್ನು ಸಮಾಧಾನ ಮಾಡಲು ತೊಡಗಿದರು.

ಈ ಎಲ್ಲ ಮಾತುಗಳೂ ವಿಶ್ರಾಂತಿ ಕೊಠಡಿಯಲ್ಲಿದ್ದ ಶ್ರೀಗಳವರ ಕಿವಿಗೆ ಬೀಳುತ್ತಿದ್ದವು. ಶ್ರೀಗಳಿಗೂ ಮನಸ್ಸಿಗೆ ವ್ಯಾಕುಲವೆನಿಸಿತು. ಕಣ್ಣುಗಳು ಆರ್ದ್ರವಾದವು. ಹೊರಗೆ ಬಂದರು. ಜಗದ್ಗುರುಗಳನ್ನು ಕಂಡು ಪುನಃ ಅಳುತ್ತಲೇ ಪಾರ್ವತಮ್ಮನವರು, ಪರಮಪೂಜ್ಯರ ಕಾಲಿಗೆರಗಿದರು. “ಅಳಬೇಡ ಪಾರು, ನಾನೇನು ನಿನ್ನ ಒಡವೆಯನ್ನು ಲಪಟಾಯಿಸಬೇಕು

ಎಂದು ಗಿರವಿ ಇಡಲಿಲ್ಲ. ನೌಕರರಿಗೆ ಮೂರು ತಿಂಗಳು ಸಂಬಳ ಕೊಟ್ಟಿರಲಿಲ್ಲ. ಅವರು ಜೀವನ ನಡೆಸುವುದು ಹೇಗೆ ಎಂಬ ಯೋಚನೆ ಹುಟ್ಟಿತು. ಅದರಿಂದಾಗಿ ಹಣಕ್ಕೆ ನಿನ್ನ ಒಡವೆಗಳನ್ನು ಗಿರವಿ ಇಟ್ಟೆ. ಆದರೆ ಸಕಾಲದಲ್ಲಿ ಹಣ ಬರಲಿಲ್ಲ. ಬಂದ ಹಣವೂ ಹಾಸ್ಟಲಿನ ವಿದ್ಯಾರ್ಥಿಗಳ ಊಟಕ್ಕೆ ಸಾಲದಾಗುತ್ತಿತ್ತು. ಈ ಗಲಾಟೆಯಲ್ಲಿ ನಮಗೆ ಒಡವೆಯ ಬಗ್ಗೆ ಗಮನವೇ ಹೋಗಲಿಲ್ಲ. ಹರಾಜು ನೋಟೀಸನ್ನೂ ಗಮನಿಸಲಿಲ್ಲ" ಎಂದರು. "ಅಯ್ಯೋ, ನನ್ನ ಒಡವೆ ಹೋಯ್ತು, ಇನ್ನು ನನ್ನ ಗತಿಯೇನು" ಎಂದರು ಪಾರ್ವತಮ್ಮ. "ದುಃಖಪಡಬೇಡ ಪಾರು, ನನಗೆ ಮಕ್ಕಳ ಗತಿಯ ಮುಂದೆ ಬೇರಾವ ಗತಿಯೂ ಮುಖ್ಯವೆಂದು ತೋರಲಿಲ್ಲ. ನನ್ನಿಂದ ತಪ್ಪಾಗಿದೆ, ಕ್ಷಮಿಸು" ಎಂದರು. ಜಗದ್ಗುರುಗಳು ಕ್ಷಮೆ ಕೇಳಿದ್ದು ಅಲ್ಲಿನ ಯಾರಿಗೂ ಇಷ್ಟವಾಗಲಿಲ್ಲ. ಪಾರ್ವತಮ್ಮನವರ ಅಳು ನಿಂತಿರಲಿಲ್ಲ. "ತಾವು ಕ್ಷಮೆ ಕೇಳಬಾರದು ಬುದ್ಧಿ, ಅದರ ಪಾಪ ನನಗೆ ಸುತ್ತಿಕೊಳ್ಳುತ್ತದೆ" ಎಂದು ಕಾಲಿಗೆರಗಿದಳು. ಆಗ ಕಸುವಿನಹಳ್ಳಿ ಶ್ರೀಗಳು "ಪಾರ್ವತಮ್ಮ, ನಿಮ್ಮ ಒಡವೆಗಳು ಒಂದು ಒಳ್ಳೆಯ ಉದ್ದೇಶಕ್ಕೆ ಬಳಕೆಯಾಗಿವೆ ಎಂಬ ವಿಚಾರವನ್ನು ಅರ್ಥಮಾಡಿಕೊಳ್ಳಿ. ಹಸಿದ ಮಕ್ಕಳ ಹೊಟ್ಟೆ ತುಂಬಿಸುವುದರ ಮುಂದೆ ನಿಮ್ಮ ಆಭರಣ ಏನೂ ಅಲ್ಲ" ಎಂದರು. ಪಾರ್ವತಮ್ಮನವರ ಯಜಮಾನರು ಅಷ್ಟರಲ್ಲಿ ವಿದ್ಯಾರ್ಥಿಯೊಬ್ಬ ಓಡೋಡುತ್ತಾ ಬಂದು ಜಗದ್ಗುರುಗಳ ಕಾಲಿಗೆರಗಿ "ಬುದ್ಧಿ ನಾನು ಈ ಸಾರಿ ಫಸ್ಟ್ ಕ್ಲಾಸ್‌ನಲ್ಲಿ ಪಾಸಾದೆ" ಎಂದು ಸಂಭ್ರಮದಿಂದ ಹೇಳಿದನು. ಆತನನ್ನು ತೋರಿಸಿ ಜಗದ್ಗುರುಗಳು, "ನೋಡು ಪಾರ್ವತಮ್ಮ. ಇದು ನಿನ್ನ ನಿಜವಾದ ಒಡವೆ. ಇದು ಎಂದೂ ಕೆಡದ ಆಭರಣ" ಎಂದು ಸಮಾಧಾನ ಹೇಳಿದರು.

□

ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ.
ಬಂಧನಕ್ಕೆ ಬಂದ ಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ.
ಕಂದಾ, ನೀನಿತ್ತ ಬಾ, ಎಂದು
ನೀವು ನಿಮ್ಮಂದವ ತೋಱಯ್ಯಾ, ಚನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**

# ಶಬರಶಂಕರ ವಿಲಾಸ-ಟೀಕು

**ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು**

**ಚ॥** ಇನಿಯನೊಳಾದ ಬಲ್ಮುಳಿಸಿನಿಂ ಮುಗಿಲಂ ಮರೆಗೊಳ್ವುದುಂ ಪಳ ।
ಚ್ಚನೆನೆಳೆಮಿಂಚು ಕಣ್ಪೊಣರೊಳುಣ್ಮೆ ಛಟಚ್ಛಟಿಲೆಂದುಮೇಘನಿ ।
ಸ್ವನಮದು ಪೊಣ್ಮೆ ಕಣ್ಣಿರಿದು ಚುಚ್ಚೆ ವಿಯಚ್ಚರಿ ಭೋಂಕನೆಯ್ದಿ ನ ।
ಲ್ಲನನಮರ್ದಪ್ಪಿದಳ್ ಪೊಗಳ್ವಿನಂ ಮುಗಿಲ ಬೆರಲೆತ್ತಿಮನ್ಮಥಂ ॥ ೪೬ ॥

**ಟೀಕ** ॥ ವಿಯಚ್ಚರಿ – ಗಗನಚಾರಿಣಿಯಾದ ದೇವಸ್ತ್ರೀಯು (ಗಂದರ್ವರು), ಇನಿಯನೊಳು – ಪ್ರಿಯಕರನಲ್ಲಿ, ಆದ – ಉಂಟಾದ, ಬಲ್ಮುಳಿಸಿನಿಂ – ಅಧಿಕ ಕೋಪದಿಂದ, ಮುಗಿಲಂ – ಮೋಡವನ್ನು, ಮರೆಗೊಳ್ವುದುಂ – ಮರೆಯಾಗಿ ಮಾಡಿಕೊಳ್ಳುತಲು, ಎಳೆಮಿಂಚು – ಕೋಲ್ಮಿಂಚು, ಪಳಚ್ಚನೆ – ಪಕ್ಕನೆ, ಕಣ್ಪೊಣರೊಳು – ರೆಪ್ಪೆಯ ಬಳಿಯಲ್ಲಿ, ಉಣ್ಮೆ – ಮೂಡಲು, ಮೇಘನಿಸ್ವನ – ಮೋಡದಿಂದ ಉಂಟಾದ ಶಬ್ದ (ಗುಡುಗು), ಚಿಟಿಚಿಟಿಲೆಂದು, ಪೊಣ್ಮೆ – ವ್ಯಾಪಿಸಲು, ಕಣಿರಿದು ಚುಚ್ಚೆ – ಆ ಬೆಳಕು ತನ್ನ ಕಣ್ಣಿಗೆ ಚುಚ್ಚಲಾಗಿ, ಭೋಂಕನೆ – ಬೇಗನೆ, ಎಯ್ದಿ – ಪ್ರಣಯಕೋಪವನ್ನು ಬಿಟ್ಟುಬಂದು, ಮನ್ಮಥಂ – ಕಾಮನು, ಬೆರಲೆತ್ತಿ – ಬೆರಳನ್ನು ಎತ್ತಿಕೊಂಡು, ಮುಗಿಲಂ – ಮೋಡವನ್ನು, ಪೊಗಳ್ವಿನಂ – ಹೊಗಳುವಂತೆ, ಅಮರ್ದು ಅಣಿಯಾಗಿ ನಲ್ಲನಂ – ಪ್ರಿಯಕರನನ್ನು ಗಾಢಾಲಿಂಗನ ಮಾಡಿಕೊಳ್ಳಲು, ಅಪ್ಪಿದಳ್–ಆಲಿಂಗಿಸಿದಳು.

**ತಾ॥** ಮೇರುವಿನಲ್ಲಿ ವಿಹರಿಸುವ ಖೇಚರ ದಂಪತಿಗಳೊಳಗೆ ಪ್ರಣಯಕಲಹದಿಂದ ಹೆಂಗಸು ಗಂಡನನ್ನು ಬಿಟ್ಟುಹೋಗಿ ಮೋಡದ ಹಿಂಗಡೆಯಲ್ಲಿ ಅವಿತುಕೊಂಡಿದ್ದಳು. ಈ ಸ್ತ್ರೀಪುರುಷರನ್ನು ಮರಳಿ ಸೇರಿಸಬೇಕೆಂದು ಕಾಮನು ಯೋಚಿಸುತ್ತಿದ್ದನು. ಅಷ್ಟರಲ್ಲಿ ಆ ಮೋಡದೊಳಗೆ ಮಿಂಚು ಗುಡುಗು ಹುಟ್ಟುತ್ತಲು, ಅವಳು ಹೆದರಿಕೊಂಡು ಗಂಡನ ಮೇಲಣ ಸಿಟ್ಟನ್ನು ಬಿಟ್ಟುಬಂದು ತಾನಾಗಿ ಗಂಡನನ್ನು ಅಪ್ಪಿಕೊಂಡಳು. ಮೇಘೋದಯವಾದ್ದರಿಂದ ತನ್ನ ಉದ್ದೇಶವು ನೆರವೇರಿತೆಂದು ಕಾಮನು ಮೇಘವನ್ನು ಕೊಂಡಾಡಿದನು. ಚಂಪಕಮಾಲಾವೃತ್ತ ॥ ಶೃಂಗಾರರಸ ॥

**ಚ॥** ನಗಶಿಖರಾಗ್ರದಿಂ ಸರಭಸಂ ನೆಗೆವಚ್ಚರಿಯಂ ನತಸ್ತನಂ ।
ಮಿಗೆ ಮುಗಿಲಂ ಪಳಂಚಲೆದು ಪೊಯ್ಯೆ ಕಳೇವರಮೆಲ್ಲನುರ್ಗೆನೊಂ
ದೊಗೆದಿಳಿವಂಬು ಕಂಬನಿವೊಲಾಗಿರೆ ಮೇಣುದುಶೋಕರಾವಮಂ
ನೆಗಳ್ದುದೊ ತಳ್ವದೆಂಬಿನಮಳಂಬಮದೊಪ್ಪುಗುಮಂಬುದಸ್ವನಂ ॥

**ಟೀಕ** ॥ ನಗಶಿಖರಾಗ್ರದಿಂ – ಬೆಟ್ಟದ ತುತ್ತ ತುದಿಯಿಂದ, ಸರಭಸಂ– ಬೇಗನೆ, ನೆಗೆವ – ಹಾರುವ, ಅಚ್ಚರಿಯು – ಅಪ್ಸರೆಯು, ಉನ್ನತಸ್ತನಂ – ತುಂಗ ಕುಚವು, ಮಿಗೆ – ಅತಿಶಯವಾಗಿ, ಮುಗಿಲಂ – ಮೇಘವನ್ನು, ಪಲಂಚಿ – ತಾಕಿ, ಅಲೆದು, ಕದಲಿಸಿ, ಪೊಯ್ಯೆ – ಹೊಯ್ಯಲೂ, ಕಳೇಬರಮೆಲ್ಲ – ಮೇಘದ ಮೈಯಲ್ಲವು, ನುರ್ಗೆ – ಮುರಿಯಲು, ನೊಂದು – ನೋವು ತಟ್ಟಿ, ಒಗೆದು – ಹೊರಹೊಮ್ಮಿ, ಇಳಿವ – ಸೋರುತ, ಅಂಬು – ನೀರು, ಕಂಬನಿವೊಲಾಗಿರೆ – ಕಣ್ಣೀರಿನ ಹಾಗೆ ಆಗಿರಲಾಗಿ, ಮೇಣಾದುತ್ತು, ಅದು ಆ ಮೇಘವು, ತಳ್ವದೆ – ತಡಮಾಡದೆ, ಶೋಕರಾವಮಂ – ದುಃಖಧ್ವನಿಯನ್ನು, ನೆಗಳ್ದುದೋ – ಮಾಡಿತೋ, ಎಂಬಿನಂ – ಎಂಬಂತೆ, ಅಳುಂಬಂ – ಅತಿಶಯವಾಗಿ ಅದು – ಆ, ಅಂಬುದಸ್ವನಂ – ಮೇಘಧ್ವನಿಯು, ಒಪ್ಪುಗುಂ –ಅಂದವಾಗಿರುವದು ॥

**ತಾ**॥ ಹೇಮಾದ್ರಿಶಿಖರದಲ್ಲಿ ದೇವಸ್ತ್ರೀಯು ಮೇಘಮಾರ್ಗದೊಳು ಹಾರಿ ಹೋಗುವಾಗ ಗುಡುಗುಮಳೆಯು ಉಂಟಾಗುತ್ತಿರಲು ಕವಿಯು ಅದಕ್ಕೆ ಕಾರಣವನ್ನು ಕಲ್ಪಿಸಿ ವರ್ಣಿಸಿದನು. ಏನೆಂದರೆ, ಅಪ್ಸರಸಿಯ ಕಠಿನವಾದ ತುಂಗಸ್ತನದ ತಾಡನದಿಂದ ಮೇಘವು ಚದರಿ ನೊಂದು ಅಳುತ್ತ ಅದರ ಕಣ್ಣೀರ ಮಳೆ, ಗುಡುಗೇ ಅಳುವಿನ ಕೂಗೇ ಎಂಬ ಹಾಗಿತ್ತು, ಹೇತೋತ್ಪ್ರೇಕ್ಷಾಲಂಕಾರವು. ಇದರಿಂದ ಅಪ್ಸರಸ್ತ್ರೀಯ ಘನಸ್ತನದ ಕಾಠಿಣ್ಯವು ಅತಿಶಯವಾದೆಂದು ಅಧಿಕವಾಗಿ ವರ್ಣಿಸಲ್ಪಟ್ಟಂತಾಗುವದು. ಇದೇ ವ್ಯಂಗ್ಯವು ಇದರಲ್ಲಿ ಅತಿಶಯೋಕ್ತಿ ಮಿಶ್ರವಾಗಿರುವದು. ॥ ಚಂಪಕಮಾಲಾವೃತ್ತ ॥ ೪೮ ॥

**ಮ**॥ ಸುರಭೂಜಾತದ ತಳ್ತ ತಂಣೆಳಲ ಚಂದ್ರೇದ್ರಾಶ್ಮಪೀಠಂಗಳೋ ।
ಳ್ತರದಿಂ ಮಂಡಿಸಿನೋಡುವಾಡುವ ಲಸತ್ಸಂಗೀತವಂ ಪಾಡುವಾ
ದರದಿಂದೊಳ್ನುಡಿದೋರ್ಪ ಸಿಂಗರಿಸಿಪ ನಾಲೀಲೆ ಕೈಗಣ್ಮಿ ಕಿಂ ।
ಪುರುಷರ್ಕಿಂನರರ್ಚರನರ್ಬಿನದಿಪರ್ತತ್ಕಂಧರಸ್ಥಾನದೋಳ್ ॥ ೪೮ ॥

**ಟೀಕ** ॥ ಸುರಭೂಜಾತದ – ದೇವವೃಕ್ಷದ, ತಳ್ತ – ದರಡಿದ, ತಣ್ಣೆಳಲ – ತಂಪು ಭೂಮಿಯ (ಶೀತಚ್ಛಾಯೆಯುಳ್ಳ), ಚಂದ್ರೇದ್ರಾಂಶ್ಮ ಪೀಠಂಗಳೋಳ್ – ಚಂದ್ರಕಾಂತ ಶಿಲೆಗಳ, ಇಂದ್ರನೀಲಮಣಿಗಳ, ಗದ್ದುಗೆ – ಜಗುಲಿ ಮುಂತಾದ ಆಸನಗಳಲ್ಲಿ, ತರದಿಂ – ಸೊಗಸಿನಿಂದ, ಮಂಡಿಸಿ – ಕುಳಿತು, ನೋಡುವ (ಕಟಾಕ್ಷಿಸುವ), ಆಡಿಸುವ – ಕುಣಿದು ವಿನೋದಿಸುವ, ಲಸತ್ಸಂಗೀತವಂ ಮಾಡುವ – ಸೊಗಸಾದ ಗಾನವಂ ಹಾಡುವ, ಆದರೆಯಿಂ – ಅಕ್ಕರೆಯಿಂದ, ಒಳ್ನುಡಿದೋರ್ಪ್ಪಂ – ಮಧುರವಚನಗಳನ್ನು ನುಡಿಯುವ, ಸಿಂಗರಿಪ – ಶೃಂಗಾರಾಲಂಕಾರಗೊಳ್ಳುವ, ನಾನಾ ಲೀಲೆ – ಹಲವು ಬಗೆಯಾದ ವಿಲಾಸಗಳು, ಕೈಗಣ್ಮಿ – ಅನುಕೂಲಿಸಿ, ಕಿಂಪುರುಷರ್ – ಅಶ್ವಮುಖವು, ಮನುಷ್ಯ ದೇಹವುಳ್ಳ ದೇವತೆಗಳು, ಕಿನ್ನರರ್ – ಮನುಷ್ಯ ಮುಖವು, ಅಶ್ವದೇಹವುಳ್ಳ

ದೇವತೆಗಳು, ಅಚ್ಚರರ್ – ಅಪ್ಸರರೆಂಬ ದೇವತೆಗಳೂ, ತತ್ಕಂಧರಾಸ್ಥಾನದೋಳ್ – ಆ ಮೇರುವಿನ ತಪ್ಪಲಿನಲ್ಲಿ ಬಿನದಿಪರ್ – ವಿನೋದಿಸುವರು.

**ತಾ||** ಸುರಗಿರಿಯ ತಪ್ಪಲಿನಲ್ಲಿ ಕಲ್ಪವೃಕ್ಷಗಳ ತಂಪಾದ ನೆರಳಿನೊಳಗೆ, ಚಂದ್ರಕಾಂತ ಶಿಲೆಗಳ ಮಂಚಗಳಲ್ಲಿಯೂ ಇಂದ್ರನೀಲಮಣಿಗಳ ಜಗುಲಿಗಳಲ್ಲಿಯೂ, ವಿದ್ಯಾಧರಾಪ್ಸರೋಗಂಧರ್ವ, ಕಿಂನ್ನರಕಿಂಪುರುಷಾದಿ ದೇವಭೇದಗಳವರು ವಿನೋದವಾಗಿ ಕುಳಿತು ನೃತ್ಯಗೀತಾದಿಗಳಿಂದ ಸಂತೋಷಿಸುತ್ತಿರುವರು. ಮತ್ತೇಭಣವಿಕ್ರೀಡಿವೃತ್ತ ಸ, ಬ, ರ, ನ, ಮ, ತ, ಆರು ಗಣಗಳು, ಲಘುಗುರು ಸೇರಿ ಪದಕ್ಕೆ ೨೦ ಅಕ್ಷರವುಳ್ಳ ಕೃತಿ ಛಂದಸ್ಸಿನಲ್ಲಿ ಹುಟ್ಟಿಯಿರುತ್ತೆ || ಉದಾತ್ತಾಲಂಕಾರವು || ೪೮ ||

**ಚಂ||** ಜವನ ಲುಲಾಯಮಿಂದಿರನ ದಂತಿ ಮುಕುಂದನಪರ್ದು ಪದ್ಮಸಂ ।
ಭವನರಸಂಚೆದುರ್ಗ್ಗಿಯಮೃಗಾಧಿಪನಿಂದುವ ಪೇರ್ಮೊಲಂ ಮನೋ ।
ಭವನ ಶುಕಂ ಕುಮಾರನ ಕಲಾಪಿ ಸಮೀರನಪುಲ್ಲೆ ಸಂತತೋ ।
ತ್ಸವಯುತಮೊಪ್ಪುಗುಂ ವಿಹರಿಸುತ್ತ ತದೀಯ ತಟೀವನಂಗಳೋ || ೪೯ ||

**ಟೀಕ||** ಜವನ – ಯಮನ, ಲುಲಾಯಂ – ಕೋಣನು, ಇಂದಿರನ – ಇಂದ್ರನ, ದಂತಿ – ಆನೆಯಾದ ಐರಾವತವು, ಮುಕುಂದನ – ವಿಷ್ಣುವಿನ, ಪರ್ದು – ಹದ್ದಾದ ಗರುಡನು, ಪದ್ಮಸಂಭವನ – ಕಮಲಜನಾದ ಬ್ರಹ್ಮನ, ಅರಸಂಚೆ– ರಾಜುಹಂಸೆಯು, ದುರ್ಗಿಯು – ದುರ್ಗಾದೇವಿಯಾದ ಶಿವಶಕ್ತಿಯು; ಮೃಗಾಧಿಪಂ – ಸಿಂಹವು, ಇಂದುವ – ಚಂದ್ರನ, ಪೇರ್ಮೊಲಂ – ಮಹಾಶಶವು, ಮನೋಭವನ – ಮನಸ್ಸಿನಲ್ಲಿ ಹುಟ್ಟುವ ಕಾರಣ, ಶುಕಂ – ಗಿಳಿಯು, ಕುಮಾರನ – ಷಣ್ಮುಖನ, ಕಲಾಪಿ – ನವಿಲು, ಸಮೀರನ – ವಾಯುವಿನ, ಪುಲ್ಲೆ – ಜಿಂಕೆಯು, ತಟೀವನಂಗಳೋಳ್ – ಆ ಮೇರುಪ್ರಾಂತದ ಕಾಡುಗಳಲ್ಲಿ, ಸಂತತೋತ್ಸವಯುತಂ – ಯಾವಾಗಲೂ ಮರುವಣಿಗಿಯಿಂದ ಕೂಡಿದ್ದಾಗಿ, ವಿಹರಿಸುತ್ತೆ – ವಿನೋದಿಸುತ್ತಲೆ, ಒಪ್ಪುಗುಂ– ಚನ್ನಾಗಿರುವವು ||

**ತಾ** || ಮೇರುಗಿರಿಯಲ್ಲಿ ದೇವತೆಗಳ ವಾಹನಗಳೆ ಆಡುತ್ತಿರುವವು. ಹೀಗೆ ಹೇಳಿದ್ದರಿಂದ ದೇವತೆಗಳೆಲ್ಲರೂ ಹೇಮಾದ್ರಿಯಲ್ಲಿಯೇ ವಾಸಗೊಂಡಿರುವರೆಂದು ಭಾವವು || ಚಂಪಕಮಾಲಾವೃತ್ತ || ೪೯ ||

**ಉ||** ತಂಗದಿರ್ಗ್ಗಲ್ಲ ಗಹ್ವರದ ಚಂದಳಿರ್ವಾಸಿನೊಳತ್ತಮಿತ್ತ ಚ ।
ಲ್ವಿಂಗೆಡೆಯಾಗಿ ಸೂಸಿದಲರುಂ ನರುದಂಬುಲಮುಂ ಮೃಗೋದ್ಭವಂ ।
ಸಂಗಳಿರ್ದ ಕುಂಕುಮಪರಾಗಮುಮಾಣ್ದರ ಪುನ್ಮದಾಳಿಯುಂ ।
ಪಿಂಗದೆ ದೇವದಂಪತಿಯ ಕೂಟಮನೇಂ ಪಿಸುಣಾಡಲಾರ್ತವೋ || ೫೦ ||

**ಟೀಕ||** ತಂಗದಿರ್ಗಲ್ಲ – ಚಂದ್ರಕಾಂತ ಶಿಲೆಯ, ಗಹ್ವರದ – ಗವಿಯ, ಚಂದಳಿರ್ವಾಸಿನೊಳು – ಕೆಂಪುಚಿಗುರುಗಳ ಹಾಸಿಗೆಯಲ್ಲಿ, ಅತ್ತಮಿತ್ತ – ಆಕಡೆ ಈಕಡೆ

ಯಲ್ಲಿಯು, ಚಲ್ವಿಂಗೆ – ಸೊಗಸಿಗೆ, ಎಡೆಯಾಗಿ – ಆಸ್ಪದವಾಗಿ, ಸೂಸಿದ – ಸುರಿದ, ಅಲರುಂ – ಪುಷ್ಪವು, ನರುದಂಬುಲಮು – ಪರಿಮಳಿಸುವ ತಾಂಬೂಲವು, ಮೃಗೋದ್ಭವಂ – ಕಸ್ತೂರಿ, ಸಂಗಳಿಸಿರ್ದ – ಬೆರತಿರುವ, ಕುಂಕುಮಪರಾಗಮಂ– ಕುಂಕುಮಕೇಸರದ ಪುಡಿಯು, ಆಣ್ಮರ – ಪ್ರಿಯಪುರುಷರ, ಪುನ್ಮದಾಳಿಯುಂ – ಪುನುಗಿನ ಪಂತಿಯೂ, ಪಿಂಗದೆ–ಕಡಿಮೆಯಾಗದೆ, ದೇವದಂಪತಿಯ ಕೂಟಮಂ – ದೇವಸ್ತ್ರೀಪುರುಷರ ಸೇರಿಕೆಯನ್ನು, ಏಂ ಪಿಷುಣಾಡಲಾರ್ತವೊ – ಚಾಡಿಕೋರ ಮಾತುಗಳನ್ನಾಡುವರು ಸಬ್ಬರಲ್ಲ. ॥

**ತಾ॥** ಸುರಾಲಯಗಿರಿಯಲ್ಲಿ ಚಂದ್ರಕಾಂತದ ಕಲ್ಲಿನ ಗವಿಯೊಳಗೆ ಕೆಂಜಿಗುರುಗಳ ಹಾಸಿಗೆಯೊಂದು ಕಡೆ ಧರಿಸಿದ್ದ ಹೂಗಳು ಕ್ರೀಡಾಕಾರದಲ್ಲಿ ಉದಿರಿರುವದು ಕೆಲವು ಕಡೆ, ಗಂಧ ಪರಿಮಳ ದ್ರವ್ಯಗಳು ಉದುರಿರುವದು ಕೆಲವು ಕಡೆ, ಇರುವುದರಿಂದ ಅವುಗಳನ್ನು ನೋಡಿದರೆ ಈ ಸ್ಥಲಗಳಲ್ಲಿ ದೇವದಂಪತಿಗಳು ಸುರತೋತ್ಸವಾದಿ ಭೋಗಗಳನ್ನು ಅನುಭವಿಸಿರಬಹುದೆಂದು ತೋರುತ್ತೆ. ಆದ್ದರಿಂದ ಆ ಗಿರಿಯು ದೇವಕ್ರೀಡಾಯೋಗ್ಯವೆಂದು ಫಲಿತಾರ್ಥವು. ಕಾರಣಗಳು, ಕಾರ್ಯಗಳನ್ನು ಸೂಚಿಸುವವೆಂಬುವದರಿಂದ ತರ್ಕಾಲಂಕಾರವು ಭೋಗಸಾಧನೆಗಳ, ಭೋಗಸೂಚಕತ್ವವನ್ನು ಕ್ಷುದ್ರಗುಣವಾಗಿ ಬಂಣಿಸಿದರಿಂದ ಕವಿಪ್ರೌಢೋಕ್ತಿಸಿದ್ಧವಾದ ಆರೂಪಾಲಂಕಾರವು ತೋರುತಿದೆ. ॥ ಚಂಪಕಮಾಲಾವೃತ್ತ ॥

**ಚ॥** ತಳಿತಲರುಳ್ದಲರ್ಮಿಡಿಪೊದಳ್ದೆಳೆಗಾಯ್ಕಸುದೋರೆ ದೋರೆವ ।
ಣ್ಕಳಿತೆನೆವಚ್ಚಪಣ್ಪಿಡಿದುಬೀಗಿದಬಿಣ್ಗೊನೆಯಂತುಬಾಗಿಸಾ॥
ರ್ದುಳಿಗಿಳಿವಿಂಡುಕೋಗಿಲೆಗಳಬ್ಬರದೆಳ್ತರವಾಂತಶಾಖೆಸಂ ।
ಗಳಿಸಿದನೋಹಪ್ರಕರದಿಂ ಬಗೆಗೊಂಡುದು ಶೈಲನಂದನಂ ॥ ೫೧ ॥

**ಟೀಕ॥** ತಳಿತಲರ್ – ಚಿಗುರು, ಹುವ್ವು ವುಳ್ದಲರ್ – ಮೂಡಿದ ಹೂವು, ಮಿಡಿ – ಮಗರು, ಪೊಳಳ್ದ – ಯಳೆಗಾಯಿ ವ್ಯಾಪಿಸಿದ, ಕಸುಗಾಯಿ – ನಸುದೋರೆ – ಕೊಂಚ ರಸವಿಟ್ಟಕಾಯಿ, ದೋರೆವಣ್ ಕಳಿತು – ಕೊಂಚ ಮಾಗಿದ ಹಣ್ಣು ಕಳಿತು, ಅಚ್ಚಪಣ್ – ಮಾಗಿ ಶೋಭಿಸುವ ಅಪ್ಪಟವಾದ ಹಣ್ಣು, ಇಡಿದು – ತುಂಬ, ಬೀಗಿದ – ತಾನಾಗಿ ಬೀತುಕೊಂಡ, ಬಿಣ್ಗೊನೆಯ– ಬಿಗಿಯಾಗಿರುವ ಗೊಂಚಲನ್ನು, ಆಂತು– ಧರಿಸಿ, ಬಾಗಿ – ಬಗ್ಗಿ, ಸಾರ್ದುಳೀ – ತೊಂಡುಗೆಡುವ, ಗಿಳಿವಿಂಡು – ಗಿಣಿಗಳ ಹಿಂಡಿನ, ಕೋಗಿಲೆಗಳ, ಕೆಂಗಂಣ ಹಕ್ಕಿಗಳ, ಅಬ್ಬರದ – ಕೂಗಿನ, ಏಳ್ತೆರೆವ – ಅತಿಶಯವನ್ನು, ಆಂತ – ಧರಿಸಿದ, ಶಾಖೆ – ಕೊಂಬೆಗಳ, ಸಂಗಳಿಸಿದ – ಕೂಡಿರುವ, ಅನೋಹ ವೃಕ್ಷಗಳ, ಪ್ರಕರದಿಂ – ಗುಂಪಿನಿಂದ, ಶೈಲನಂದನಂ – ಬೆಟ್ಟದಲ್ಲಿರುವ ವನವು, ಬಗೆಗೊಂಡುದು – ಮನೋಹರವಾಯಿತು ॥

**ತಾ॥** ಮೇರುಗಿರಿಯ ತೋಪುಗಳಲ್ಲಿ ಮರಗಳು, ಗಿಡಗಳು, ಬಳ್ಳಿಗಳು, ಬಜ್ಜರಗೊತ್ತಳಂಗಳುಂ – ವಜ್ರದ ಕೊತ್ತಳಗಳು, ಘುಳಿಸಿರೆ – ಘಳಿಸಿರಲಾಗಿ ಕಲಧೌತ ಗೋಪುರಂ – ಬೆಳ್ಳಿಬಂಗಾರದ ದ್ವಾರಗಳುಳ್ಳ, ಪುರವೈರಿಪುರಂ – ಶಿವನಗರವು, ಪೇರ್ಮೆವೆತ್ತು – ಅತಿಶಯವನ್ನು, ಪಡೆದು – ತೊಡಗಿದುದು ಬೆಳಗಿತು ॥

**ತಾ॥** ಮೆರುಂಪರ್ವತ ಶಿಖರದ ಮೇಲೆ ಶಿವರಾಜಧಾನಿಯಾದ ಕೈಲಾಸನಗರಿಯು ರತ್ನದ ಕೋಟೆಯಿಂದಲು, ಪಾತಾಳದವರೆಗೂ, ಆಳವಾದ ಪಾಲ್ಗಡಲ ಕಂದಕದಿಂದಲೂ, ಹರಿನೀಲಮಣಿಗಳ ಆಳ್ವೇರಿಯಿಂದಲು, ವಜ್ರದ ಕೊತ್ತಳಗಳಿಂದಲು, ಬೆಳ್ಳಿಬಂಗಾರದ ದ್ವಾರ ಮೀನಂಗಳಿಂದಲೂ, ಅತಿಶಯವಾಗಿ ಪ್ರಕಾಶಿಸುತ್ತಲಿರುವದು. ಭೂಲೋಕದಲ್ಲಿ ಹಿಮಾಲಯಕ್ಕುತ್ತರದೊಳು ರಜತಾದ್ರಿಯಲ್ಲಿ ಉತ್ತರಂಬುವ ಕೈಲಾವೆಸದೊಂದು ದೇವಲೋಕದಲ್ಲಿ ಮೇರುಶಿಖರದ ಮೇಲೆ ಶೋಭಿಸುವ ಕೈಲಾಸನಗರ ಒಂದು ಬ್ರಹ್ಮಾಂಡಕ್ಕೆ ಹೊರಗೆ ಬಂದು ಮಾಯಾಮಂಡಲವಂ ಮೀರಿ ಕೋಟಿಸೂರ್ಯ ಪ್ರಕಾಶವಾಗಿ ಬೆಳಗುವ ಮುಕ್ತಿಸ್ಥಾನವಾದ ಅಪ್ರಾಕೃತದಿವ್ಯಕೈಲಾಸವೆಂಬ ಶಿವಲೋಕವಂದು ಕರ್ಮಭೂಮಿಯಲ್ಲಿ ಶಾನವೆನಿಸಿ ತ್ರಿಕಂಟಕವಿರಾಜಿತವಾಗಿ ಆನಂದವನದೊಳಗಿರುವ ಅವಿಮುಕ್ತವಾದ ಧಾಸಿಯೆಂಬ ಕಾಶಿಯೊಂದು ಸರ್ವಭೂತಗಳಾದ ಹಾರಾಕಾಸಿಯಲ್ಲಿ ಚಿತ್ಕಳೆಯಾಗಿ ಹೊಳಿಯುವ ಅಂತಃಕೈಲಾಸ ಒಂದು ಹೀಗೆ ಪಂಚಕೈಲಾಸಗಳು ಕಂಚಿ! ಜಂಬುಕೇಶ್ವರ, ತಿರುವಣ್ಣಾಮಲೆ, ಶ್ರೀಕಾಳಹಸ್ತಿ, ಚಿದಂಬರಗಳೆಂಬ – ಪಂಚಭೂತಕೈಲಾಸಗಳು – ಗೋಕರ್ಣ, ಗರಳಪುರಿ – ಗಜಾರಣ್ಯ, ಬಿಲ್ವಾರಣ್ಯ, ವೃದ್ಧಾಚಲ, ವೇದಗಿರಿ, ಮಯೂರ, ಮಧ್ಯಾರ್ಜುನ, ಕುಂಭಕೋಣ, ಹಾಲಾಸ್ಯ, ರಾಮೇಶ್ವರಾದಿ ವಿಭೂತಿಲೀಲಾಕೈಲಾಸಗಳು, ಉಪಾಸಕರಿಗೆ ಅನುಗ್ರಾಹಕಗಳಾಗಿ ಹೇಳಲ್ಪಟ್ಟಿವೆ, ಇವುಗಳಲ್ಲಿ ಷಡಕ್ಷರಕವಿಯು ದೇವಲೋಕದಲ್ಲಿ ಮೇರುಗಿರಿಯ ಮೇಲೆ ಇರುವ ಶಿವನಗರವೆಂಬ ಕೈಲಾಸವನ್ನು ಪ್ರಕೃತ ಕಡಿಗೆ ಉಪಯೋಗಿಸಿಯಿರುವಂತೆ ಬಂಣ್ಣಿಸಿರುವೆನು. ಅಧಿಕಾರಭೇದದಿಂದ ಆಯಾ ಕೈಲಾಸಗಳು ಗಮ್ಯಗಳಾಗಿರುವವು ॥ ಚಂಪಕಮಾಲಾವೃತ್ತ ॥

**ಉ॥** ಬಾಂದಳಮಂ ಪಳಂಚಲೆವ ತುಂಗವೃಷಧ್ವಜದಿಂದ ತಳ್ತು ಚ ।
ಲ್ವೊಂದಿದ ಭರ್ಮಹರ್ಮ್ಯದಿನಳಂಕೃತಿವೆತ್ತ ಗಣೇಶ್ವರಸ್ಫುರ ।
ನ್ಮಂದಿರಪಂಙ್ತೆಯಿಂದಮೃತಪೂರ್ಣಸರಸ್ಸುರಭೂರುಹೋಲ್ಲಸ ।
ನ್ನಂದನದಿಂ ವಿರಾಜಿಸಿದುದಗ್ಗದ ಚಾರುಪುರಂ ಪುರಾರಿಯಾ ॥ ೫೫ ॥

**ಟೀಕ** ॥ ಬಾಂದಳಮಂ – ಆಕಾಶ ಪ್ರದೇಶವನ್ನು, ಪಳಂಚಿ – ಬೀಸಿ, ಅಲೆವ – ಚಲಿಸುತ್ತಿರುವ, ತುಂಗವೃಷಧ್ವಜದಿಂದೆ – ಉನ್ನತವಾದ ಬಸವನ ಪಳವಿಗೆಯಿಂದ, ತಳ್ತು – ಚಿಗುರಿ, ಚಲ್ವೊಂದಿದ – ಸೊಗಸನ್ನು ಪಡೆವ, ಭರ್ಮಹರ್ಮ್ಯದಿಂ – ಬಂಗಾರದ ಉಪ್ಪರಿಗೆಯಿಂದ, ಅಲಂಕೃತಿವೆತ್ತ – ಅಲಂಕಾರವನ್ನು ಹೊಂದಿದ, ಗಣೇಶ್ವರ – ಪ್ರಮಥಗಣಾಧಿಪತಿಗಳ, ಸ್ಫುರತ್ – ಪ್ರಕಾಶಿಸುವ – ಮಂದಿರಪಂಙ್ತೆಯಿಂದ – ಮನೆಗಳ

ಸಾಲಿನಿಂದಲೂ, ಅಮೃತಪೂರ್ಣ – ಸಂಜೀವನರಸಭರಿತವಾದ, ಸರಃ–ಕೊಳದಿಂದಲೂ, ಸುರುಭೂರುಹ – ದೇವವೃಕ್ಷಗಳಿಂದ, ಉಲ್ಲಸತ್ – ಹೆಚ್ಚಾಗಿ ಶೋಭಿಸುವ, ನಂದನದಿಂ – ವನದಿಂದಲೂ, ಪುರಾರಿಯ – ತ್ರಿಪುರಾಂತಕನಾದ ಶಿವನ, ಅಗ್ಗದ – ಅತಿಶಯವಾದ, ಚಾರುಪುರಂ – ಮನೋಹರವಾದ ಪಟ್ಟಣವು, ವಿರಾಜಿಸಿದುದು – ವಿಶೇಷವಾಗಿ ಬೆಳಗಿತು.

**ತಾ॥** ಶಿವರಾಜಧಾನಿಯಲ್ಲಿ ಶತಕೋಟಿ ರುದ್ರಗಣಾಧೀಶ್ವರರ ಗೃಹಪಂಙ್ತೆಯಲ್ಲಿ ಒಂದೊಂದು ಮನಿಯಲ್ಲಿಯೂ, ಭಂಗಾರದ ಉಪ್ಪರಿಗೆಯ ಮೇಲೆ ನಂದೀಧ್ವಜವು, ಅಗಳದಲ್ಲಿ ಅಮೃತಸರೋವರವೊ, ಹಿತ್ತಲಿನಲ್ಲಿ ಕಲ್ಪವೃಕ್ಷಗಳ ತೋಟವೊ, ಶೋಭಿಸುತಿದ್ದವೂ, ಅಪೂರ್ವ ಸ್ವಭಾವೋಕ್ತ್ಯಲಂಕಾರವು, ಶೈವ ಸಂವತ್ಸಮೃದ್ಧ್ಯತಿಶಯವು ಫಲಿತಾರ್ಥವಾಗಿದೆ ॥ ಉತ್ಪಲಮಾಲಾವೃತ್ತ ॥ ೫೫ ॥

**ಮ॥ಸ್ರ॥** ಭವಸೇವಾಯಾತ ಲೋಕೇಶ್ವರಪರಿಕೃತತೂರ್ಯಪ್ರಣಾದಂ ಪ್ರಬ
ದ್ಧೋತ್ಸವಗಚ್ಛದ್ಭದ್ರಭಾಸ್ವತ್ಸುರಗಜಗಳ ಘಂಟಾಝುಣತ್ಕಾರಮುನ್ನಿ
ದ್ರವಿಲಾಸಸ್ವೈರನಿರ್ಯದ್ಗಣಕಳಕಳಮುದ್ಗೀರ್ಣಲೀಲಾಚಲದ್ದಿವ್ಯವಧೂ
ಮಂಜೀರರಾವಂ ಮಿಗೆ ಸೊಗಯಿಕುಂ ತತ್ಪುರೀರಾಜಮಾರ್ಗಂ ॥ ೫೬ ॥

**ಟೀಕ॥** ಭವ – ಶಿವನ, ಸೇವಾ – ಪರಿಚರ್ಯೆಗೆ, ಆಯಾತ – ಬಂದ ಲೋಕೇಶ್ವರ, ವಿಷ್ಣುಬ್ರಹ್ಮೇಂದ್ರಾದಿಗಳಿಂ, ಪರಿಕೃತ – ಮೊಳಗಿಸಲ್ಪಟ್ಟ ಅಥವಾ, ಪರಿವೃತ – ಎಂಬ ಪಾಠದಲ್ಲಿ ಆವರಂ–ಬಳಸಿದ, ತೂರ್ಯಪ್ರಣಾದಂ – ಆತಮ್ಮಟಾದಿ ವಾದ್ಯಧ್ವನಿಯು, ಪ್ರಬದ್ಧ – ಅತಿಶಯವಾಗಿ ಆರಂಭಿಸಲ್ಪಟ್ಟಿರುವ, ಉತ್ಸವ – ಮೆರವಣಿಗೆಯಲ್ಲಿ, ಗಚ್ಛತ್ – ಹೋಗುತ್ತಿರುವ, ಭದ್ರ ಮಂಗಳವಾದ, (ಅಥವಾ ಭದ್ರ, ಮಂದ) ಮೃಗಗಳೆಂಬ ಗಜಜಾತಿವಿಶೇಷಗಳಲ್ಲಿ ಪ್ರಸಿದ್ಧವಾದ ಭದ್ರ ಜಾತಿಯಲ್ಲಿ, ಭಾಸ್ವತ್ – ಶೋಭಿಸುವ, ಸುರಗಜ – ಐರಾವತದ ಕೊರಳಿನ, ಘಂಟ – ಹೆಗ್ಘಂಟೆಯು, ಝುಣತ್ಕಾರಂ – ಘಣಘಣಧ್ವನಿಯು, ಉನ್ನಿದ್ರ – ಜಾಗರೂಕವಾದ, ಪ್ರಮಾದವಿಲ್ಲವೆಂದು ಹಿರ್ಮುಖವಾಗಿ, ಪ್ರವರ್ತಿಸಿದ, ವಿಲಾಸ – ಶಿವಲೀಲೆಯಿಂದ, ಸ್ವೈರ್ಯ – ಸ್ವೇಚ್ಛೆಯಾಗಿ – ಮಲಮಾಯಾ ಕರ್ಮಪಾಶಗಳನ್ನು ಮೀರಿದವರಾದ್ದರಿಂದ ವಿಧಿ ನಿಷೇಧಗಳನ್ನು ಲೆಕ್ಕಿಸದೆಯೆ ನಿರಂಕುಶ ಸ್ವಾತಂತ್ರ್ಯದಿಂ ಪ್ರವರ್ತಿಸುವರಾಗಿ, ನಿಶ್ವತ್ – ಹೊರಟು, ನಿರ್ಸದ್ಗಣ – ವೀರಶೈವ ಗಣಾಧೀಶ್ವರರ, ಕಳಕಳಂ – ಕೋಲಾಹಲ ಧ್ವನಿಯೂ, ಉದ್ಗೀರ್ಣ – ಮೊಳಗುತ್ತಿರುವ, ಲೀಲಾಚಲದಿವ್ಯವಧೂ ಮಂಜೀರರಾಮ – ವಿನೋದವಾಗಿ, ತಿರುಗುವ ದೇವಸ್ತ್ರೀಯರ ಕಾಲಕಡಗದ ಸಿಂಜೆತಧ್ವವಿಯು, ಮಿಸುಗೆ ಉಣ್ಮುತ್ತಿರಲಾಗಿ – ತತ್ಪುರೀರಾಜಮಾರ್ಗಂ ಆ ನಗರವ ರಾಜಬೀದಿಯು, ಸೊಗಯಿಕುಂ – ಆನಂದಕರಮಾಗಿರುವುದು ॥

**ತಾ॥** ಕೈಲಾಸದ ದೊಡ್ಡಬೀದಿಯಲ್ಲಿ ಶಿವದರ್ಶನಕ್ಕೆ ಬರುತ್ತಿರುವ ಹರಿಬ್ರಹ್ಮೇಂದ್ರಾದಿ ದೇವತೆಗಳ ಕರಡಿಗೆ ವಾದ್ಯ ಮುಂತಾದವುಗಳ ಧ್ವನಿಯೂ, ಉತ್ಸವದ ದೇವಗಜಘಂಟಾ

ಸ್ವನವೂ, ಗಣಾಧೀಶ್ವರರ ಕಂಠಧ್ವನಿಯೂ, ದೇವಸ್ತ್ರೀಯರ ಆಭರಣಗಳ ಲಗುವರ್ಧ ಯನಿಯು ಸೇರಿ, ಯಾವಾಗಲು ಶಬ್ದಬ್ರಹ್ಮಮಯವಾಗಿ, ಸುಖವನ್ನು ಕೊಡುತ್ತಿರುವದು.

ಉದಾತ್ತ ವೈಭವ ಸ್ವಭಾವ ವಿಶೇಷಾತಿಶಯವು ವರ್ಣಿಸಲ್ಪಟ್ಟಿದೆ. ಇದು ನಾದೋಪಾಸಕರಾದ ಪ್ರಣವಾನುಸಂಧಾನಗೊಳ್ಳುವ ಷಣ್ಮುಖೀಮುದ್ರಾದೀಕ್ಷಿತರೆಂಬ ಶಿವಯೋಗಿಗಳಿಗೆ ಉಪಲಕ್ಷಕವಾಗಿದೆ ಎಂಬುವದು ಶೈವಸಂಪ್ರದಾಯಜ್ಞನ ಅರ್ಥವೆಂದರಿವುದು ॥ ಮಹಾಸ್ರಗ್ಧರಾವೃತ್ತವು. ಆಕೃತಿ ಛಂದಸ್ಸಿನಲ್ಲಿ ಪಾದಕ್ಕೆ ೨೨ ಅಕ್ಷರಗಳುಂಟಾಗಿ ೮, ೧೪ ಅಕ್ಷರಗಳಿಗೆ ಯತಿಯೆನಿಸುವ ವಿಶ್ರಾಂತಿಗೊಂಡು ಸ.ತ. ನ.ಸ.ರ.ರ. ಎಂಬ ೭ ಗಣಗಳು, ೧ ಗುರು ಉಳ್ಳದ್ದಾಗಿದೆ, ಪ್ರಸಾದಿನಿಬಂಧವು ಸರ್ವವೃತ್ತ ಸಾಧಾರಣವಾಗಿರುವದು ॥ ೫೬ ॥

**ಶಾ॥** ಆ ಕೈಲಾಸದಪೂರ್ವದಿಕ್ಪಥದೊಳಿರ್ಪಂ ಹಂಸವಾಹಂ ತ್ರಿಣೇ ।
ತ್ರಾಕಲ್ಪಂ ಕನಕೋಪವೀತಕನಕೋದ್ಯದ್ದಂ ಡಪಾಶಾಕ್ಷಮಾ ॥
ಲಾಕಾಂತಂ ವೃತಸಪ್ತಕೋಟಿಸಮಭಾಸ್ವದ್ಭೈರವಂ ಬ್ರಾಹ್ಮಿಯೆಂ ।
ಬಾ ಕಾಂತಾಮಣಿಗೂಡಿ ಮಾಣದಶಿತಾಂಗಾಖ್ಯಂ ಮಹಾಭೈರವಂ ॥ ೫೭ ॥

**ಟೀಕ॥** ಆ ಕೈಲಾಸದ – ಶಿವನಗರದ, ಪೂರ್ವದಿಕ್ಪಥದೊಳ್ – ಮೂಡಲಯಕಡೆ ದಾರಿಯಲ್ಲಿ,– ಹಂಸವಾಹಂ – ಅಂಚೆಯೇ ವಾಹನವಾಗಿಯುಳ್ಳ, ತ್ರಿಣೇತ್ರಾಕಲ್ಪಂ ಮೂರುಕಣ್ಣುಗಳೇ ಆಭರಣಗಳಾಗಿಯುಳ್ಳ, ಕನಕೋಪವೀತ ಬಂಗಾರದ ಜನಿವಾರ ದಿಂದಲೂ, ಕನಕೋದ್ಯದ್ದಂಡ – ಚಿನ್ನದ ಉದ್ದವಾದ ಕೋಲಿನಿಂದಲೂ, ಪಾಶ – ಹಗ್ಗದಿಂದಲೂ, ಅಕ್ಷಮಾಲ – ಜಪಸರದಿಂದಲೂ, ಕಾಂತಂ – ಮನೋಹರವಾದ, ವೃತ್ತ – ಬಳಸಲ್ಪಟ್ಟ, ಸಪ್ತ ಕೋಟಿ – ಏಳು ಕೋಟಿ ಮಂದಿಯ, ಸಮಭಾಸ್ವತ್ – ತನ್ನೊಡನೆ ಸಮವಾಗಿ ಬೆಳಗುತ್ತಿರುವ, ಭೈರವಂ – ಭೈರವಸೈನಿಕರುಳ್ಳ, ಅಸಿತಾಂಗಾಖ್ಯಂ– ಕಪ್ಪು ಮೈಯವನೆಂಬ ಹೆಸರುಳ್ಳ, ಮಹಾಭೈರವಂ – ದೊಡ್ಡಭೈರವನು, ಬ್ರಾಹ್ಮೀಯೆಂಬ ಹೆಸರುಳ್ಳ ಆ ಕಾಂತಾಮಣಿಗೂಡಿ – ಆ ಹೆಂಡತಿಯೊಂದಿಗೆ ಸೇರಿ, ಮಾಣದೆ – ಬಿಡದೆ, ಇರ್ವಂ – ಇರುವನು ॥

ತಾ॥ ಕೈಲಾಸದ ಮೂಡಲಬಾಗಿಲಿನ ಬಳಿಯಲ್ಲಿ ಅಸಿತಾಂಗಭೈರವನು ಸಪ್ತಕೋಟಿ ಪ್ರಮಥಸೈನ್ಯದೊಡನೆ ಕಾವಲಾಗಿರುವನು ॥

ಶಾರ್ದೂಲವಿಕ್ರೀಡೀತವೃತ್ತವು, ಸ, ಜ, ಸ, ತ, ತ, ೬ ಗಣಗಳು ೧ ಗುರು. ಪಾದಕ್ಕೆ ೧೯ ಅಕ್ಷರವುಳ್ಳ ಅತಿವೃತ್ತಿಯಲ್ಲಿ ಹುಟ್ಟಿದ್ದು. ಪ್ರತಿ ಪಾದದಲ್ಲಿಯೂ ೭, ೧೨ ಅಕ್ಷರಕ್ಕೆ ಯತಿಯುಳ್ಳದ್ದು ॥ ೫೭ ॥

(ಮುಂದುವರಿಯುವುದು)

# ಹೊಳಲ್ಕೆರೆ ತಾಲೂಕಿನ ದೇವಾಲಯಗಳ ಕ್ಷೇತ್ರದರ್ಶನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

### ಚಿಕ್ಕಜಾಜೂರಿನ ಸಿದ್ಧರಾಮೇಶ್ವರ ದೇವಾಲಯ

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಐತಿಹಾಸಿಕ ಮಹತ್ವ ಪಡೆದಿರುವ ಗ್ರಾಮವಾಗಿದೆ. ಗ್ರಾಮದಲ್ಲಿ ಕ್ರಿ.ಶ. 11–12ನೇ ಶತಮಾನದಲ್ಲಿ ನಿರ್ಮಾಣವಾದ ಸಿದ್ಧರಾಮೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿಂದ ಕೂಡಿದ ನಿರ್ಮಾಣವಾಗಿದೆ. ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ಇದರ ಆವರಣದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ಕಂಬಗಳು, ಬಾಗಿಲುವಾಡ, ಕೈಮುಗಿದು ನಿಂತಿರುವ ಭಕ್ತಿಶಿಲ್ಪಗಳು, ಸಪ್ತಮಾತೃಕೆಯರ ಪಟ್ಟಿಕೆ ಮೊದಲಾದ ಶಿಲ್ಪಗಳಿದ್ದು ಇದೊಂದು ಪ್ರಾಚೀನ ದೇವಾಲಯವಾಗಿದೆ.

ಗರ್ಭಗೃಹದಲ್ಲಿ ಉದ್ಭವ ಶಿವಲಿಂಗವಿದೆ. ಇದು ನೆಲಮಟ್ಟದಲ್ಲಿದ್ದು ಪಾಣಿಪೀಠದಲ್ಲಿ ಅರ್ಧ ಅಡಿ ಎತ್ತರದಲ್ಲಿದೆ. ಅಂತರಾಳದಲ್ಲಿ ಒಂದೂವರೆ ಅಡಿ ಎತ್ತರ, ಎರಡೂವರೆ ಅಡಿ ಉದ್ದದ ನಂದಿಯನ್ನು ಪ್ರತಿಷ್ಠಾಪಿಸಿದ್ದಾರೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಇವುಗಳನ್ನು ಬಹುಮುಖಗಳಲ್ಲಿ ಕಂಡರಿಸಿದ್ದಾರೆ. ಕಂಬಗಳು ಪೀಠ, ದಿಂಡು, ದಿಂಡಿನ ಮೇಲೆ ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ.

ನವರಂಗದ ಎಡಬದಿಯಲ್ಲಿ ಒಂದು ವೀರಗಲ್ಲು ಇದೆ. ಇದರಲ್ಲಿ ಮೂರು ಹಂತಗಳಿವೆ. ಮೊದಲ ಹಂತದಲ್ಲಿ ಹೋರಾಡುತ್ತಿರುವ ವೀರನ ದೃಶ್ಯ, ಎರಡನೇ ಹಂತದಲ್ಲಿ ಮಂಟಪದಲ್ಲಿ ಕುಳಿತಿರುವ ವೀರನನ್ನು ಅಪ್ಸರೆಯರು ಕರೆದೊಯ್ಯುತ್ತಿರುವ ದೃಶ್ಯ, ಮೂರನೆಯ ಹಂತದಲ್ಲಿ ಶಿವಲಿಂಗ ಮತ್ತು ನಂದಿಯನ್ನು ಪೂಜಿಸುತ್ತಿರುವ ಯತಿ ಹಾಗೂ ಧ್ಯಾನಮುದ್ರೆಯಲ್ಲಿ ಕುಳಿತಿರುವ ವೀರನನ್ನು ಕಡೆದಿದ್ದು ಇದೊಂದು ವಿಶೇಷ ಶಿಲ್ಪವಾಗಿದೆ.

ದೇವಾಲಯದಲ್ಲಿ ಕ್ರಿ.ಶ.10ನೆಯ ಶತಮಾನದ ಶಿಲಾಶಾಸನವಿದೆ. ರಾಷ್ಟ್ರಕೂಟ ಕನ್ನರನು ಕದಂಬಳಿಗೆ ಸಾವಿರವನ್ನು ಆಳುತ್ತಿದ್ದ ಎಂದಿದೆ. ಇನ್ನೊಂದು ಶಾಸನವು ಕ್ರಿ.ಶ. 968ಕ್ಕೆ ಸೇರಿದ್ದು ಇದರಲ್ಲಿ ರಾಮೇಶ್ವರಲಿಂಗದ ಉಲ್ಲೇಖವಿದೆ. ಅಲ್ಲದೆ ಗ್ರಾಮದ ಹೆಸರಾದ ಜಾಜೂರು ಹಾಗೂ ಅಲ್ಲಿನ ಲೋಕಸಗೌಡನನ್ನೂ ಹೆಸರಿಸಿದೆ. ಶಾಸನದಲ್ಲಿ ಈ ಪರಿಸರದ ಚಿಕಂದವಾಡಿ, ಸಾದರಹಳ್ಳಿ, ಅರಸನಗಟಗೆ, ಅಬರಸನಹಳ್ಳಿ, ಅಡನೂರು,

ಹೊಸಹಳ್ಳಿ, ಕೊಡಗವಳ್ಳಿ ಮುಂತಾದ ಗ್ರಾಮಗಳನ್ನು ಉಲ್ಲೇಖಿಸಲಾಗಿದೆ. ದೇವಾಲಯದ ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ತ್ರಿತಲಗಳುಳ್ಳ ಶಿಖರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಇಲ್ಲಿ ದೊರೆತಿರುವ ಶಿಲಾಶಾಸನಗಳ ಆಧಾರದ ಮೇಲೆ ಇದೊಂದು ಪ್ರಾಚೀನ ಗ್ರಾಮವಾಗಿದ್ದು 10ನೇ ಶತಮಾನದ ಕಾಲಾವಧಿಯಲ್ಲಿಯೇ ಇದಕ್ಕೆ ಜಾಜೂರು ಎಂಬ ಹೆಸರು ಇತ್ತೆಂದು ತಿಳಿದುಬರುತ್ತದೆ. ಶಾಸನಗಳು ಹಾಗೂ ದೇವಾಲಯ ಪ್ರಾಚೀನವಾಗಿದ್ದು ಸಂರಕ್ಷಿಸಿ ಇದನ್ನು ಮುಂದಿನ ಪೀಳಿಗೆಗೆ ಗತ ಇತಿಹಾಸವನ್ನು ಸಾರಬೇಕಿದೆ.

**ದುಮ್ಮಿಯ ಈಶ್ವರ ದೇವಾಲಯ**

ಚಿತ್ರದುರ್ಗ ಜಿಲ್ಲೆ, ಹೊಳಲ್ಕೇರೆ ತಾಲೂಕಿನಲ್ಲಿರುವ ಗ್ರಾಮ ದುಮ್ಮಿ. ತಾಲ್ಲೂಕು ಕೇಂದ್ರದಿಂದ 30 ಕಿ.ಮೀ. ದೂರದಲ್ಲಿದೆ. ಇಲ್ಲಿ ಕ್ರಿ.ಶ. 12–13ನೇ ಶತಮಾನದಲ್ಲಿ ನಿರ್ಮಾಣವಾದ ಹೊಯ್ಸಳರ ಕಾಲದ ದೇವಾಲಯವಿದೆ. ಇದು ಹೊಯ್ಸಳ ಶೈಲಿಯಲ್ಲಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿಂದ ಕೂಡಿದ ಪ್ರಾಚೀನ ದೇವಾಲಯವಾಗಿದೆ. ಗರ್ಭಗೃಹದಲ್ಲಿ ಒಂದೂವರೆ ಅಡಿ ಎತ್ತರದ ಪಾಣಿಪೀಠದ ಮೇಲೆ ಅರ್ಧ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಸ್ತಂಭ ಶಾಖೆಗಳಿವೆ. ಅಂತರಾಳದಲ್ಲಿ ಲಿಂಗಕ್ಕೆ ಎದುರಾಗಿ ನಂದಿಯ ಶಿಲ್ಪವನ್ನು ಪ್ರತಿಷ್ಠಾಪಿಸಿದ್ದಾರೆ. ಇದು ಒಂದೂವರೆ ಅಡಿ ಎತ್ತರ ಹಾಗೂ ಎರಡೂವರೆ ಅಡಿ ಉದ್ದದ ಹೊಯ್ಸಳ ಶೈಲಿಯ ಸುಂದರವಾದ ಶಿಲ್ಪವಾಗಿದೆ. ಇದರ ಪಕ್ಕದಲ್ಲಿ ಅದೇ ಕಾಲದ ಸೂಕ್ಷ್ಮ ಶೈಲಿಯ ಗಣೇಶನ ಶಿಲ್ಪವನ್ನು ಇಡಲಾಗಿದೆ. ಅಂತರಾಳದ ಬಾಗಿಲುವಾಡದಲ್ಲಿ ಸ್ತಂಭಶಾಖೆ ಮತ್ತು ಜಾಲಂಧ್ರಗಳನ್ನು ನಿರ್ಮಿಸಲಾಗಿದೆ.

ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ಇವುಗಳನ್ನು ಚಚೌಕ ಹಾಗೂ ವೃತ್ತಾಕಾರವಾಗಿ ಕಡೆದಿದ್ದಾರೆ. ಕಂಬಗಳ ಮೇಲೆ ವೃತ್ತಾಕಾರದ ಅಬ್ಯಾಕಸ್, ಚಚ್ಚೌಕ ಫಲಕ ಮತ್ತು ಬೋದಿಗೆಗಳಿವೆ. ಗೋಡೆಯಲ್ಲಿರುವ ಕಂಬಗಳು ನಕ್ಷತ್ರಾಕಾರದ ರಚನೆಗಳಾಗಿವೆ. ಸಭಾಮಂಟಪದ ಒಳಭಾಗದ ಬಲಬದಿಯ ಗೋಡೆಯಲ್ಲಿ ಶಿಲಾಶಾಸನವಿದೆ. ಕ್ರಿ.ಶ. 1536ರ ವಿಜಯನಗರದ ತುಳು ಮನೆತನದ ಅಚ್ಯುತರಾಯನ ಕಾಲಕ್ಕೆ ಸೇರಿದೆ. ಇದರಲ್ಲಿ ಚಿನ್ನಪ್ಪರಾಯ, ಮಾಣಿಕಯ್ಯ ಮತ್ತು ಮಲ್ಲರಸಯ್ಯರು ಅಂದಿನ ಕಾರ್ಯಕರ್ತರಾಗಿದ್ದು ಇವರು ಗ್ರಾಮಸ್ಥರ ಸಮ್ಮುಖದಲ್ಲಿ ಮದುವೆಯ ಸುಂಕವನ್ನು ಸರ್ವಮಾನ್ಯವಾಗಿ ಬಿಟ್ಟರೆಂಬುದಾಗಿ ಹೇಳುತ್ತದೆ. ದೇವಾಲಯದ ಹೊರಗೆ ಗರ್ಭಗೃಹದ ಬಲ ಭಾಗದಲ್ಲಿ ಒಂದು ಜೈನಶಿಲ್ಪವಿದೆ. ಇಡಲಾಗಿದೆ. ಇದರಿಂದ ದುಮ್ಮಿ ಗ್ರಾಮದಲ್ಲಿ ಜಿನಾಲಯ ಗೊತ್ತಾಗುತ್ತದೆ. ಈ ದೇವಾಲಯ ವಿನಾಶದ ಅಂಚಿನಲ್ಲಿದ್ದು ಸಂರಕ್ಷಿಸುವ ಕಾರ್ಯವನ್ನು ಸ್ಥಳೀಯರು ಮಾಡ ಬೇಕಿದೆ.

ಇದೇ ಗ್ರಾಮದಲ್ಲಿ ಇನ್ನೊಂದು ಈಶ್ವರ ದೇವಾಲಯವಿದೆ, ಈ ದೇವಾಲಯವು ಹೊಯ್ಸಳ ಶೈಲಿಯಲ್ಲಿದೆ. ದೇವಾಲಯದ ಬಲಭಾಗದಲ್ಲಿ ಶಿಲಾಶಾಸನ, ಸಪ್ತಮಾತೃಕೆಯರ ಶಿಲ್ಪಗಳು, ಎರಡು ಶಿವಲಿಂಗಗಳು ಮತ್ತು ನಂದಿಯ ಶಿಲ್ಪಗಳನ್ನು ಕಾಣಬಹುದು. ದೇವಾಲಯದ ಮುಂಭಾಗದಲ್ಲಿ ಭಕ್ತಶಿಲ್ಪಗಳು ಹಾಗೂ ಬಾಗಿಲುವಾಡಗಳಿವೆ. ಇಲ್ಲಿ ಅನೇಕ ಪ್ರಾಚೀನ ಭಗ್ನಶಿಲ್ಪಗಳನ್ನೂ ಕಾಣಬಹುದು. ಇಲ್ಲಿನ ಶಾಸನ, ಶಿಲ್ಪ ಮತ್ತಿತರ ಶೈಲಿಯಿಂದ ಇದನ್ನು 10ನೇ ಶತಮಾನದ ದೇವಾಲಯವೆಂದು ಹೇಳಬಹುದು. ಈ ದೇವಾಲಯಗಳನ್ನು ಇಟ್ಟಿಗೆ,ಮಣ್ಣು, ಕಲ್ಲುಚಪ್ಪಡಿಗಳಿಂದ ನಿರ್ಮಿಸಿದ್ದಾರೆ. ಕಾಲಗರ್ಭದಲ್ಲಿ ಸಿಲುಕಿ ದೇವಾಲಯ ಭಗ್ನಗೊಂಡಿದ್ದು ನಂತರದ ದಿನಗಳಲ್ಲಿ ಸ್ಥಳೀಯರು ಜೀರ್ಣೋದ್ಧಾರ ಮಾಡಿದ್ದಾರೆ. ಈ ಗ್ರಾಮದಲ್ಲಿರುವ ಕ್ರಿ.ಶ. 1664ರ ಶಾಸನದಲ್ಲಿ ಗ್ರಾಮದ ದೇವರುಗಳಾದ ವೀರಭದ್ರ, ಆಂಜನೇಯ, ರಾಮದೇವರು, ಮೈಲಾರದೇವರು ಮುಂತಾದ ದೇವತೆಗಳಿಗೆ ಪೂಜೆ ಮಾಡುತ್ತಿದ್ದ ಅರ್ಚಕರ ಉಲ್ಲೇಖಗಳಿವೆ. ಇದು ಗ್ರಾಮದ ಪ್ರಮುಖ ಶಾಸನವಾಗಿದ್ದು, ಇದನ್ನು ಸಂರಕ್ಷಿಸುವ ಅಗತ್ಯತೆ ಇದೆ.

ಈ ಎಲ್ಲಾ ಅಂಶಗಳಿಂದ ಗ್ರಾಮ 10 ನೇ ಶತಮಾನದಿಂದ ಇಂದಿನ ದಿನಗಳವರೆಗೆ ಇರುವ ಇದು ಒಂದು ಐತಿಹಾಸಿಕ ಗ್ರಾಮವಾಗಿದ್ದು, ಧಾರ್ಮಿಕವಾಗಿಯೂ ಮಹತ್ವ ಪಡೆದ ಗ್ರಾಮವಾಗಿತ್ತು ಎಂದು ಹೇಳಬಹುದು.

**ಹೊಳಲ್ಕೆರೆಯ ಶಂಕರಲಿಂಗ ದೇವಾಲಯ**

ಶಂಕರಲಿಂಗ ದೇವಾಲಯವು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯು ಒಂದು ಪ್ರಾಚೀನ ಗ್ರಾಮವಾಗಿದೆ. ಹೊಳಲ್ಕೆರೆಯ ಪೂರ್ವ ವಲಯದಲ್ಲಿರುವ ಈ ದೇವಾಲಯ ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಅರ್ಧ ಅಡಿ ಎತ್ತರದ ವೃತ್ತಾಕಾರದ ಪಾಣಿಪೀಠದ ಮೇಲೆ ಮುಕ್ಕಾಲು ಅಡಿ ಎತ್ತರದ ಶಿವಲಿಂಗ ಇದೆ. ಶಿವಲಿಂಗದ ಹಿಂಭಾಗದಲ್ಲಿ ಐದು ಅಡಿಗಳಷ್ಟು ಎತ್ತರದ ಏಳು ಹೆಡೆಗಳುಳ್ಳ ನಾಗಶಿಲ್ಪವಿರುವುದು ವಿಶೇಷ.

ಗರ್ಭಗೃಹದ ಬಾಗಿಲುವಾಡವು ಸುಂದರ ಹಾಗೂ ಸೂಕ್ಷ್ಮ ಕೆತ್ತನೆಗಳಿಂದ ರಚಿತವಾಗಿದೆ. ಇದರಲ್ಲಿ ಸ್ತಂಭಶಾಖೆ, ಜಾಲಂಧ್ರಗಳಿವೆ. ಲಲಾಟದಲ್ಲಿ ಮುಂಚಾಚಿದ ಪಟ್ಟಿಕೆ ಇದೆ. ಇದರಲ್ಲಿ ಹೂಮೊಗ್ಗುಗಳ ರಚನೆಗಳಿವೆ. ನವರಂಗದ ಬಲಬದಿಯಲ್ಲಿ ಭೈರವಿಯ ಶಿಲ್ಪವಿದೆ. ಸುಖಾಸನದಲ್ಲಿ ಕುಳಿತಿರುವ ಭೈರವಿಯ ಶಿಲ್ಪ, ನಾಲ್ಕು ಕೈಗಳನ್ನು ಹೊಂದಿದ್ದು, ತ್ರಿಶೂಲ, ಡಮರುಗ, ಖಡ್ಗ ಮತ್ತು ಕಲಾಪಗಳನ್ನು ಹಿಡಿದಿದ್ದಾಳೆ. ಕೂಡುವಿನ ಮೇಲ್ಭಾಗದಲ್ಲಿ ಶಿಖರದ ರಚನೆ ಇದೆ. ಎಡಬದಿಯಲ್ಲಿ ಸುಖಾಸನದಲ್ಲಿ ಕುಳಿತ ಶಿವನ ಶಿಲ್ಪವಿದೆ. ಕೀರ್ತಿಮುಖದ ಪ್ರಭಾವಳಿಯಿರುವ ಈ ಶಿಲ್ಪವು ಸೂಕ್ಷ್ಮ ಕೆತ್ತನೆಗಳನ್ನು ಹೊಂದಿದೆ. ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರುಗ, ಖಡ್ಗ ಮತ್ತು ಫಲಗಳನ್ನು

ಹಿಡಿದಿದೆ ಹಾಗೂ ಕೈಮುಗಿದು ನಿಂತ ಭಕ್ತ, ಅವನ ಕೆಳಗೆ ಹಸು–ಕರುಗಳ ಉಬ್ಬುಶಿಲ್ಪಗಳಿವೆ.

ಗಣೇಶ ಹಾಗೂ ಐದು ಅಡಿ ಎತ್ತರದ ಹೊಯ್ಸಳ ಕಾಲದ 58 ಸಾಲುಗಳುಳ್ಳ ಕ್ರಿ.ಶ. 1217 ಕ್ಕೆ ಸೇರಿದ ಶಿಲಾಶಾಸನವಿದೆ. ಈ ಶಾಸನವು ಹೊಯ್ಸಳ ಇಮ್ಮಡಿ ಬಲ್ಲಾಳನ ಕಾಲದ್ದಾಗಿದೆ. ಈ ಶಾಸನದಲ್ಲಿ ಬಾಹತ್ತರ ನಿಯೋಗಾಧಿಪತಿಯಾದ ಅಣ್ಣಮರಸರು ಹೊಳಲ್ಕೆರೆಯ ಶ್ರೀಸ್ವಯಂಭು ಕಲಿದೇವರ ಅಂಗಭೋಗ, ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕಾಗಿ ಕೋಡಿಹಳ್ಳಿಯನ್ನು ಮೂಕಜೀಯರ ಮಗನಿಗೆ ಬಿಟ್ಟುಕೊಟ್ಟ ದತ್ತಿಯಾಗಿದೆ. ಇದರಿಂದ ಈ ಶಂಕರಲಿಂಗ ದೇವಾಲಯವು ಪ್ರಾಚೀನ ಕಲಿದೇವ ಅಥವಾ ಕಲ್ಲೇಶ್ವರ ದೇವಾಲಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಹೊಯ್ಸಳರ ಕಾಲದಲ್ಲಿ ಇದನ್ನು ಶಂಕರದೇವರೆಂದೂ ಕರೆಯಲಾಗಿದೆ.

ಇಲ್ಲಿನ ಇನ್ನೊಂದು ಶಿಲಾಶಾಸನವು ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದು ಇದರಲ್ಲಿ ಹೊಳಲಕೆರೆ ಮತ್ತು ಮಾರನಾಯಕ ಎಂಬ ಹೆಸರುಗಳಿವೆ.

ಈ ಗ್ರಾಮ ಪ್ರಾಚೀನ ಗ್ರಾಮವಾಗಿದ್ದು, ಶಾಸನಗಳಲ್ಲೇ ಇದರ ಹೆಸರು ಉಲ್ಲೇಖವಾಗಿರುವುದು ವಿಶೇಷವಾಗಿದೆ. ಈ ಗ್ರಾಮವು ಹೊಯ್ಸಳರ ಕಾಲ, ಕಲ್ಯಾಣ ಚಾಲುಕ್ಯರ ಕಾಲ, ವಿಜಯನಗರದ ಸಾಮಂತ ಪಾಳೇಗಾರರ ಕಾಲದಿಂದಲೂ ಇತ್ತು ಹಾಗೂ ಪ್ರಮುಖ ಸ್ಥಾನ ಪಡೆದ ಗ್ರಾಮವಾಗಿತ್ತು ಎಂದು ಹೇಳಬಹುದು.

□

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ !
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ
ವಿವಾಹವ ಮಾಡಿದಿರಿ, ಸ್ವಯವಪ್ಪ ಗಂಡಂಗೆ ಕೊಟ್ಟಿರಿ
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ
ಚನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಅವಧರಿಸಿ ನಿಮ್ಮಡಿಗಳೆಲ್ಲರೂ ಮರಳಿ ಬಿಜಯಂಗೈವುದು ಶರಣಾರ್ಥಿ !

**- ಅಕ್ಕಮಹಾದೇವಿ**

# ಸರ್ವಜ್ಞ ವಚನ ವ್ಯಾಖ್ಯಾನ

**ಪ್ರೊ. ಮೊರಬದ ಮಲ್ಲಿಕಾರ್ಜುನ**

**ಗುಡವು ಮಾತಾಳಕ ಒಡಗೂಡೆ ಕಪ್ಪಲಿಯ**
**ಬಡತನ ಹೋಗಿ ಸಿರಿ ಬಕ್ಕು ಕಪ್ಪಲಿಯು**
**ಪೊಡವಿಯೊಳೆಸೆಗು ಸರ್ವಜ್ಞ**

ಸಾಮಾನ್ಯ ವಸ್ತುಗಳನ್ನು ಚಿನ್ನವಾಗಿಸಬಹುದು ಎನ್ನುವ ರಸವಾದಕ್ಕೆ ಸಂಬಂಧಿಸಿದಂತಹ ಎಲ್ಲ ಪ್ರಸ್ತಾಪಗಳಿಗೂ ಸರ್ವಜ್ಞ ಹೊಸ ವ್ಯಾಖ್ಯಾನವನ್ನು ಕೊಡುವ ಪ್ರಯತ್ನ ಮಾಡಿದ್ದಾನೆ. ಅವನ ದೃಷ್ಟಿಯಲ್ಲಿ ಈ ಭೂಮಿಯೇ ಚಿನ್ನದಂತಹ ಭೂಮಿ. ಇದರ ಸಮೃದ್ಧಿಯನ್ನು ಅರ್ಥ ಮಾಡಿಕೊಂಡು ಮನುಷ್ಯ ಪರಿಶ್ರಮ ಪಟ್ಟದ್ದೇ ಆದರೆ ಖಂಡಿತಕ್ಕೂ ಬಾಳು ಬಂಗಾರವಾಗುತ್ತದೆ ಎಂಬ ಭಾವಶ್ರೀಮಂತಿಕೆ ಅವನದು.

ಗುಡ ಎಂದರೆ ಬೆಲ್ಲ, ಕಬ್ಬಿನಿಂದ ಸಿದ್ಧಗೊಳ್ಳುವಂತಹುದು. ಮಾತಾಳಕ ಎಂದರೆ ಮಾದಲ ಫಲ, ಸಕ್ಕರೆನಿಂಬೆ. ಎರಡೂ ಫಲವತ್ತಾದ ನೆಲ ಮತ್ತು ಸಮೃದ್ಧವಾದ ನೀರು ಇರುವ ಸ್ಥಳದಲ್ಲಿ ಬೆಳೆಯುವಂತಹವು. ಸಹಜವಾದ ನೀರಿದ್ದರೆ ಸರಿಯೆ; ಇಲ್ಲವಾದರೆ ಕಪ್ಪಲಿಯ ಒಡನಾಟ ಬೇಕು.

ಒಬ್ಬ ರೈತನಿಗೆ ಬಾವಿಯ ನೀರನ್ನು ಮೇಲೆತ್ತಲು ಕಪ್ಪಲಿ ದೊರೆತದ್ದೇ ಆದರೆ ಎಷ್ಟೊ ಕಬ್ಬು ಬೆಳೆದಾನು, ಸಕ್ಕರೆನಿಂಬೆಯ ಫಸಲು ಪಡೆದಾನು. ಬದುಕಿನಲ್ಲಿ ಇದಕ್ಕಿಂತ ಅದ್ಭುತ ಚಿನ್ನದ ಸೃಷ್ಟಿ ಸಾಧ್ಯವೇ!

**ತಾಳಕವ ಸತ್ವವನು ಮೇಳೈಸಿ ರಸದೊಳಗೆ**
**ಬಾಳ ಬಲ್ಲವ ಸಲುವನೊಡಗೂಡೆ ತಾರೆ**
**ಹೇಳಿದಂತಕ್ಕು ಸರ್ವಜ್ಞ**

ತಾಳಕ ಎಂದರೆ ಗಂಧಕ. ಕಣಿವೆಯಲ್ಲಿ ದೊರೆಯುವ ಹಳದಿ ಬಣ್ಣದ ದ್ರವ್ಯ. ಇದಕ್ಕೆ ಪರಿಮಳವಿದೆ. ಇದರ ಸಂಸರ್ಗದಿಂದ ನೀರು ಬಿಸಿಯಾಗುತ್ತದೆ. ಇದು ಸುಡಬಲ್ಲುದು, ಸಿಡಿಯಬಲ್ಲುದು. ರಾಸಾಯನಿಕ ಕ್ರಿಯೆಗೊಳಪಡಿಸಿದರೆ ರಕ್ತವನ್ನು ಶುದ್ಧೀಕರಿಸುವ ಔಷಧಿ ಸಿದ್ಧವಾಗುತ್ತದೆ. ಇದು ಚರ್ಮವ್ಯಾಧಿನಿವಾರಕವೂ ಹೌದು. ಬೆಳ್ಳಿಗೆ ಲೇಪಿಸಿದರೆ ಚಿನ್ನದಂತೆ ಹೊಳೆಯುತ್ತದೆ.

ಹೀಗೆ ವಿವಿಧ ಬಗೆಯ ಸಾಮರ್ಥ್ಯವನ್ನು ಹೊಂದಿರುವ ಗಂಧಕದ ಸತ್ವವನ್ನು ರಾಸಾಯನಿಕ ಕ್ರಿಯೆಗೆ ಒಳಪಡಿಸಿ ಬದುಕಿನ ಒಳಿತನ್ನು ಸಾಧಿಸುವ ಪ್ರಯತ್ನ ಮಾಡಿದರೆ ಬದುಕು ಬಂಗಾರವಾಗುತ್ತದೆ. ಮನುಷ್ಯ ಆಗಸದೆತ್ತರಕ್ಕೆ ಏರುತ್ತಾನೆ. ಅವನ ಆಶಯದಂತೆ ಬಾಳು ಸಾಗುತ್ತದೆ.

ಒಂದು ವಸ್ತುವಿನಿಂದಲೇ ಹೀಗಾಗುತ್ತದೆ ಎಂದಾದರೆ ಮನುಷ್ಯಮನಸ್ಸು ಮತ್ತು ಗುಣಸಮುಚ್ಚಯದಿಂದ ನಮ್ಮ ಬಾಳು ಬಂಗಾರವಾಗುವುದಿಲ್ಲವೆ ಎಂಬ ಸೂಕ್ಷ್ಮ ಪ್ರಶ್ನೆ ಸರ್ವಜ್ಞನದು.

**ಕಟ್ಟಲು ಬಿಡಲು ಶಿವ ಬಟ್ಟಲು ಕದ್ದನೆ**
**ಕಟ್ಟಿರ್ದ ಲಿಂಗವ ಭಜಿಸುವಡೆ ಆ ಲಿಂಗ**
**ಬಿಟ್ಟಿಹುದಭವನ ಸರ್ವಜ್ಞ**

ಶರಣರು ದೇವಸ್ಥಾನದಲ್ಲಿರುವ ಸ್ಥಾವರಲಿಂಗವನ್ನು ನಿರಾಕರಿಸಿ ಗುರು ಕೊಟ್ಟ ಇಷ್ಟಲಿಂಗವನ್ನು ದೇಹದ ಮೇಲೆ ಧರಿಸಿದವರು. ಇಷ್ಟಲಿಂಗ ಸದಾ ದೇಹದ ಮೇಲೆ ಭದ್ರವಾಗಿರಬೇಕು ಎನ್ನುವ ಕಾರಣಕ್ಕಾಗಿ ಅದನ್ನು ಬಟ್ಟೆಯಲ್ಲಿ ಸುತ್ತಿ ಕಟ್ಟಿಕೊಳ್ಳುತ್ತಿದ್ದರು; ಅಥವಾ ಕರಡಿಗೆಯಲ್ಲಿಟ್ಟು ಶಿವದಾರದಿಂದ ಭದ್ರವಾಗಿ ಬಿಗಿಯುತ್ತಿದ್ದರು. ಸರ್ವಜ್ಞ ಈ ಕ್ರಿಯೆಯನ್ನು ಛೇಡಿಸುತ್ತಾನೆ. ಒಬ್ಬ ಕಳ್ಳ ಸಿಕ್ಕಾಗ ಮತ್ತೆ ತಪ್ಪಿಸಿಕೊಳ್ಳಬಾರದು ಎಂದು ಹೇಗೆ ಕಟ್ಟಿಹಾಕುತ್ತೇವೊ ಹಾಗೆ ಲಿಂಗವನ್ನು ಕಟ್ಟಿಹಾಕಿದರೆ ಅಲ್ಲಿ ದೈವತ್ವ ಹೇಗೆ ನೆಲೆಗೊಳ್ಳಲು ಸಾಧ್ಯ ಎಂಬುದು ಅವನ ಪ್ರಶ್ನೆ.

ಗುರು ಕೊಟ್ಟ ಇಷ್ಟಲಿಂಗ ವ್ಯಾವಹಾರಿಕ ಕಟ್ಟುಕಟ್ಟಳೆಗಳನ್ನು ಮೀರಿ ಭಕ್ತನ ಭಾವಲಿಂಗ ಮತ್ತು ಪ್ರಾಣಲಿಂಗವಾಗಬೇಕು ಎನ್ನುವ ಆಶಯ ಸರ್ವಜ್ಞನದು. ಸರ್ಪಭೂಷಣ ಶಿವಯೋಗಿಗಳು ಹೇಳಿದ 'ಲಿಂಗಪೂಜೆಯ ಮಾಡಿರೊ ನಿಮ್ಮೊಳು ಪ್ರಾಣಲಿಂಗ ಪೂಜೆಯ ಮಾಡಿರೊ' ಎಂಬ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**ಕಾಯದಲಿ ನಿಜವಿರುವ ದಾಯವ ನೋಡದೆ**
**ವಾಯಕ್ಕೆ ಜಪವ ಜಪಿಸುವ ಯೋಗಿಯ**
**ಬಾಯ ನೋಡೆಂದ ಸರ್ವಜ್ಞ**

ಬಸವಣ್ಣನವರು ದೇಹವೇ ದೇವಾಲಯ ಎಂದವರು, ಕಾಯವೇ ಕೈಲಾಸ ಎಂದು ಭಾವಿಸಿದವರು, ಶರಣರ ದೃಷ್ಟಿಯಲ್ಲಿ ಈ ಕಾಯ ಪ್ರಸಾದಕಾಯ, ದೇವರ ಅನುಗ್ರಹ. ಅಂಗದಲ್ಲಿ ಲಿಂಗದೇವನಿದ್ದಾನೆ. ಜೀವನಲ್ಲಿಯೆ ಶಿವನಿದ್ದಾನೆ. ಇದನ್ನು ಮನುಷ್ಯರಾದ ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ.

ಕಾಯಪೋಷಣೆಗಾಗಿ ಕಾಯಕ ಮಾಡಬೇಕು. ಕಾಯಕದಿಂದ ಬಂದ ಸಂಪಾದನೆ

ಯಿಂದ ದಾಸೋಹ ನಡೆಸಬೇಕು. ಏಕೆಂದರೆ ಎಲ್ಲರ ಕಾಯದಲ್ಲೂ ಇರುವ ಶಿವ ಸಂತೃಪ್ತನಾಗಬೇಕು. ಇದು ನಿಜವಾದ ಶಿವಸಂತರ್ಪಣೆ,

ಇದನ್ನು ಬಿಟ್ಟು ನಮ್ಮನ್ನು ನಾವು ಯೋಗಿಗಳೆಂದು ಕರೆದುಕೊಂಡು ನೆಪಕ್ಕಾಗಿ ಜಪ ಮಾಡಿದರೆ ಅದು ಬೂಟಾಟಿಕೆಯಾಗುತ್ತದೆ, ನಾಟಕ ಎಂದಾಗುತ್ತದೆ. ಬದುಕಿನಲ್ಲಿ ನಿಜವನರಿತ ನಡೆ ಮುಖ್ಯವೆ ಹೊರತು, ತೋರಿಕೆಯ ಆಡಂಬರವಲ್ಲ,

**ಏಕಾಂತದಲಿ ಕುಳಿತು ಪಿನಾಕಿಯ ನೆನೆಯದೆ**
**ಲೋಕದ ಮಾತ ನುಡಿವಾತ ಭವದಲ್ಲಿ**
**ತೇಕಾಡುತಿಹನು ಸರ್ವಜ್ಞ**

ಪಿನಾಕಧರನಾದ ಶಿವನನ್ನು ಒಲಿಸಿಕೊಳ್ಳಬೇಕಾದರೆ ಏಕನಿಷ್ಠೆ ಬೇಕು, ಶ್ರದ್ಧೆ ಬೇಕು. ಲೋಕದ ಎಲ್ಲ ಜಂಜಡವನ್ನು ಬಿಟ್ಟು ಏಕಾಂತದಲ್ಲಿ ಅವನನ್ನು ನೆನೆಯಬೇಕು. ಮಹಾಭಾರತದಲ್ಲಿ ಅರ್ಜುನ ಹೀಗೆ ಮಾಡುತ್ತಾನೆ. ಇಂದ್ರಕೀಲ ಪರ್ವತದಲ್ಲಿ ಶಿವನನ್ನು ಕುರಿತು ಘೋರ ತಪಸ್ಸನ್ನು ಮಾಡುತ್ತಾನೆ. ಆದರೂ ಅವನ ಮನಸ್ಸಿನಲ್ಲಿ ತಾನು ಲೋಕೈಕವೀರ, ಮೂರುಲೋಕದ ಗಂಡ ಎಂಬ ಹಮ್ಮು ಇರುತ್ತದೆ. ಆದ್ದರಿಂದಲೇ ವರಾಹ ಕಾಣಿಸಿಕೊಂಡಾಗ ಧನುಸ್ಸನ್ನು ಕೈಗೆತ್ತಿಕೊಳ್ಳುತ್ತಾನೆ. ಬಲಿ ಬೀಳಿಸಿದ್ದರ ಬಗ್ಗೆ ನಾಡಾಡಿಯಂತೆ ಸಂಘರ್ಷಕ್ಕಿಳಿಯುತ್ತಾನೆ. ಯಾರನ್ನು ಕುರಿತು ಅವನು ಧ್ಯಾನಿಸುತ್ತಿದ್ದನೋ ಅದೇ ಮೂರುತಿ ತನ್ನ ಎದುರಿಗಿದೆ ಎಂಬುದನ್ನು ಅವನು ಅರ್ಥ ಮಾಡಿಕೊಳ್ಳದೇ ಹೋಗುತ್ತಾನೆ. ಆದ್ದರಿಂದ ಶಿವನೊಂದಿಗೆ ಹೋರಿ ತೇಕಾಡಬೇಕಾಗುತ್ತದೆ.

ಏಕಾಂತದ ನಮ್ಮ ಧ್ಯಾನ ಅಂತರಂಗದ ಕಣ್ಣನ್ನು ತೆರೆಸಬೇಕು. ಧ್ಯಾನಸ್ಥ ಮೂರ್ತಿಯನ್ನು ಅಂತರ್ಗತಗೊಳಿಸಿಕೊಳ್ಳಬೇಕು. ಲೋಕಾಂತದ ಜಂಜಡವನ್ನು ಬಿಟ್ಟು ಗುರಿಯೆಡೆಗೆ ಸಾಗುವಂತಾಗಬೇಕು.

**ಆಡೆಂದರಾಡದು ಮಾಡವನೇರುವುದು**
**ಕೋಡದು ಕೊಂಕಿ ನಡೆವುದು ಕಡಿದರೆ**
**ಬಾಡದು ಹೇಳಿ ಸರ್ವಜ್ಞ**

ಸರ್ವಜ್ಞ ಭಾಷೆಯೊಂದಿಗೆ ಆಟವಾಡುವ ಪ್ರಯತ್ನ ಮಾಡಿದ್ದಾನೆ. ಈ ವಿಷಯದಲ್ಲಿ ಅವನು ನಮ್ಮ ಜನಪದರ ಅಪ್ಪಟ ಪ್ರತಿನಿಧಿ. ನಮ್ಮ ಗ್ರಾಮೀಣ ಜನರು ತಮಗೆ ಗೊತ್ತಿರುವ ಭಾಷೆಯ ಮೂಲಕವೇ ಬದುಕಿಗೊಂದು ಸೊಗಸನ್ನು ತಂದುಕೊಳ್ಳುವ ಆಟಗಳನ್ನು ಆಡುತ್ತಾರೆ.

ಈ ತ್ರಿಪದಿಯಲ್ಲಿ ಒಂದು ಪರಿಚಿತ ವಿಷಯದ ಕ್ರಿಯೆಯನ್ನು ವಿವರಿಸಲಾಗಿದೆ. ಅದು ತನ್ನಷ್ಟಕ್ಕೆ ತಾನೇ ಆಡುತ್ತಿದೆ. ನಾವು ಅದನ್ನು ಆಡಿಸಲು ಸಾಧ್ಯವಿಲ್ಲ. ಅದರ

ಚಲನೆ ಏನಿದ್ದರೂ ಮೇಲ್ಮುಖವಾದುದು. ನೋಡನೋಡುತ್ತಲೇ ಕೆಳ ಅಂತಸ್ತಿನಿಂದ ಮೇಲಂತಸ್ತನ್ನು ಆವರಿಸಿಕೊಳ್ಳುತ್ತದೆ. ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಾ ಹೋಗುತ್ತದೆ. ಅದರ ಗತಿ ಏನಿದ್ದರೂ ವಕ್ರಗತಿ. ನಾವು ಖಡ್ಗದಿಂದ ಕತ್ತರಿಸಿದರೆ ಅದಕ್ಕೇನೂ ಗಾಯವಾಗುವುದಿಲ್ಲ, ಒಣಗಿ ಬಾಡುವುದಿಲ್ಲ. ಏನದು? ಎಂದು ಕೇಳಿದಾಗ ಬಹಳಷ್ಟು ಜನ ಉತ್ತರಿಸದೆ ತಲೆ ತಗ್ಗಿಸುತ್ತಾರೆ. ಯಾರಾದರೂ 'ಬೆಂಕಿ' ಎಂದು ಉತ್ತರಿಸಿದರೆ 'ಹೌದಲ್ಲ!' ಎಂಬ ಉದ್ಗಾರ ಹೊರಡುತ್ತದೆ. ಬೆಂಕಿಯ ಕ್ರಿಯಾವರ್ತನೆಯನ್ನು ಸರ್ವಜ್ಞ ಈ ತ್ರಿಪದಿಯಲ್ಲಿ ಸೊಗಸಾಗಿ ಕಟ್ಟಿಕೊಟ್ಟಿದ್ದಾನೆ.

**ಕಚ್ಚಿದಡುರಿವುದು ಕಿಚ್ಚಲ್ಲ ಕಾಣಿರೆ**
**ಅಚ್ಚರಿಯಲ್ಲ ಅರಿದಲ್ಲ ಈ ಮಾತು**
**ನಿಚ್ಚಯವಲ್ಲ ಸರ್ವಜ್ಞ**

ಬಹಳಷ್ಟು ಸಲ ನಾವು ನಮಗೆ ತೀರಾ ಪರಿಚಿತವಾಗಿರುವ ವಸ್ತುವಿನ ಗುಣಸ್ವಭಾವಗಳನ್ನೇ ಗಮನಿಸಿರುವುದಿಲ್ಲ, ಗಮನಿಸಿದ್ದರೂ ಅದರ ಬಗ್ಗೆ ಯಾರಾದರೂ ತಟ್ಟನೆ ಪ್ರಸ್ತಾಪಿಸಿದಾಗ ಉತ್ತರಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಇಂತಹ ಚೋದ್ಯಗಳನ್ನು ಸರ್ವಜ್ಞ ತನ್ನ ತ್ರಿಪದಿಗಳಲ್ಲಿ ಅಭಿವ್ಯಕ್ತಿಸಿದ್ದಾನೆ.

ಅಂತಹ ಒಂದು ಚೋದ್ಯ ಇಲ್ಲಿದೆ. ಕಚ್ಚಿದರೆ ಉರಿಯುವುದು, ಹೀಗೆಂದ ತಕ್ಷಣ ನಾವು ಏನು ಕಚ್ಚಿದರೆ ಎಂದು ಆಲೋಚಿಸತೊಡಗುತ್ತೇವೆ. ಉರಿ ಎಂದಾಕ್ಷಣ ಅದು ಬೆಂಕಿಯೆ ಆಗಿರಬಹುದು ಎಂದು ಊಹಿಸುತ್ತೇವೆ. ಆದರೆ ಸರ್ವಜ್ಞ ಹೇಳುತ್ತಾನೆ – ಉರಿಯುತ್ತೆ, ಆದರೆ ಅದು ಬೆಂಕಿ ಅಲ್ಲ, ಹಾಗಿದ್ದರೆ ಏನಿರಬಹುದು? ಚೇಳು, ಲಕ್ಷ್ಮಿಚೇಳು ಇತ್ಯಾದಿ ಕಲ್ಪಿಸಿಕೊಳ್ಳುತ್ತೇವೆ. ಆದರೆ ಇದು ನಮಗೆ ಆಶ್ಚರ್ಯದ ವಸ್ತುವೂ ಅಲ್ಲ, ಅಪರಿಚಿತವೂ ಅಲ್ಲ ಮತ್ತು ಎಲ್ಲರ ವಿಷಯದಲ್ಲೂ ಹೀಗೆಯೇ ಆಗುತ್ತದೆ ಎನ್ನುವ ನಿಶ್ಚಯವೇನಿಲ್ಲ ಎನ್ನುತ್ತಾನೆ.

ಹಾಗಾದರೆ ಇದೇನಿರಬಹುದು? ಇಲ್ಲಿ ನಾವು 'ಏನು ಕಚ್ಚಿದರೆ' ಎಂಬುದರ ಬದಲಾಗಿ 'ಏನನ್ನು ಕಚ್ಚಿದರೆ'..... ಎಂದು ಪ್ರಶ್ನೆಯನ್ನು ಬದಲಾಯಿಸಿಕೊಂಡರೆ 'ಮೆಣಸಿನಕಾಯಿ' ಎಂಬ ಉತ್ತರ ಹೊಳೆಯುವ ಸಾಧ್ಯತೆ ಇದೆ.

(ಮುಂದುವರಿಯುತ್ತದೆ)

# ಮಹೇಶಸ್ಥಲ : ಒಂದು ಚಿಂತನೆ

ಪ್ರಕಾಶ ಗಿರಿಮಲ್ಲನವರ

(ಹಿಂದಿನ ಸಂಚಿಕೆಯಿಂದ)

ಗಾನಯೋಗಿ ಪಂಚಾಕ್ಷರ ಗವಾಯಿಗಳ ಜೀವನದ ಅಂತ್ಯಾವಸ್ಥೆಯಲ್ಲಿ ವೈದ್ಯರು ಶಸ್ತ್ರಚಿಕಿತ್ಸೆ ಮಾಡುತ್ತೇವೆ ಎಂದು ಒತ್ತಾಯಿಸಿದರು. ಆಗ ಗವಾಯಿಗಳು ಇದು ಲಿಂಗಶರೀರ. ಈ ಲಿಂಗಮಯ ಶರೀರಕ್ಕೆ ನಿಮ್ಮ ಶಸ್ತ್ರಚಿಕಿತ್ಸೆ ಅವಶ್ಯಕತೆ ಇಲ್ಲ ಎಂದು ಹೇಳಿದರು. ವೈದ್ಯರು ಶಸ್ತ್ರಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳುವುದರೊಳಗಾಗಿ ಗವಾಯಿಗಳು ಲಿಂಗೈಕ್ಯರಾದರು. ಇದು ಅಚಲ ನಿಷ್ಠೆಗೆ ಒಂದು ಉದಾಹರಣೆ.

ಶಿವಮೊಗ್ಗ ಪ್ರದೇಶದಲ್ಲಿಯೇ ಕಬ್ಬೂರ ಶರಣರು ಎಂಬ ಮಹಾನುಭಾವರು ಆಗಿ ಹೋದರು. ಅವರು ಮಹೇಶಸ್ಥಲದ ನಿಷ್ಠೆಯನ್ನು ಎಷ್ಟು ಅನನ್ಯವಾಗಿ ಆಚರಿಸಿದರು ಎಂದರೆ– ಒಮ್ಮೆ ಮೈಸೂರು ಮಹಾರಾಜರಿಗೆ ಯಾರೋ ಇಂಥ ಅನುಭಾವಿಗಳೊಬ್ಬರು ಇದ್ದಾರೆ, ಅವರ ದರ್ಶನ ಪಡೆದುಕೊಳ್ಳಿ ಎಂದು ಹೇಳಿದರು. ಆಗ ಮಹಾರಾಜರು ತಮ್ಮ ಸೇವಕರನ್ನು ಕಳಿಸಿ ಕಬ್ಬೂರು ಲಿಂಗಪ್ಪ ಶರಣರಿಗೆ ಆಹ್ವಾನ ನೀಡಿದರು. ಶರಣರು ತಾವು ಬರುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದರು. ಆಗ ಮಹಾರಾಜರು ಇಂತಹ ಅನುಭಾವಿಗಳನ್ನು ನಾನು ಅರಮನೆಗೆ ಕರೆಸಲು ಹೊರಟ್ಟಿದ್ದು ನನ್ನ ತಪ್ಪು. ನಾನೇ ಇಂಥ ದಿನ ಅವರ ದರ್ಶನಕ್ಕೆ ಕಬ್ಬೂರಿಗೆ ಬರುತ್ತೇನೆ ಎಂದು ಹೇಳಿ ಕಳಿಸಿದರು. ಆಗ ಶರಣರು ಮಹಾರಾಜರು ಇಲ್ಲಿ ಬಂದು ಏನು ಮಾಡುವರು, ಬರಬೇಡಿ ಎಂದು ಹೇಳಿಕಳಿಸಿದರು. ಮಹಾರಾಜರು ಕಬ್ಬೂರಿಗೆ ಬರುವುದರೊಳಗಾಗಿ ಶರಣರು ಲಿಂಗೈಕ್ಯರಾದರು. ಇದು ಕೂಡ ಅವರ ಮಹೇಶ ನಿಷ್ಠೆಯನ್ನು ತೋರಿಸುತ್ತದೆ. ಎಂಥ ಬಿಕ್ಕಟ್ಟಿನ ಪ್ರಸಂಗ ಬಂದರೂ ತಾನು ಹಿಡಿದ ನೇಮಗಳಿಗೆ ಕುಂದು ಬಾರದಂತೆ ಆಚರಿಸುವುದೇ ಮಹೇಶ್ವರನ ಲಕ್ಷಣವು. ಬಾಲ್ಯಾವಸ್ಥೆಯಲ್ಲಿ ನಿಯಮಬದ್ಧನಾದ ವಿದ್ಯಾರ್ಥಿಯೊಬ್ಬ ವ್ಯವಸ್ಥಿತವಾಗಿ ಅಧ್ಯಯನ ಮಾಡಿ ತನ್ನ ಗುರಿಯನ್ನು ಸಾಧಿಸುವ ಹಾಗೆ ಮಹೇಶನು ಗುರುಲಿಂಗಜಂಗಮಸಂಬಂಧವಾದ ನಿತ್ಯನೇಮಗಳನ್ನು ಬಿಟ್ಟುಬಿಡದೆ ಆಚರಿಸುವನು. ತಾನು ಹಿಡಿದ ವ್ರತ ನೇಮಾದಿ ಗಳಿಗೇನಾದರೂ ಭಂಗ ಬಂದರೆ ಭೀಷ್ಮಶಪಥವನ್ನು ತೊಟ್ಟು ವಜ್ರದಂತೆ ಕಲ್ಲುಮನಸ್ಸು ಮಾಡಿ ಪರಮಾತ್ಮನ ಅನುಗ್ರಹಕ್ಕೆ ಹಂಬಲಿಸುವನು.

ಮಹೇಶನು ನೋಡಬಾರದ ವಿಷಯಗಳನ್ನೆಂದಿಗೂ ಕಣ್ಣೆತ್ತಿ ನೋಡಲಾರನು. ಕೇಳಬಾರದ ವಿಷಯಗಳನ್ನೆಂದಿಗೂ ಕೇಳಲಾರನು. ಆಡಬಾರದ ನುಡಿಗಳನ್ನೆಂದಿಗೂ ನುಡಿಯನು. ಮುಟ್ಟಬಾರದ ಪರಧನ ಪರಸ್ತ್ರೀಯರನ್ನೆಂದಿಗೂ ಬಯಸಲಾರನು. ಆದರೆ ಆತ ತನ್ನ ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚೆ ಈ ಪಂಚೇಂದ್ರಿಗಳು ಲಿಂಗಸೇವೆಯಲ್ಲಿ ಸದಾಕಾಲ ನಿರತವಾಗುವಂತೆ ನಿಷ್ಠೆಯಿಂದ ಅಭ್ಯಾಸ ಮಾಡುವನು. ಇಂಥ ಕ್ರಿಯೆಗಳಿಂದಲೇ ಆತನ ಸ್ವಭಾವ ಸುಸ್ಥಿರವಾಗಿ ಸಾಧನೆ ಎತ್ತರಕ್ಕೆ ಏರುವುದು. ಇಂದ್ರಿಯಗಳ ಬಲೆಗೆ ಸಿಲುಕಿ ಪೇಚಾಡುವವರು ಜನರಲ್ಲಿ ನಿಂದೆ, ಅಪಹಾಸ್ಯಗಳಿಗೆ ಒಳಗಾಗುವವರು. ಆದರೆ ಇಂದ್ರಿಯಗಳ ದುಷ್ಟ ಪ್ರವೃತ್ತಿಯನ್ನು ಸದ್ವಿಷಯಗಳ ಕಡೆಗೆ ಎಳೆದು ತರುವಂತಹವರು ಈ ಲೋಕದ ಜನರಿಂದ ಗೌರವಿಸಲ್ಪಡುತ್ತಾರೆ.

ನಿಷ್ಠೆಯೆಂದರೆ ಮತ್ತೇನೂ ಅಲ್ಲ. ಅದು ಪ್ರತಿನಿತ್ಯದ ತಪಸ್ಸು. ಹಿಂದಿನ ಕಾಲದಲ್ಲಿ ಋಷಿಗಳು, ಅಸುರರು, ದೇವತೆಗಳು ತಮ್ಮ ದೇಹವನ್ನು ದಂಡಿಸಿ ಉಗ್ರತರವಾದ ತಪಸ್ಸನ್ನು ಆಚರಿಸುತ್ತಿದ್ದರು ಎಂದು ಓದಿದ್ದೇವೆ. ಆದರೆ ಆ ತಪಸ್ಸುಗಳು ನಿರಂತರವಾಗಿರದೆ ಯಾವುದಾದರೊಂದು ದೈವೀಶಕ್ತಿಯನ್ನು ಪ್ರಸನ್ನಗೊಳಿಸಿ ಅದರಿಂದ ತಮಗೆ ಬೇಕಾದ ವರವನ್ನು ಪಡೆದುಕೊಂಡುಬಿಟ್ಟರೆ ಮುಗಿಯಿತು. ಅಲ್ಲಿಗೆ ಆ ತಪಶ್ಚರ್ಯದ ಪರ್ಯವಸಾನವಾಗುತ್ತಿತ್ತು. ಆ ತಪಸ್ಸುಗಳು ಕೆಲಕಾಲದ ಮಟ್ಟಿಗೆ ನಡೆದ ಬಳಿಕ ದೈವೀ ಸಾಕ್ಷಾತ್ಕಾರವಾಗಿ ಬೇಡಿದ ಇಷ್ಟಾರ್ಥಗಳು ಸಿದ್ಧಿಸುತ್ತಿದ್ದವೆಂಬುದೇನೋ ನಿಜ. ಆದರೆ ಆ ವ್ಯಕ್ತಿಗಳು ಮುಂದೆ ಅಲ್ಲಿಗೇ ಆ ತಪಸ್ಸನ್ನು ನಿಲ್ಲಿಸಿಬಿಡುತ್ತಿದ್ದರು. ಅದರಿಂದ ಅವರ ಶಕ್ತಿಯು ದಿನೇದಿನೇ ಕುಗ್ಗುತ್ತ ಕೊನೆಗೆ ಸಂಪೂರ್ಣ ನಾಶವಾಗುತ್ತಿತ್ತು. ಆದರೆ ಮಹೇಶನ ತಪಸ್ಸು ಯಾವುದೋ ಒಂದು ಇಷ್ಟಾರ್ಥಸಿದ್ಧಿಗಾಗಿ ಕೆಲಕಾಲದವರೆಗೆ ಮಾತ್ರ ಆಚರಿಸುವಂತಹದಲ್ಲ. ಅದು ನಿಷ್ಕಾಮಬುದ್ಧಿಯಿಂದ ನಿರಂತರ ನಡೆಯುವ ತಪಸ್ಸು.

ಏಕಕಾಲಕ್ಕೆ ಉಗ್ರ ತಪಸ್ಸು ಮಾಡಿ ಅತ್ಯದ್ಭುತ ಸಾಮರ್ಥ್ಯ ಪಡೆದುಕೊಳ್ಳುವುದಕ್ಕಿಂತ ಪ್ರತಿನಿತ್ಯ ಅಲ್ಪಸ್ವಲ್ಪ ಶಕ್ತಿಯನ್ನು ಹೆಚ್ಚಿಸುತ್ತ ಹೋಗುವುದು ಉತ್ತಮ. ಒಮ್ಮೆಲೇ ಸಂಪಾದಿಸಿ ಶಕ್ತಿಯು ಒಮ್ಮೆಲೆ ನಷ್ಟವಾಗುವ ಸಂಭವ ಹೆಚ್ಚು. ದೊಡ್ಡದೊಂದು ಬಣವಿಗೆ ಬೆಂಕಿ ಬಿದ್ದರೆ ಕ್ಷಣಾರ್ಧದಲ್ಲಿ ಸುಟ್ಟು ಬೂದಿಯಾಗುವಂತೆ, ಒಮ್ಮೆಲೆ ಪಡೆದ ಸಿದ್ಧಿಯು ನಾಶವಾಗುವುದು. ಆದರೆ ಕ್ರಮೇಣ ಸಂಪಾದಿಸಿದ ಶಕ್ತಿಯು ಬೂದಿ ಮುಚ್ಚಿದ ಕೆಂಡದಂತೆ ಹೆಚ್ಚು ಕಾಲ ಉಳಿಯುವುದು. ದೊಡ್ಡದೊಂದು ಕಟ್ಟಿಗೆಯ ತುಂಡಿಗೆ ಹತ್ತಿದ ಬೆಂಕಿಯು ಸಾವಕಾಶವಾಗಿ ಪ್ರಜ್ವಲಿಸುತ್ತ ಹೋಗುವಂತೆ ಮಹೇಶನ ಲಿಂಗಪೂಜೆಯ ಶಕ್ತಿಯು ನಂದಾದೀಪದಿಂದ ನಿತ್ಯನಿರಂತರವಾಗಿ ಬೆಳಗುತ್ತ ಹೋಗುವುದು.

ಭಕ್ತನಾದವನು ಮಹೇಶನಾಗಬೇಕಾದರೆ ಮೊದಲು ಆತನು ಗುರುವಿನಿಂದ ಲಿಂಗದೀಕ್ಷೆಯನ್ನು ಪಡೆಯಬೇಕು. ಗುರುವಿನಿಂದ ವಿಧಿಪೂರ್ವಕವಾಗಿ ದೀಕ್ಷೆ ಹೊಂದದೆ

ತನ್ನಷ್ಟಕ್ಕೆ ತಾನೇ ನೇಮವ್ರತಗಳನ್ನು ಹಿಡಿದು ಮಹೇಶ್ವರನಾಗುವೆನೆಂಬುದು ಅಸಂಗತವಾದುದು. 'ಮಂಗಾ ನಿನಗೆ ಲಿಂಗವನಾರು ಕಟ್ಟಿದರೆಂದರೆ, ಮಂಗಳವಾರ ಮೈತೊಳೆದುಕೊಂಡು ನಾನೇ ಕಟ್ಟಿಕೊಂಡೆನೆಂದನಂತೆ' ಎಂಬ ಗಾದೆ ಮಾತು ಇಂಥವರನ್ನು ನೋಡಿಯೇ ಹುಟ್ಟಿರಬೇಕು. ಲಿಂಗಧಾರಣ ದೀಕ್ಷೆ ಬೇರೆ, ಕ್ರಿಯಾಚಾರ ದೀಕ್ಷೆ ಬೇರೆ. ಲಿಂಗದೀಕ್ಷೆ ಭಕ್ತಸ್ಥಲದವನಿಗೆ, ಕ್ರಿಯಾದೀಕ್ಷೆ ಮಹೇಶ್ವರ ಸ್ಥಲದವರಿಗೆ.

**ಸಾಮಾಜಿಕ ನೆಲೆ**

ಮಹೇಶನು ಭಿಕ್ಷೆ ಬೇಡುವುದು ತನ್ನ ಸಲುವಾಗಿಯಲ್ಲ. ತಾನು ಸ್ವತಃ ಈ ಕಾಯಕವನ್ನು ಮಾಡಿ ತನ್ನ ಕುಟುಂಬವನ್ನು ಸಲಹಬೇಕು. ಭಿಕ್ಷೆಯ ಮೂಲಕ ಸಂಗ್ರಹಿಸಿದ ಧನಧಾನ್ಯಗಳನ್ನು ತನಗಾಗಿ ಮಾತ್ರ ಉಪಯೋಗಿಸಿಕೊಳ್ಳದೆ ಸಮಾಜಕ್ಕಾಗಿ ಉಪಯೋಗಿಸುವುದೇ ಮಹೇಶನ ಕರ್ತವ್ಯ. ಸಾರ್ವಜನಿಕ ಕಾರ್ಯಕ್ಕಾಗಿ ಭಿಕ್ಷೆ ಬೇಡುವುದು ಮಹೇಶನ ಉಪಕ್ರಮ. ಭಕ್ತನಾದವನಿಗೆ ಭಿಕ್ಷಾಧಿಕಾರವಿಲ್ಲ. ಅದು ಮಹೇಶ ಸ್ಥಲಕ್ಕೆ ಬಂದಾಗ ಮಾತ್ರ ದೊರಕುತ್ತದೆ. ಭಕ್ತಸ್ಥಲದಲ್ಲಿ ಸಾಧಕನ ಮನಸ್ಸು ಸ್ಥಿರವಾಗಿರುವುದಿಲ್ಲ. ಆದುದರಿಂದ ಭಿಕ್ಷೆಯಿಂದ ಬಂದ ಸಾರ್ವಜನಿಕ ಹಣವನ್ನು ಎತ್ತಿಹಾಕುವ ಸಂಭವವಿರುತ್ತದೆ. ಮಹೇಶನು ತನ್ನ ಸಲುವಾಗಿ ಯಾವುದನ್ನೂ ಇಟ್ಟುಕೊಳ್ಳದೆ ಸರ್ವಸ್ವವನ್ನೂ ಗುರುವಿಗೆ ಧಾರೆಯೆರೆದು ದೀಕ್ಷಾಬದ್ಧನಾಗಿ ಸಮಾಜಸೇವೆಯಲ್ಲಿ ನಿರತನಾಗಿರುವುದರಿಂದ ಸಾರ್ವಜನಿಕ ಧನ ಅಪವ್ಯಯವಾಗುವ ಭಯವಿಲ್ಲ. ನಿಸ್ವಾರ್ಥಬುದ್ಧಿಯ ಮಹೇಶನು ಸಮಾಜೋದ್ಧಾರಕ್ಕಾಗಿ ಧನಧಾನ್ಯ ಸಂಗ್ರಹಿಸಿ ವಿನಿಯೋಗಿಸಿದ ಪರಿಣಾಮವೇ ಇಂದು ಮಠಗಳು ಸಾರ್ವಜನಿಕ ಸೇವಾಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಹೆಚ್ಚು ಸಾಧ್ಯವಾಗಿದೆ.

ಮಹೇಶಸ್ಥಲದಲ್ಲಿ ನಿಂತ ದೀಕ್ಷಾಬದ್ಧನಾದ ಸಾಧಕನು ತನ್ನ ಸ್ವಾರ್ಥವನ್ನು ಬದಿಗೊತ್ತಿ ಕೇವಲ ಸಮಾಜಹಿತದ ಕಾರ್ಯದಲ್ಲಿ ತೊಡಗಿಸಿಕೊಳ್ಳುವನು. ಧಾರ್ಮಿಕ, ನೈತಿಕ, ಸಾಮಾಜಿಕ, ಸಾಂಸ್ಕೃತಿಕ ಮೊದಲಾದ ವಿಷಯಗಳನ್ನು ಕುರಿತು ಉಪದೇಶ ಮಾಡುತ್ತ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡುವನು. ಕಾಲಮಾನಕ್ಕೆ ತಕ್ಕಂತೆ ಸಮಾಜ ಬದಲಾವಣೆಯತ್ತ ಸಾಗಿದಂತೆ ತನ್ನ ಚಟುವಟಿಕೆಗಳನ್ನು ಬದಲಾಯಿಸಿಕೊಳ್ಳುತ್ತ ಹೋಗುವನು ಮಹೇಶಸ್ಥಲದ ಸಾಧಕ. ನೂರು ವರ್ಷಗಳ ಹಿಂದೆ ನಮ್ಮ ಸಮಾಜದಲ್ಲಿ ಅಜ್ಞಾನ ಅನಕ್ಷರತೆ ತಾಂಡವಾಡುತ್ತಿರುವುದನ್ನು ನೋಡಿದ ಕೆಲವು ಮಹೇಶಸ್ಥಲದ ಸಾಧಕರು ತಮ್ಮ ಮಠಗಳ ಮೂಲಕ ಉಚಿತ ಪ್ರಸಾದನಿಲಯ ಸ್ಥಾಪಿಸಿ ಬಡ ಮಕ್ಕಳ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟರು. ಇಂದು ಸರಕಾರ ಮಾಡಬೇಕಾದ ಶೈಕ್ಷಣಿಕ ಸೇವಾಕಾರ್ಯವನ್ನು ಆಗಿನಿಂದಲೂ ಮಠಗಳು ನಿರ್ವಹಿಸುತ್ತುರುವುದು ಅನನ್ಯ. ಮಹೇಶಸ್ಥಲದ ಸಾಧಕನು ಇಷ್ಟಲಿಂಗದಲ್ಲಿ ಅತ್ಯಂತ ನಿಷ್ಠೆಯುಳ್ಳವನಾಗಿರುತ್ತಾನೆ. ಆತ

ಅನ್ಯದೈವಗಳಿಗೆ ಎಂದಿಗೂ ನಮಸ್ಕಾರ ಮಾಡಲಾರನು. ಲಿಂಗಾಯತರು ಲಿಂಗವಂತರಾಗಿ ಅನ್ಯಧರ್ಮದ ಆಚರಣೆಗಳಲ್ಲಿ ಮನಸ್ಸು ಮಾಡುವ ತಿಳಿಗೇಡಿ ಭಕ್ತರಿಗೆ ತಿಳುವಳಿಕೆ ನೀಡುವವನು ಮಹೇಶ. ವೈದಿಕ ಧರ್ಮದಲ್ಲಿ ಹೇಳಿದ ಯಜ್ಞಯಾಗಾದಿ ಹಿಂಸಾಕರ್ಮಗಳನ್ನು ಬಸವಾದಿ ಶರಣರು ವಿರೋಧಿಸಿ ನುಡಿದ ಮಾಹೇಶ್ವರ ಸ್ಥಲದ ವಚನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವರ ವಿರೋಧವು ಲಿಂಗಾಯತರಲ್ಲಿ ಲಿಂಗನಿಷ್ಠೆಯನ್ನು ಬೆಳೆಸುವುದಾಗಿದೆಯೇ ಹೊರತು ಪರಧರ್ಮದೂಷಣೆಯಲ್ಲವೆಂಬುದು ಸ್ಪಷ್ಟವಾಗುತ್ತದೆ.

ಮಹೇಶನು ಅಂತರಂಗ–ಬಹಿರಂಗ ಎರಡರಲ್ಲಿಯೂ ಪರಿಶುದ್ಧನಾಗಿರುವನು. ಕೆಲವರು ಬಾಹ್ಯದಲ್ಲಿ ವಿಭೂತಿ, ರುದ್ರಾಕ್ಷಿ, ಕಾವಿ ಲಾಂಛನ ಮುಂತಾದ ಧಾರ್ಮಿಕ ಚಿಹ್ನೆಗಳನ್ನು ಧರಿಸಿ ಶೋಭಿಸುವರು. ಒಳಗೊಳಗೆ ದ್ವೇಷ, ಅಸೂಯೆ, ಕಾಮಕ್ರೋಧಾದಿಗಳನ್ನು ತುಂಬಿಕೊಂಡಿರುವರು. ಅವರು ಹೇಳುವುದೊಂದು, ಮಾಡುವುದೊಂದು. ಮೇಲೆ ಬೆಳಕು, ಒಳಗೆ ಹುಳುಕು. 'ಮಾತಿನಂತೆ ಮನವಿಲ್ಲದ ಜಾತಿಡೊಂಬರ ನೋಡಿ ನಗುವ ನಮ್ಮ ಕೂಡಲಸಂಗಮದೇವಾ' ಎಂದು ಬಸವಣ್ಣನವರು ಹೇಳಿದಂತೆ, ಅಂತರಂಗ–ಬಹಿರಂಗ ಎರಡರಲ್ಲೂ ಶುದ್ಧವಿದ್ದವರನ್ನೇ ಸಮುದಾಯ ನಂಬಿ ಗೌರವಿಸುತ್ತದೆ. ಆದರೆ ಕೆಲವು ಡಾಂಭಿಕರು 'ಶಾಸ್ತ್ರ ಹೇಳುವುದಕ್ಕೆ ಮಾಡಿದೆ, ಬದನೇಕಾಯಿ ತಿನ್ನುವುದಕ್ಕೆ ಮಾಡಿದೆ' ಎಂದು ವಿತಂಡವಾದ ಮಾಡುವವರು, ಹೊತ್ತು ಬಂದಾಗ ಕೊಡೆ ಹಿಡಿಯುವವರು, ಅನುಕೂಲಸಿಂಧುವನ್ನು ಪ್ರತಿಪಾದಿಸುವರು ಎಂದೂ ಮಹೇಶಸ್ಥಲಕ್ಕೆ ಏರಲಾರರು.

ಅಂತರಂಗ ಶುದ್ಧವಾಗಿದ್ದರೂ ಬಾಹ್ಯಾಚಾರವನ್ನು ಬಿಟ್ಟಿರುವುದು ಕೂಡ ಮಹೇಶ ಸ್ಥಲದ ಸಾಧಕನಿಗೆ ಸಲ್ಲದ ಕ್ರಿಯೆ. ಇಂತಹ ಆಚಾರಭ್ರಷ್ಟರೊಡನೆ ಜನರು ಅನ್ನಪಾನಾದಿ ವ್ಯವಹಾರಗಳನ್ನು ಮಾಡಲು ಹಿಂಜರಿಯುವರು. ಅಂತರಂಗ ಕ್ರಿಯಾಭ್ರಷ್ಟನಿಗಿಂತಲೂ ಬಾಹ್ಯಕ್ರಿಯಾಭ್ರಷ್ಟನನ್ನು ಜನರು ಕೀಳಾಗಿ ಕಾಣುವರು. ಆದ್ದರಿಂದ ಮಹೇಶಸ್ಥಲದ ಸಾಧಕನು ತನ್ನ ಒಳಹೊರಗು ಉಭಯರಂಗವನ್ನೂ ಶುದ್ಧವಾಗಿಟ್ಟುಕೊಳ್ಳಬೇಕು. ಇದನ್ನೇ ಬಸವಣ್ಣನವರು 'ಲಾಂಛನಕ್ಕೆ ತಕ್ಕ ಆಚರಣೆಯಿಲ್ಲದಿದ್ದರೆ ಕೂಡಲಸಂಗಮದೇವಾ ನೀ ಸಾಕ್ಷಿಯಾಗಿ ಛೀ ಎಂಬೆ' ಎನ್ನುತ್ತಾರೆ. ಮಹೇಶಸ್ಥಲದ ಸಾಧಕನು ಪಂಚಸೂತಕಗಳನ್ನು ಆಚರಿಸುವುದಿಲ್ಲ. ಶಕುನ, ತೀರ್ಥಯಾತ್ರೆ ಮೊದಲಾದವುಗಳನ್ನು ನಂಬುವುದಿಲ್ಲ. ಪಂಚಾಂಗ, ಮುಹೂರ್ತಗಳನ್ನು ನೋಡಲಾರನು. ಮಹೇಶನಿಗೆ ಪ್ರತಿನಿತ್ಯವೂ ಶುಭದಿನವೇ. ಮಹೇಶನು ಪರರ ಹೊನ್ನು ಹೆಣ್ಣು ಮಣ್ಣುಗಳಿಗೆ ಎಷ್ಟು ಮಾತ್ರವೂ ಹಂಬಲಿಸಲಾರನು. ಹೀಗಾಗಿ ಸಮಾಜದ ಜನರು ಅವರನ್ನು ತಮ್ಮ ಮನೆಗೆ ಕರೆಯಿಸಿ ಊಟೋಪಚಾರಗಳನ್ನು ಮಾಡಿಸುವರು.

ಭಕ್ತ ಮಹೇಶ್ವರರಲ್ಲಿರುವ ವ್ಯತ್ಯಾಸವೇನು? ಭಕ್ತನಿಗೆ ನೇಮ, ವ್ರತಗಳ ಪ್ರತಿಬಂಧವಿಲ್ಲ. ಆದರೆ ಮಹೇಶನು ಅವುಗಳನ್ನು ಅವಶ್ಯವಾಗಿ ಪಾಲಿಸಬೇಕು. ಭಕ್ತನಿಗೆ ಉಪದೇಶ ಮಾಡುವ ಅಧಿಕಾರವಿಲ್ಲ. ಮಹೇಶನಿಗೆ ಆ ಅಧಿಕಾರವಿದೆ. ಲಿಂಗಾಯತ ತತ್ವಗಳನ್ನು ಅರಿತು ಆಚರಿಸಿ ಅವುಗಳನ್ನು ಉಪದೇಶಿಸುವ ಸಾಮರ್ಥ್ಯ ಮಹೇಶನಿಗೆ ಬರುತ್ತದೆ. ಮಹೇಶಸ್ಥಲವು ಭಕ್ತಸ್ಥಲದ ಸಾಧಕನು ಅನುಭಾವಿಯಾಗುವ ಪರಿಯನ್ನು ತಿಳಿಸುತ್ತದೆ. ಹೀಗಾಗಿ ಅನುಭಾವಿಯಾದವನಿಗೆ ಯಾವುದೇ ಕುಲಗೋತ್ರಗಳ ಮೋಹವಿರುವುದಿಲ್ಲ. ಇಷ್ಟಲಿಂಗಧಾರಿಗಳೆಲ್ಲರೂ ಒಂದೇ ಎಂಬ ಭಾವ ಮೂಡುತ್ತದೆ. ಭಕ್ತನು ತನಗೆ ಗಂಡಾಂತರ ಗಳು ಬಂದಾಗ ದೇವರಲ್ಲಿ ಮೊರೆ ಹೋಗುವನು. ಆದರೆ ಮಹೇಶನು ಎಂಥ ಗಂಡಾಂತರ ಬಂದರೂ ಎದೆಗೊಟ್ಟು ತನ್ನ ನಿಷ್ಠೆಯ ಬಲದಿಂದ ಅದನ್ನು ನೀಗಿಕೊಳ್ಳುವನು. ಭಕ್ತನಿಗೆ ಲಿಂಗಧಾರಣ ದೀಕ್ಷೆಯೊಂದೇ ಆಗಿರುತ್ತದೆ. ಆದರೆ ಮಹೇಶನಿಗೆ ಕ್ರಿಯಾಚಾರ ದೀಕ್ಷೆಯಾಗಿರುತ್ತದೆ. ಭಕ್ತನು ಯಾವುದಾದರೊಂದು ಕಾಯಕವನ್ನು ಕೈಕೊಂಡು ತನ್ನ ಕುಟುಂಬವನ್ನು ಮುನ್ನಡೆಸುವನು. ಮಹೇಶನು ತನ್ನ ಸರ್ವಸ್ವವನ್ನೆಲ್ಲ ಗುರುಲಿಂಗ ಜಂಗಮಕ್ಕೆ ಧಾರೆಯೆರೆದು ತಾನು ಪವಿತ್ರ ಕಾಯಕದಿಂದ ಉಪಜೀವನ ನಡೆಸಿ ಪ್ರತಿಫಲಾಪೇಕ್ಷೆಯಿಲ್ಲದೆ ಭಕ್ತರಿಗೆ ಬೋಧೆ ಮಾಡುವನು. ಭಕ್ತನು ಪಂಚಾಂಗ ಮುಹೂರ್ತ ತೀರ್ಥಯಾತ್ರೆ ದೇವರು ದಿಂಡರು ಈ ಮುಂತಾದ ರೂಢಾಚಾರಗಳ ಮೇಲಿನ ವಿಶ್ವಾಸವನ್ನು ಒಮ್ಮೆಲೆ ತೆಗೆದುಹಾಕದೆ ಸಾವಕಾಶವಾಗಿ ಕಡಿಮೆ ಮಾಡಿಕೊಳ್ಳುತ್ತ ಹೋಗುವನು. ಆದರೆ ಮಹೇಶನು ಇವುಗಳ ಮೇಲಿನ ವಿಶ್ವಾಸವನ್ನು ಸಂಪೂರ್ಣವಾಗಿ ತ್ಯಜಿಸಿಬಿಟ್ಟಿರುತ್ತಾನೆ. ಭಕ್ತನು ಹಸುಗೂಸಾಗಿ ತನ್ನ ಇಷ್ಟಲಿಂಗವನ್ನು ತಾಯಿಯಂತೆ ಭಾವಿಸುವನು. ಮಹೇಶನು ಇಷ್ಟಲಿಂಗವು ತನ್ನನ್ನು ಸನ್ಮಾರ್ಗಕ್ಕೆ ಹಚ್ಚುವ ತಂದೆಯೆಂದು ಭಾವಿಸುವನು. ಮಹೇಶನ ಮನಸ್ಸು ಗಟ್ಟಿಯಾಗಿ ಹೆಪ್ಪುಗೊಂಡಿರುತ್ತದೆ. ಭಕ್ತಸ್ಥಲವು ಆಧ್ಯಾತ್ಮಿಕ ಉನ್ನತಿಯ ಪ್ರಥಮ ಸೋಪಾನವಾದರೆ ಮಹೇಶಸ್ಥಲವು ಎರಡನೆಯ ಸೋಪಾನ. ಭಕ್ತನಿಗೆ ಶ್ರದ್ಧೆಯೇ ಮುಖ್ಯ ಗುಣ, ಮಹೇಶನಿಗೆ ನಿಷ್ಠೆಯೇ ಮೂಲಾಧಾರ.

ನಿಷ್ಠಾಭಕ್ತಿಯೆಂದರೆ ಒಮ್ಮೆ ನಂಬಿದ ವಸ್ತುವನ್ನಾಗಲಿ ಅಥವಾ ವ್ಯಕ್ತಿಯನ್ನಾಗಲಿ ಯಾವಾಗಲೂ ನಂಬಿಕೊಂಡಿರುವುದು ಮತ್ತು ತಾನು ನಂಬಿದ ತತ್ವವನ್ನೇ ಚಾಚೂತಪ್ಪದೆ ಆಚರಿಸುವುದು. ಅಜ್ಞರಾದ ಜನರು ಏನೂ ಅರ್ಥವಿಲ್ಲದಂತಹ ದೇಶಕಾಲ ಪರಿಸ್ಥಿತಿಗೆ ಬಾಧಕವಾಗುವ ಕೆಲವು ರೂಢಾಚಾರಗಳನ್ನು ಆಚರಿಸುವರು. ಮಹೇಶ ಸ್ಥಲದ ಸಾಧಕನು ಈ ಆಚರಣೆಗಳ ಹಿಂದಿರುವ ಅಂಧಶ್ರದ್ಧೆ, ಮೂಢನಂಬಿಕೆಗಳ ಕುರಿತು ಜಾಗೃತಿ ಮೂಡಿಸುವನು.

**ಅನುಭಾವಿಕ ನೆಲೆ**

ಶರಣ ಧರ್ಮವು ಅನುಭಾವಪ್ರಧಾನವಾದ ಧರ್ಮ. ಸಾಧಕನು 'ತಾನು ಯಾರು' ಎಂಬುದನ್ನು ಅರಿತುಕೊಳ್ಳಲು ಸಾಗುವ ಹಾದಿಯೇ ಷಟ್‌ಸ್ಥಲ ಮಾರ್ಗ. ಅದರಲ್ಲೂ

ಮಾಹೇಶಸ್ಥಲದ ಸಾಧಕನು ಅನುಭಾವದ ನೆಲೆಯಲ್ಲಿ ಹೆಚ್ಚು ಚಲನಶೀಲನಾಗಿರುತ್ತಾನೆ. ಆನುಭಾವಿಕ ನೆಲೆಯಲ್ಲಿ ನಿಂತ ಸಾಧಕನಿಗೆ ತರ್ಕ, ವಾದ, ಊಹೆ, ಪೂರ್ವಪಕ್ಷ, ಉತ್ತರಪಕ್ಷ, ಇಂಥ ವಾದವಿವಾದದ ವಿಷಯಗಳಿಗೆ ಇಂಬು ಇರುವುದಿಲ್ಲ. ಆದರೆ ಮನುಷ್ಯನು ಹೇಗೆ ನಡೆಯಬೇಕು, ಮನಸ್ಸನ್ನು ಹೇಗೆ ಶುದ್ಧೀಕರಿಸಿಕೊಳ್ಳಬೇಕು. ತನ್ನಲ್ಲಿ ಪರಮಾತ್ಮನ ಗುರುಗಳನ್ನು ಹೇಗೆ ಬರಮಾಡಿಕೊಳ್ಳಬೇಕು. ಇಂಥ ವಿಷಯಗಳೇ ಮಾಹೇಶಸ್ಥಲದಲ್ಲಿ ಬರುತ್ತವೆ.

ಷಟ್‌ಸ್ಥಲ ಮಾರ್ಗ, ಒಂದು ಸರಳ, ಸುಂದರ ಮತ್ತು ಸುಲಭವಾದ ಸೋಪಾನ. ಷಟ್‌ಸ್ಥಲ ತತ್ವಗಳಿಗೆ ಸಂಬಂಧಿಸಿದ ಕ್ಲಿಷ್ಟ ಪದಗಳನ್ನು ಹೊರಗಿಟ್ಟು, ಪವಿತ್ರ ಭಾವನೆಯಿಂದ ಷಟ್‌ಸ್ಥಲ ಮಾರ್ಗ ಹಿಡಿದಾಗ ಅದು ಕಷ್ಟದಾಯಕವಾಗಿ ತೋರುವುದಿಲ್ಲ. ಪ್ರೇಮ ಮತ್ತು ಪವಿತ್ರಭಾವ ಕೊಟ್ಟು ಹೋಗಬಾರದ ಹಾಗೆ ಅವುಗಳನ್ನು ಭಗವಂತನ ಅಡಿಯಲ್ಲಿ ಅರ್ಪಿಸುವುದರಿಂದ ಭಕ್ತಸ್ಥಲದ ಮಾರ್ಗ ಸುಲಭವಾಗುತ್ತದೆ. ನಮ್ಮದೆಂಬುದು ಏನಾದರೂ ಇದ್ದರೆ ಅದು ಕೇವಲ ಅಮೋಘವಾದ ಭಾವಸಂಪತ್ತು. ಅಂಥ ಭಾವವನ್ನು ವಸ್ತುಗಳ ಮಧ್ಯೆ ಇಡುವುದಕ್ಕಿಂತ ವಸ್ತುಗಳ ನಿರ್ಮಾಪಕ ಅಥವಾ ವಸ್ತುಗಳ ಹಿಂದೆ ಇರುವ ಒಂದು ಶಕ್ತಿಯಲ್ಲಿ ಇಟ್ಟರೆ ಅದನ್ನು ಷಟ್‌ಸ್ಥಲಮಾರ್ಗವೆಂದು ಗುರುತಿಸಬಹುದು.

ಭಕ್ತಸ್ಥಲದ ಭಕ್ತಿಯ ಮೊದಲ ರೂಪವಾದ ಶ್ರದ್ಧೆ ಒಂದು ಅರ್ಥಪೂರ್ಣವಾದ ವೈಚಾರಿಕ ನಂಬಿಕೆ. ಇದು, ದೇವನಿದ್ದಾನೆ, ಸತ್ಯವಿದೆ ಮತ್ತು ತತ್ವವಿದೆ ಎಂಬುದನ್ನು ಅಲ್ಲಗಳೆಯದ ನಂಬಿಕೆ. ದೇವರು ಪರಮಸತ್ಯ. ಕಾಲ ಅದರ ಮೇಲೆ ಪ್ರಭಾವ ಬೀರಲಾರದು. ದೇಶ ಅದನ್ನು ಕಟ್ಟಿಹಾಕುವುದಿಲ್ಲ; ವಸ್ತುಗಳು ಅದನ್ನು ಕೆಡಿಸುವುದಿಲ್ಲ. ಈ ಮೂರು ಸತ್ಯಗಳು ಪರಶಿವನ ಲಕ್ಷಣಗಳು. ಇಷ್ಟು ಕಾಲದವರೆಗೆ ದೇವ ಇಲ್ಲಿರುವನು, ಇಂಥ ಕಾಲದಲ್ಲಿ ಆತನಿಲ್ಲ ಎಂಬ ಕಾಲಮಿತಿ ದೇವನಿಗಿಲ್ಲ. ಜಗತ್ತು ಸತತವಾಗಿ ಬದಲಾಗುತ್ತ ಹೋದರೂ, ಪರಮಾತ್ಮ ಯಾವುದೇ ಬದಲಾವಣೆಗಳಿಲ್ಲದೆ, ಶಾಂತವಾಗಿ ಇರುವಾತ. ಕಾಲ, ದೇಶ ವಸ್ತುಗಳ ಪ್ರಭಾವಕ್ಕೆ ಒಳಗಾಗುವುದಿಲ್ಲ ಆತ. ಮನುಷ್ಯನಿಗೆ ಸುಲಭವಾಗಿ ಎಟುಕುವಂಥ ಎಲ್ಲ ವಸ್ತುಗಳು ಇದ್ದರೂ, ಆತ ಕಾಲ ದೇಶ ಮತ್ತು ವಸ್ತುಗಳ ಪ್ರಭಾವಕ್ಕೆ ಒಳಗಾಗುವುದನ್ನು ತಪ್ಪಿಸಲಾರ. ಆದ್ದರಿಂದ, ಮನುಷ್ಯನಲ್ಲಿ ಬದಲಾವಣೆಗಳು ಸಹಜ. ಆದರೆ, ಪರಮಾತ್ಮ ಹಾಗಲ್ಲ. ಅಥವಾ ಸತ್ಯವಸ್ತು ಹಾಗಲ್ಲ; ಅಲ್ಲಿ ಕಾಲ ಶಾಂತ, ದೇಶ ಶೂನ್ಯವಾಗಿರುವುದು. ಅದು ಮಹಾಮೌನ. ದೇವನಿದ್ದಾನೆ ಎಂದು ಭಾವಿಸುವುದು ಶ್ರದ್ಧೆ.

ಶೂನ್ಯವನ್ನು ಪ್ರವೇಶಿಸಬೇಕಾದರೆ ಶ್ರದ್ಧೆ ಬೇಕು. ಮಾಹೇಶ್ವರ ಸ್ಥಲಕ್ಕೆ ಬಂದಾಗ ಶ್ರದ್ಧೆ ಘನಗೊಳ್ಳುವುದು ಮತ್ತು ಅದು ನಿಷ್ಠೆಯಾಗಿ ಪರಿಣಮಿಸುವುದು. ಅಲ್ಲಿರುವುದು ಪರಮಸತ್ಯ. ವಸ್ತುಗಳ ಮೇಲಿನ ಪ್ರೀತಿಯನ್ನು ಪರಮಸತ್ಯದತ್ತ ತಿರುಗಿಸುವುದು ಭಕ್ತನ ಗುರಿ. ಸದ್ಭಕ್ತಿಗೆ ನಂಬಿಕೆ, ನಿಷ್ಠೆ, ಏಕನಿಷ್ಠೆ, ಲಿಂಗನಿಷ್ಠೆ ನಿಸ್ಸಂದೇಹಗಳು ಇರಬೇಕಾದುದು

ಮಾಹೇಶ್ವರಸ್ಥಲ. ಲಿಂಗದಲ್ಲಿ ನೆಟ್ಟ ಭಕ್ತಿಯೇ ನಿಷ್ಠಾಭಕ್ತಿ. ಆಕರ್ಷಣೆಗಳನ್ನು ಮೀರಿ ನಿಲ್ಲುವಂಥ ದೃಢತೆ ಬಂದಾಗ ನಿಷ್ಠೆ ಪರಿಣಮಿಸುವುದು. ಜಗತ್ತಿನಲ್ಲಿ ಆಕರ್ಷಣೆಗಳು ಒಂದೆ, ಎರಡೆ! ಶಬ್ದ, ಸ್ಪರ್ಶ, ರಸ, ರೂಪ, ಗಂಧಾದಿಗಳು ಮನಸ್ಸನ್ನು ವಿಚಲಿತಗೊಳಿಸುತ್ತವೆ. ಆಕರ್ಷಣೆಗಳು ಸಾಧಕನ ಷಟ್‌ಸ್ಥಲ ಯಾತ್ರೆಗೆ ಚ್ಯುತಿ ಉಂಟು ಮಾಡುವಂಥವುಗಳು. ಆಮಿಷಗಳಿಗೆ ಒಳಗಾದಾಗ ಪ್ರೇಮ ಪ್ರೀತಿಗಳು ಹೊಯ್ದಾಡಲು ಪ್ರಾರಂಭ ಮಾಡುವವು. ಪ್ರೇಮ, ಹೊಯ್ದಾಡದೆ ಗಟ್ಟಿಯಾದಾಗ ಅದು ಮಾಹೇಶ್ವರ ಸ್ಥಲ. ಮೊದಲನೆಯದು ಶ್ರದ್ಧೆ; ಅದು ಸಹಜಭಾವ; ದೇವನಿದ್ದಾನೆ, ಆತನನ್ನು ನಾನು ಪ್ರೀತಿಸಬೇಕು. ಆದರೆ ಸಾಮಾನ್ಯ ಮನುಷ್ಯನ ಪ್ರೀತಿ ಯಾವಾಗಲೂ ಅಸ್ಥಿರವಾಗಿರುತ್ತದೆ. ವಸ್ತುಗಳನ್ನು ನೋಡಿದ ತಕ್ಷಣ ಪ್ರೇಮ ಆ ವಸ್ತುಗಳತ್ತ ಹರಿಯುತ್ತದೆ. ತಪಸ್ಸಿಗೆ ಕುಳಿತ ಸನ್ಯಾಸಿಯನ್ನು ಕೂಡ ವಸ್ತುಗಳು ಬಿಡುವುದಿಲ್ಲ. ವಸ್ತುಗಳತ್ತ ಸನ್ಯಾಸಿ ಮನಸ್ಸೂ ಹರಿಯುತ್ತದೆ. ಎಲ್ಲಿದೆ ಏಕಾಗ್ರತೆ? ಏಕಾಗ್ರತೆಗೆ ಭಂಗವುಂಟುಮಾಡುತ್ತದೆ ಆಕರ್ಷಣೆ. ಒಂದು ಸಣ್ಣ ಕತೆ ಕೇಳಿ.

ಒಬ್ಬ ಬೌದ್ಧ ಭಿಕ್ಷು ಮರದ ನೆರಳಿನಲ್ಲಿ ಬುದ್ಧನ ಮೂರ್ತಿಯೊಂದರ ಮುಂದೆ ಕುಳಿತಿದ್ದಾನೆ. ಅದು ಮಣ್ಣಿನ ಮೂರ್ತಿ. ಅದರ ಮುಖಮುದ್ರೆಯಲ್ಲಿ ಪ್ರಶಾಂತವಾದ ಭಾವವಿದೆ. ಕಾಮಕ್ರೋಧಾದಿ ಭಾವ ಒಂದಿನಿತಿಲ್ಲ. ಮೂರ್ತಿಯ ಎದುರಿಗೆ ಶಾಂತನಾಗಿ ಕುಳಿತಿದ್ದ ಭಿಕ್ಷು. ಧ್ಯಾನದಲ್ಲಿ ತಲ್ಲೀನನಾಗಿದ್ದ.

ಒಂದು ದಿನ ಆಗರ್ಭ ಶ್ರೀಮಂತ ಶಿಷ್ಯನೊಬ್ಬ ಆಶ್ರಮಕ್ಕೆ ಬಂದ. ಆತನಿಗೆ ಬುದ್ಧನ ಮೇಲೆ, ಭಿಕ್ಷುವಿನ ಮೇಲೆ ಬಹಳ ಭಕ್ತಿ. ಭಿಕ್ಷುವನ್ನು ಉದ್ದೇಶಿಸಿ 'ಸ್ವಾಮಿ ತಾವು ಬಹಳ ದೊಡ್ಡ ಭಿಕ್ಷುಗಳು, ಬಹಳ ಚಿಕ್ಕದಾದ ಮಣ್ಣಿನಿಂದ ತಯಾರಿಸಿದ ಬುದ್ಧನ ಮೂರ್ತಿಯನ್ನು ಇಟ್ಟುಕೊಂಡಿದ್ದೀರಲ್ಲ! ತಮ್ಮಂಥವರು ಮಣ್ಣಿನ ಮೂರ್ತಿಯನ್ನಿಟ್ಟುಕೊಳ್ಳುವುದು ಸರಿಯಲ್ಲ. ನಾನು ಬಂಗಾರದ ಮೂರ್ತಿಯನ್ನು ಮಾಡಿಸಿಕೊಡುತ್ತೇನೆ.' ಎಂದು ಹೇಳಿ ಹೋದ.

ಕೆಲವೊಂದು ವ್ಯಕ್ತಿಗಳ ಪ್ರಾಮಾಣಿಕ ವಿಚಾರಗಳೇ ಹಾಗಿರುತ್ತವೆ. ಬಹಳ ದೊಡ್ಡ ಭಿಕ್ಷುಗಳು; ಮಣ್ಣಿನ ಮೂರ್ತಿ ಪೂಜಿಸಬಾರದು. ಬೆಳ್ಳಿ ಬಂಗಾರದಿಂದ ತಯಾರಿಸಿದ ಮೂರ್ತಿಗಳನ್ನೇ ಅವರು ಪೂಜಿಸಬೇಕು. ಮಣ್ಣಿನ ಮೂರ್ತಿಯನ್ನು ಪೂಜಿಸಿದರೆ, ಅವರ ದೊಡ್ಡಸ್ತಿಕೆಗೆ ಚ್ಯುತಿಯುಂಟಾಗುವುದು. ಇತ್ಯಾದಿ.

ಕೆಲದಿನಗಳ ತರುವಾಯ, ಬಂಗಾರದಿಂದ ತಯಾರಿಸಿದ ಸುಂದರವಾದ ಬುದ್ಧನ ಮೂರ್ತಿಯೊಂದಿಗೆ ಶ್ರೀಮಂತ ವ್ಯಕ್ತಿ ಭಿಕ್ಷುವಿನ ಕಡೆಗೆ ಬಂದ. ಮೂರ್ತಿಯನ್ನು ಭಿಕ್ಷುವಿಗೆ ಅರ್ಪಿಸಿದ. ಭಿಕ್ಷು ಸಂತೋಷಪಟ್ಟ. ಲಕಲಕ ಹೊಳೆಯುವ ಬಂಗಾರದ ಮೂರ್ತಿಯ ಮುಂದೆ ತಪಸ್ಸು ಮಾಡಲು ಕುಳಿತ. ಭಿಕ್ಷುವಿಗೆ ಬುದ್ಧ ಕಾಣಿಸಲಿಲ್ಲ,

ಕೇವಲ ಬಂಗಾರ ಕಾಣತೊಡಗಿತು. ಮಣ್ಣಿನ ಮೂರ್ತಿಯ ಮುಂದೆ ಕುಳಿತಾಗ ಬುದ್ಧ ಕಾಣುತ್ತಿದ್ದ, ಮಣ್ಣು ಕಾಣುತ್ತಿರಲಿಲ್ಲ. ಈಗ ಬುದ್ಧ ಕಾಣುವುದಿಲ್ಲ; ಬಂಗಾರ ಮಾತ್ರ ಕಾಣಿಸುವುದು. ಭಿಕ್ಷುವಿನ ನಿಷ್ಠೆ ಬಂಗಾರದಲ್ಲಿ ಕರಗಿಹೋಗಿತ್ತು. ಬುದ್ಧನನ್ನು ನೋಡುವ ಕಣ್ಣುಗಳು ಹೊಲಸಾಗಿದ್ದವು.

ಇದೇ ಆಕರ್ಷಣೆ. ಆಕರ್ಷಣೆಗಳೇನೆ ಇರಲಿ, ಅವುಗಳ ಪ್ರಭಾವಕ್ಕೆ ಸಿಲುಕದಂತೆ ಅವುಗಳತ್ತ ಮನಸ್ಸು ಎಳೆಯದಂತೆ, ಸೋಲದೆ ಇರುವುದಕ್ಕೆ 'ಮಾಹೇಶ್ವರ ನಿಷ್ಠೆ' ಎಂದರು ಶರಣರು.

ಸಂಪತ್ತು ದೊರೆಯಲು ಅಧಿಕಾರ ಬರಲಿ ಅಥವಾ ಮಾನಮರ್ಯಾದೆಗಳೇ ದೊರೆಯಲಿ, ಯಾವುದರ ಮೇಲೂ ಪ್ರೇಮ, ಮನಸ್ಸು ಚಲ್ಲಾಟವಾಡಬಾರದು. ಹಾಗಿದ್ದಾಗ ಅದು ಮಾಹೇಶ್ವರ. ಮಾಯಾಂ ಹೇಯಾಂ ಸೈವದ್ ರಹೇತ್ ಯಾ ಸಾ ಮಾಹೇಶ್ವರಃ. ಆಕರ್ಷಣೆಗಳನ್ನು ನಿರ್ಲಕ್ಷಿಸಿದ ಸಾಧಕ ಮಾಹೇಶ್ವರ. ವಿಶ್ವಾಸವೇ ಪ್ರಾಣವಾಗಿ ಇರುವಾತ ಭಕ್ತ, ಆ ವಿಶ್ವಾಸದೊಳಗಣ ಏಕೋನಿಷ್ಠೆಯಲ್ಲಿ ನಿಂದಿರುವಾತ ಮಾಹೇಶ್ವರ. ಲಿಂಗದೇವೈಕ್ಯ ನಿಷ್ಠನಾಗಿ, ಅಸತ್ಯ, ಅನೀತಿ ಪರಧನ ಪರಸ್ತ್ರೀ ಮುಂತಾದ ಆಕರ್ಷಣೆಗಳಿಗೆ ಜಗ್ಗದೆ, ಅಪ್ರತಿಮ ಛಲವಂತನಾಗಿ, ಇಂದಿಂಗೆ ನಾಳಿಂಗೆ ಬೇಕೆಂಬ ಪರಿಗ್ರಹ ಭಾವ ತೊರೆದು, ನಯ ವಿನಯಗಳನ್ನು ಮೈಗೂಡಿಸಿಕೊಂಡು ಇರುವಾಗ ಮಾಹೇಶ್ವರನಾಗುತ್ತಾನೆ.

ದಾರಿಹೋಕನಿಗೆ ಅಕಸ್ಮಾತ್ ಏನಾದರೂ ಲಾಭ ದೊರೆತಾಗ ಅಥವಾ ಲಾಭದಾಯಕ ಪ್ರಸಂಗ ಬಂದಾಗ ಎಲ್ಲಿದೆ ಷಟ್‌ಸ್ಥಲ? ಆಗ ಧನಸ್ಥಲವೆ ವಿನಃ ಷಟ್‌ಸ್ಥಲ ನೆನಪಾಗುವುದಿಲ್ಲ. ಶರಣರು ಆಕರ್ಷಣೆಗಳ ಪ್ರಭಾವಕ್ಕೆ ಒಳಗಾಗಲಿಲ್ಲ; ಇದೆ ಅವರ ದೊಡ್ಡ ಸಾಧನೆ.

ಷಟ್‌ಸ್ಥಲದ ಸಕೀಲಗಳ ಕ್ಲಿಷ್ಟತೆಯನ್ನು ಹೊರತುಪಡಿಸಿದಾಗ ಉಳಿಯುವುದು ಸ್ವಚ್ಛ ಸುಂದರವಾದ ಭಾವಪಯಣ. ಮಾಹೇಶ್ವರ ಸ್ಥಲ ಅತ್ಯಂತ ಪ್ರಬಲವಾದ ಸಾಧನೆಯ ಸ್ಥಲ. ಇದು ಮುಂದಿನ ದಾರಿಯನ್ನು ಸುಲಭಗೊಳಿಸುವಂಥದು. ಛಲ ಬೇಕು ಸಾಧಕನಲ್ಲಿ; ಮನಸ್ಸು ಸೋಲಬಾರದು. ಭಗವಂತ ಏನಾದರೂ ಕೊಡಲಿ, ಬಿಡಲಿ, ಮನಸ್ಸಿನ ದೃಢತೆ ಬೇಕು. ಇಂತಹ ದೃಢತೆ ಮೂಡಿದಾಗ ಮಾಹೇಶ್ವರ ಸ್ಥಲ.

ಮಾಹೇಶ್ವರ ಸ್ಥಲದಲ್ಲಿ ದೇವರ ಸ್ಮರಣೆ ಹೆಚ್ಚು ಹೆಚ್ಚಾಗಿ ನಡೆಯುತ್ತದೆ. 'ಜಲಧರ ಕಲಶ ಆಕಾಶಲಿಂಗ ಮೂರ್ತಿ; ಗ್ರಹ ಕುಸುಮಂ ನಕ್ಷತ್ರ ಪುಷ್ಪಂ ಚಂದ್ರಾರ್ಕ ಉನ್ನತ್ತ ನೇತ್ರಮ್ ಶಾಸ್ತ್ರಂ ಷಡಂಗಮ್ ದಶದಿಕ್ ವಸನಂ ದಿವ್ಯ ಲಿಂಗಮ್'; ಅಂದರೆ, ಎಲ್ಲವೂ ಲಿಂಗಮಯ; ಈ ವಿಶ್ವ ಒಂದು ಸುಂದರವಾದ ಲಿಂಗ; ಅದು ಶಾಂತ ಸ್ತಬ್ಧವಾಗಿರುವುದು. ಅದರಲ್ಲಿ ಎಲ್ಲವೂ ಇದೆ. ಅಲ್ಲಿ ಯಾವ ಗದ್ದಲವಿಲ್ಲ. ಎಲ್ಲವನ್ನೂ ತನ್ನಲ್ಲಿ ಇಟ್ಟುಕೊಂಡು

ಶಾಂತವಾಗಿರುವುದು. ಅದು ಲಿಂಗ; ಅಂಥ ಅದ್ಭುತವಾದ ಲಿಂಗವಿದು. ಅಂಥ ಭಾವ ಮೂಡಿಸಿಕೊಳ್ಳುವುದೇ ಸ್ಮರಣೆ. ಇದು ಮಾಹೇಶ್ವರಸ್ಥಲ.

ಶರಣರು ಅತ್ಯಂತ ಸುಂದರವಾದ ವಚನಗಳನ್ನು ರಚಿಸಿದರು. ತಮ್ಮ ವಚನಗಳಲ್ಲಿ ಷಟ್‌ಸ್ಥಲದ ಕುರಿತು ಹೇಳಿದರೂ ವಚನಗಳನ್ನು ಷಟ್‌ಸ್ಥಲಕ್ಕೆ ಅನುಗುಣವಾಗಿ ವಿಂಗಡಿಸಲಿಲ್ಲ. ಷಟ್‌ಸ್ಥಲದ ಕುರಿತು ಒಂದೆರಡು ನುಡಿ ಹೀಗಿವೆ ನೋಡಿ: 'ಆರು ಭೂತಗಳಲ್ಲಿ ಆರು ತತ್ವಗಳಲ್ಲಿ ಪೂರೈಸಿ ಇರ್ಪ ಘನನ, ಮನದಲ್ಲಿ ಆರೈದು ಕೂಡುವಡೆ, ಅವ ಮುಕ್ತ'. ನಾಲ್ಕಾರು ಶಬ್ದಗಳಲ್ಲಿ ಮಹತ್ತಾದ ತತ್ವವನ್ನು ಅವರು ವಿವರಿಸಿದ್ದಾರೆ. ಕ್ಲಿಷ್ಟವಾದ ಪದಗಳನ್ನು ಸೇರಿಸಿ, ಜಾಲ ನಿರ್ಮಾಣ ಮಾಡಿ, ದಿಕ್ಕು ತಪ್ಪಿಸುವ ಕೆಲಸವನ್ನು ಶರಣರು ಮಾಡಲಿಲ್ಲ.

ಮನದಲ್ಲಿ ಆರೈದು ಕೂಡುವಡೆ ಅವ ಮುಕ್ತ. ಷಟ್‌ಸ್ಥಲದ ಉದ್ದೇಶ ಲಿಂಗಾಂಗ ಸಾಮರಸ್ಯ. ಅಥವಾ ಜೀವನ್ಮುಕ್ತಿ. ಎಲ್ಲಿ? ಘನದೊಳಗೆ (ಶೂನ್ಯ). ಘನದಲ್ಲಿ ಘನ ಬೆರೆಸಿದಡೆ ಶೂನ್ಯ. ಆರು ಭೂತಗಳಲ್ಲಿ, ಆರು ತತ್ವಗಳಲ್ಲಿ ತುಂಬಿಕೊಂಡಿರುವ ವಸ್ತು ಘನ ಅಥವಾ ದೇವರು. ಪೃಥ್ವಿ, ಆಪ್, ತೇಜ, ವಾಯು, ಆಕಾಶ ಮತ್ತು ಆರನೆಯದು ಆತ ಅಥವಾ ಪ್ರಕೃತಿ. ಇವು ಆರು ಭೂತಗಳು (ಐದು ಭೂತಗಳು ಮತ್ತೊಂದು ಕಾರಣಭೂತ). ಆ ಬಳಿಕ ಐದು ಹೊರಭೂತಗಳು; ಇವುಗಳಿಗೆ ಸೂಕ್ಷ್ಮ ತತ್ವಗಳೆಂದು ಕರೆಯುತ್ತಾರೆ. ಅವು ಶಕ್ತಿತತ್ವಗಳು. ಅವುಗಳಿಗೆ 'ಕಲೆಗಳು' ಅಂತ ಕೂಡ ಕರೆಯುತ್ತಾರೆ. ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ ಹಾಗು ಚಿಚ್ಛಕ್ತಿ. ಇವು ಆರು ತತ್ವಗಳು. ಸೂಕ್ಷ್ಮತತ್ವಗಳು ಮತ್ತು ಭೂತಗಳು ಭಿನ್ನವಲ್ಲ. ಶಕ್ತಿತತ್ವಗಳಲ್ಲಿ ಕಲೆಗಳು ಐದು: ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಮತ್ತು ಪ್ರಸಾದಲಿಂಗ; ಆಮೇಲೆ ಮಹಾಲಿಂಗತತ್ವ. ಹೀಗೆ ಆರು. ಇಂಥ ಆರು ತತ್ವಗಳಲ್ಲಿ ಮತ್ತು ಆರು ಬಾಹ್ಯಭೂತಗಳಲ್ಲಿ ತುಂಬಿಕೊಂಡಿರುವುದು ಘನ. ಅದೇ ದೇವರು.

ಜಗತ್ತಿನಲ್ಲಿ ಅನೇಕ ಜನ ತತ್ವಜ್ಞಾನಿಗಳು, ಅನುಭಾವಿಗಳು ಆಗಿಹೋದರು. ಅವರೆಲ್ಲರ ಉದ್ದೇಶ ಒಂದೇ ಆಗಿತ್ತು. ಮನುಕುಲಕ್ಕೆ ಪರಮಸತ್ಯದ ದರ್ಶನ ಮಾಡಿಸುವುದು ಮತ್ತು ಅದರ ಅದರ ಮೂಲಕ ನೆಮ್ಮದಿಯ ಬದುಕು ಕಲ್ಪಿಸಿಕೊಡುವುದು. ಅಂಥ ಸುಂದರ ಜೀವನವನ್ನು ದೊರಕಿಸಿಕೊಡಲು ಅವರು ಎಲ್ಲವನ್ನೂ ತ್ಯಾಗ ಮಾಡಿದರು. ಸತ್ಯದ ಸಂಶೋಧನೆಗೆ ತಮ್ಮ ಜೀವನವನ್ನೇ ಮೀಸಲಾಗಿಟ್ಟರು. ನಿಸರ್ಗದ ಮಧ್ಯೆ, ನಿಸರ್ಗದ ಸಮೀಪವಿದ್ದಷ್ಟು, ಸತ್ಯದ ಸಮೀಪ ಹೋಗಬಹುದೆಂಬ ಭಾವನೆ ಅವರದಾಗಿತ್ತು. ವಿಶ್ವದಾದ್ಯಂತ ನಿಸರ್ಗವು ಭಗವಂತನ ಸುಂದರ ಕಲಾಕೃತಿಗಳನ್ನು ಹರಡಿದೆ. ಇದರ ಮಧ್ಯೆ ದೇವದರ್ಶನ ಮಾಡಿಕೊಳ್ಳುವ ಅನುಭಾವಿಗಳ ದೃಷ್ಟಿಕೋನ ಹದವಾಗಿತ್ತು. ಶರಣರು ಸಂತರು ಸತ್ಯದ ದರ್ಶನ ಮಾಡಿಕೊಂಡು ಹೋದರು. ಅವರು ತುಳಿದ ದಾರಿಗೆ, ನಾವು ಶಾಂತಿಪಥ, ಶಿವಪಥ ಎಂಬ ಸುಂದರವಾದ ಪದ ಬಳಸಿದೆವು. ಅದು

ಅಷ್ಟೇ ಸುಲಭ ಮತ್ತು ಸರಳವಾದ ಭಕ್ತಿಮಾರ್ಗ. ಅದನ್ನು ಸಂಕ್ಷೇಪಿಸಿ ಹೇಳುವುದಾದರೆ, ಸತ್ಯವನ್ನು ಎದೆಯಲ್ಲಿ ತುಂಬಿಕೊಂಡು ಒಳ್ಳೆಯದನ್ನೆ ಕೇಳಬೇಕು; ಒಳ್ಳೆಯದನ್ನೆ ನೋಡಬೇಕು; ಒಳ್ಳೆಯದನ್ನೆ ಮಾಡಬೇಕು. ಹಾಗೆ ಮಾಡಿದಾಗ, ಬದುಕು ಸ್ವಚ್ಛ ಸುಂದರ ಮತ್ತು ಅದ್ಭುತವಾಗುತ್ತದೆ. ಷಟ್‌ಸ್ಥಲ ಮಾರ್ಗ ಕಠಿಣ ಎಂದು ತಿಳಿದುಕೊಂಡಾಗ ಅದು ಕಠಿಣ, ಸುಲಭವೆಂದು ತಿಳಿದಾಗ ಬಹಳ ಸುಲಭವಾದ ಮಾರ್ಗ. ಮನಸ್ಸು ಸಿದ್ಧವಾದಾಗ ಎಲ್ಲವೂ ಸುಲಭ.

ಮನೆಯಿಂದ ಹೊರಬಿದ್ದು ನಿಸರ್ಗವನ್ನು ಗಮನಿಸುತ್ತ ಸ್ವಲ್ಪ ಸಮಯ ಕಳೆಯುವುದು. ನಮ್ಮನ್ನೆ ನಾವು ಮರೆಯುವುದು; ನಿಸರ್ಗದ ಮಧ್ಯೆ ಬೆರೆಯುವುದು ಮತ್ತು ಬೆಳೆಯುವುದು ಆ ಕ್ಷಣದಲ್ಲಿ ಬರುವ ಅನುಭವವೇ ಸತ್ಯದರ್ಶನ.

'....ಹಸಿವುಳ್ಳವ ಭಕ್ತನಲ್ಲ, ವಿಷಯವುಳ್ಳವ ಮಹೇಶ್ವರನಲ್ಲ, ಆಶೆಯುಳ್ಳವ ಪ್ರಸಾದಿಯಲ್ಲ, ಜೀವಗುಣವುಳ್ಳವ ಪ್ರಾಣಲಿಂಗಿಯಲ್ಲ, ತನುಗುಣವುಳ್ಳವ ಶರಣನಲ್ಲ, ಜನನ ಮರಣವುಳ್ಳವ ಐಕ್ಯನಲ್ಲ, ಆ ಆರರ ಅರಿವಿನ ಅರ್ಥದ, ಸಂಪತ್ತಿನ ಭೋಗ ಹಿಂಗಿದರೆ, ಸ್ವಯಂಜಾತನೆಂಬೆ ಆ ದೇಹ ಗುಹೇಶ್ವರನೆಂಬೆ' ಇದು ಭಕ್ತ ಜಂಗಮದ ಷಟ್‌ಸ್ಥಲದ ಸಕೀಲ ಸಂಬಂಧ. ಮಹೇಶ ಸ್ಥಲದ ಸಂಕ್ಷಿಪ್ತ ವಿವರಣೆ.

**ಆಕರ ಗ್ರಂಥಗಳು**

1. ಡಾ. ಎಚ್. ತಿಪ್ಪೇರುದ್ರಸ್ವಾಮಿ: ವಚನ ಚಳುವಳಿ
2. ಡಾ. ಎಚ್. ತಿಪ್ಪೇರುದ್ರಸ್ವಾಮಿ: ಶರಣರ ಅನುಭಾವ ಸಾಹಿತ್ಯ
3. ಪ್ರಕಾಶ ಗಿರಿಮಲ್ಲನವರ (ಸಂ): ಷಟ್‌ಸ್ಥಲ ಸಿದ್ಧಾಂತ (ಶ್ರೀ ಸಿದ್ಧೇಶ್ವರ ಸ್ವಾಮೀಜಿ ಉಪನ್ಯಾಸ ಸಂಗ್ರಹ)
4. ಶ್ರೀ ಅನ್ನದಾನೀಶ್ವರ ಸ್ವಾಮಿಗಳು ಮುಂಡರಗಿ, ಷಟ್‌ಸ್ಥಲ:ಒಂದು ಅಧ್ಯಯನ
5. ಶ್ರೀ ಮೈಲಾರ ಬಸವಲಿಂಗ ಶರಣರು: ಷಟ್‌ಸ್ಥಲ ನಿರಾಭಾರಿ ವೀರಶೈವ ಸಿದ್ಧಾಂತ ಸೌರಭ
6. ಮಗ್ಗೆಯ ಮಾಯಿದೇವರು: ಶತಕತ್ರಯ

□

ಕರ್ಮವೆಂಬ ಅಂಕದೊಡನೆ ತೊಡರಿದೆ ;
ಬಿನ್ನಪ ಅವಧಾರು !
ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಂಕುವೆ,
ಕೆಡಹುವೆನಂಕವ ;
ಕರೆದಡೋ ಎನಿಸದಡೆ ನಿಮ್ಮಾಳಲ್ಲ !
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿಱಿವೆ, ಕೂಡಲಸಂಗಮದೇವಾ.

**–ಬಸವಣ್ಣ**

# ಕರಿಯಂಜುವುದು ಅಂಕುಶಕ್ಕಯ್ಯಾ

**ನಗರ್ಲೆ ಶಿವಕುಮಾರ**

ಕರಿಯಂಜುವುದು ಅಂಕುಶಕ್ಕಯ್ಯಾ
ಗಿರಿಯಂಜುವುದು ಕುಲಿಶಕ್ಕಯ್ಯಾ
ತಮಂಧವಂಜುವುದು ಜ್ಯೋತಿಗಯ್ಯಾ
ಕಾನನವಂಜುವುದು ಬೇಗೆಗಯ್ಯಾ
ಪಂಚಮಹಾಪಾತಕವಂಜುವುದು
ಕೂಡಲಸಂಗನ ನಾಮಕ್ಕಯ್ಯಾ

**– ಬಸವಣ್ಣ**

**ವಚನ ಸಾಹಿತ್ಯ :** ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವನ್ನು ವಚನ ಸಾಹಿತ್ಯ ಎನ್ನುತ್ತೇವೆ. ಗದ್ಯ–ಪದ್ಯ ಮಿಶ್ರಿತ ಸ್ವರೂಪವನ್ನು ವಚನಸಾಹಿತ್ಯ ಹೊಂದಿದೆ. ಶಿವಶರಣರು ವಚನಗಳನ್ನು ಮೊದಲಿಗೆ ರಚಿಸಿದವರಾಗಿದ್ದು, ಸುಮಾರು ಮುನ್ನೂರು ಜನ ವಚನಕಾರರನ್ನು ಗುರುತಿಸಲಾಗಿದೆ. ಗುಪ್ತ ಅರ್ಥವನ್ನು ಹೊಂದಿರುವ ವಚನಗಳಿಗೆ 'ಬೆಡಗಿನ ವಚನಗಳು' ಎಂದು ಕರೆಯುತ್ತಾರೆ. ಸುಮಾರು 26 ಸಾವಿರದಷ್ಟು ಶರಣರ ವಚನಗಳನ್ನು ಮುದ್ರಿಸಲಾಗಿದೆ. ವಚನಕಾರರು ತಮ್ಮ ವಚನಗಳಲ್ಲಿ ಸಂಕೇತವಾಗಿ ಬಳಸುವ ತಮ್ಮ ಆರಾಧ್ಯದೈವ ಅಥವಾ ಗುರುಗಳ ಹೆಸರನ್ನು 'ವಚನಾಂಕಿತ' ಎಂದು ಕರೆಯುತ್ತೇವೆ.

20ನೇ ಶತಮಾನದಲ್ಲಿ ವಚನಸಂಪತ್ತಿನ ಸಂಗ್ರಹಕಾರ್ಯವನ್ನು ಮಾಡಿದವರು ಡಾ. ಫ.ಗು. ಹಳಕಟ್ಟಿಯವರು. ವಚನರಚನೆಯ ಕಾಲಘಟ್ಟವಾದ 12ನೇ ಶತಮಾನದಲ್ಲಿ ಬಸವಣ್ಣನವರ ಮುಂದಾಳತ್ವವಿತ್ತು. ಅದರಂತೆಯೇ 16ನೇ ಶತಮಾನದಲ್ಲಿ ತೋಂಟದ ಸಿದ್ಧಲಿಂಗ ಯತಿಗಳು ಹಾಗೂ 18ನೇ ಶತಮಾನದಲ್ಲಿ ಷಣ್ಮುಖ ಶಿವಯೋಗಿಗಳನ್ನು ಕಾಣುತ್ತೇವೆ.

36 ವಚನಕಾರ್ತಿಯರು ಸೇರಿದಂತೆ 300 ಜನ ವಚನಕಾರರಲ್ಲಿ ಸಿದ್ಧರಾಮೇಶ್ವರ, ಬಸವಣ್ಣ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಅಲ್ಲಮಪ್ರಭು, ಆಯ್ದಕ್ಕಿ ಲಕ್ಕಮ್ಮ, ಮಾರಯ್ಯ, ಮಡಿವಾಳ ಮಾಚಯ್ಯ, ನೀಲಾಂಬಿಕೆ, ಮಾದಾರ ಧೂಳಯ್ಯ, ಚೆನ್ನಬಸವಣ್ಣ, ನಗೆಯ ಮಾರಿತಂದೆ, ಸತ್ಯಕ್ಕ, ಸಕಲೇಶ ಮಾದರಸ ಹೀಗೆ ಹಲವಾರು ಶರಣರನ್ನು ಕಾಣುತ್ತೇವೆ.

ಬಸವಣ್ಣನವರ ವಿಚಾರಧಾರೆಗಳು ಇಂದಿನ 21ನೇ ಶತಮಾನವಲ್ಲ, ಜಗತ್ತು ಇರುವವರೆಗೆ ಪ್ರಸ್ತುತವಾಗಿದೆ. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದವರು ಬಸವಣ್ಣ. ಬಸವಣ್ಣನವರ ವಾಸದ ಮನೆ 'ಅರಿವಿನ ಮನೆ'ಯಾಗಿತ್ತು; ಅವರ ಮಹಾಮನೆಯಲ್ಲಿ ಪ್ರತಿನಿತ್ಯ ಲಕ್ಷದ ಮೇಲೆ 96 ಸಾವಿರ ಶರಣರು ಪ್ರಸಾದ (ದಾಸೋಹ) ಸ್ವೀಕರಿಸುತ್ತಿದ್ದಾರೆಂದು ಪ್ರತೀತಿ. ಬಸವಣ್ಣನವರ ವಚನಗಳ ಅಂಕಿತನಾಮ 'ಕೂಡಲಸಂಗಮ'. ಇವರ 1414ಕ್ಕೂ ಹೆಚ್ಚಿನ ವಚನಗಳು ನಮಗೆ ದೊರಕಿವೆ. ಈ ವಚನಗಳಲ್ಲಿ ಸಾಹಿತ್ಯ, ಸಂಸ್ಕೃತಿ, ಆಚಾರ–ವಿಚಾರ, ಸಂಗೀತ ಸೇರಿದಂತೆ ಎಲ್ಲಾ ವಿಷಯಗಳನ್ನು ತಿಳಿಯಬಹುದಾಗಿದೆ.

**ಷಟ್ಸ್ಥಲ :** ಶರಣರ ಧರ್ಮದಲ್ಲಿ ಆತ್ಮಸಾಧನೆಗಾಗಿ ಆರು ಹಂತಗಳಿವೆ. ಅವು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬುದಾಗಿದೆ. ಅದರಂತೆ ಬಸವಣ್ಣನವರ ವಚನಗಳನ್ನು (1) ಭಕ್ತಸ್ಥಲ (2) ಮಾಹೇಶ್ವರಸ್ಥಲ, (3) ಪ್ರಸಾದಿಸ್ಥಲ, (4) ಪ್ರಾಣಲಿಂಗಿಸ್ಥಲ, (5) ಶರಣಸ್ಥಲ, (6) ಐಕ್ಯಸ್ಥಲ ಎಂದು ಷಟ್ಸ್ಥಲವಚನಗಳಾಗಿ ವಿಂಗಡಿಸಲಾಗಿದೆ.

ಆರಂಭದಲ್ಲಿ ಹೇಳಿದ 'ಕರಿಯಂಜುವುದು ಅಂಕುಶಕಯ್ಯಾ' ಎಂಬ ವಚನದಲ್ಲಿ ಬಸವಣ್ಣನವರು ಶಿವನಾಮಸ್ಮರಣೆಯ ಮಹತ್ವವನ್ನು ಕೆಲವು ಸಾದೃಶ್ಯಗಳಿಂದ ಪರಿಣಾಮಕಾರಿಯಾಗಿ ಸೂಚಿಸಿದ್ದಾರೆ.

ಆನೆ ಅಂಕುಶಕ್ಕೆ ಅಂಜುವಂತೆ, ಗಿರಿ ವಜ್ರಾಯುಧಕ್ಕೆ ಅಂಜುವಂತೆ, ಕತ್ತಲು ಜ್ಯೋತಿಗೆ ಅಂಜುವಂತೆ, ಕಾಡು ಕಿಚ್ಚಿಗೆ ಅಂಜುವಂತೆ, ಪಂಚಮಹಾಪಾತಕಗಳು ಕೂಡಲಸಂಗನ ನಾಮಕ್ಕೆ ಅಂಜುತ್ತವೆ. ಗಾತ್ರದಲ್ಲಿ ದೊಡ್ಡದಾಗಿದ್ದರೂ ಕಿರಿದಾದ ಅಂಕುಶ ಆನೆಯನ್ನು ಅಂಜಿಸಿ (ಹೆದರಿಸಿ) ನಿಯಂತ್ರಣದಲ್ಲಿಡುತ್ತದೆ. ಮುಂದಿನ ಸಾದೃಶ್ಯಗಳಲ್ಲಿಯೂ ಇದೇ ಭಾವ ಮುಂದುವರಿಯುತ್ತದೆ. ಗಾತ್ರದಲ್ಲಿ ಪರ್ವತ ಬೃಹತ್ತಾಗಿದ್ದರೂ ವಜ್ರಾಯುಧ ಅದನ್ನು ಹುಡಿಗುಟ್ಟುತ್ತದೆ. ಕತ್ತಲೆಯು ಎತ್ತೆತ್ತಲೂ ಹಬ್ಬಿದ್ದರೂ ಒಂದು ಕಿರುಸೊಡರು (ದೀಪ) ಆ ಕತ್ತಲೆಯನ್ನು ಹಿಂದಕ್ಕೆ ತಳ್ಳುತ್ತದೆ. ವಿಸ್ತಾರವಾಗಿ ಬೆಳೆದ ಕಾಡನ್ನು ಕಾಡುಕಿಚ್ಚು (ಬೆಂಕಿ) ಸುಟ್ಟುಹಾಕುತ್ತದೆ. ಹಾಗೆಯೇ ಬಲವತ್ತರವಾದ ಪಂಚಮಹಾಪಾತಕಗಳು ಐದೇ ಅಕ್ಷರಗಳ 'ಶಿವಪಂಚಾಕ್ಷರಿ' ಮಂತ್ರದಿಂದ ನಾಶವಾಗುತ್ತವೆ. 1. ಗುರುದ್ರೋಹ, 2. ಲಿಂಗದ್ರೋಹ, 3. ಜಂಗಮದ್ರೋಹ, 4. ಆಚಾರದ್ರೋಹ, 5. ಪ್ರಸಾದದ್ರೋಹ ಇವು ಪಂಚಮಹಾಪಾತಕಗಳು. ಇದರ ಜೊತೆ ಕಳವು, ಹಿಂಸೆ, ವ್ಯಭಿಚಾರ, ಅನ್ಯದೇವತಾ ಭಜನೆ (ಸ್ತುತಿ), ಭವಿಸಂಗ – ಇವುಗಳಿಂದುಂಟಾಗುವ ಪರಿಣಾಮಗಳನ್ನೂ ಸೇರಿಸಿಕೊಳ್ಳಬಹುದು. 'ಪಂಚಾಕ್ಷರಿಮಂತ್ರದ' ಪ್ರಭಾವದಿಂದ ಈ ಪಾತಕಗಳನ್ನು ಕಳೆದುಕೊಂಡು ಪರಿಶುದ್ಧವಾದ ನೈತಿಕ ಜೀವನ ಬೆಳಗುತ್ತದೆ ಎಂಬುದು ಮಂತ್ರದ

ಮಹತ್ವವನ್ನು ಹೇಳುತ್ತದೆ. ಇಂದ್ರಿಯಗಳನ್ನು ವಿಷಯಭೋಗಗಳಿಂದ ಮುಕ್ತಗೊಳಿಸಿ, ಲಿಂಗಭೋಗದಲ್ಲಿ ತೊಡಗಿಸುವ ಅಲೌಕಿಕ ಶಕ್ತಿ ಈ ಮಂತ್ರಕ್ಕಿದೆ ಎಂಬುದನ್ನು ಈ ವಚನದಲ್ಲಿ ಕಾಣಬಹುದಾಗಿದೆ.

**ಕರಿಘನ :** 'ಕರಿಯಂಜುವುದು ಅಂಕುಶಕ್ಕಯ್ಯಾ' ಎಂಬ ವಚನಕ್ಕೆ ಸಂಬಂಧಿಸಿದಂತೆ ಬಸವಣ್ಣನವರ ವಚನಗಳಲ್ಲಿ ಇನ್ನೆರಡು ವಚನಗಳು ಈ ರೀತಿ ಇವೆ.

ಕರಿ ಘನ ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ;  
ಗಿರಿ ಘನ ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ;  
ತಮಂಧ ಘನ ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ;  
ಮರೆವು ಘನ ನಿಮ್ಮ ನೆನೆವ ಮನವ ಕಿರಿದೆನ್ನಬಹುದೇ?  
ಬಾರದಯ್ಯಾ, ಕೂಡಲಸಂಗಮದೇವಾ.

ಅಂಕುಶವು ಸಣ್ಣದಿದ್ದರೂ ಬಲಶಾಲಿಯಾದ ಆನೆಯನ್ನು ಹತೋಟಿಯಲ್ಲಿಡುತ್ತದೆ. ವಜ್ರಾಯುಧವು ಕಿರಿದಾಗಿದ್ದರೂ ಮಹಾಪರ್ವತವನ್ನು ಸೀಳಿಬಿಡುತ್ತದೆ. ಚಿಕ್ಕ ದೀಪ ಘೋರ ಅಂಧಕಾರವನ್ನು ನಾಶಮಾಡುತ್ತದೆ. ನಿಮ್ಮ ಧ್ಯಾನದಲ್ಲಿ ನಿರತವಾದ ಮನಸ್ಸು ಸಣ್ಣದಿದ್ದರೂ ನಿಮ್ಮ ಮರೆವಿನಿಂದುಂಟಾದ ಮಹಾಮಾಯೆಯನ್ನು ಹೊಡೆದೋಡಿಸುತ್ತದೆ ಎಂದು ಅಣ್ಣನವರು ಹೇಳಿದ್ದಾರೆ.

ಆನೆ ಅಂಕುಶಕ್ಕಂಜುವುದೆ ಅಯ್ಯಾ;  
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ?  
ಆನೀ ಬಿಜ್ಜಳಂಗಂಜುವೆನೆ ಅಯ್ಯಾ,  
ಕೂಡಲಸಂಗಮದೇವಾ,  
ನೀನು ಸರ್ವಜೀವದಯಾಪಾರಿಯಾದ ಕಾರಣ  
ನಿನಗಂಜುವೆನಲ್ಲದೆ?

ಆನೆಯು ಅಂಕುಶಕ್ಕೆ ನಿಜವಾಗಿಯೂ ಅಂಜುವುದಿಲ್ಲ; ಆ ಅಂಕುಶವು ಸಿಂಹದ ಉಗುರೆಂದು ಅಂಜುತ್ತದೆ. ನಾನು ಈ ಬಿಜ್ಜಳರಾಯನಿಗೆ ಹೆದರುವುದಿಲ್ಲ. ಕೂಡಲಸಂಗಮದೇವಾ, ನೀನು ಸರ್ವಾಂತರ್ಯಾಮಿಯಾಗಿರುವ ಕಾರಣ ಮತ್ತು ನೀನು ದಯಾಪರನಾಗಿರುವುದರಿಂದ ನಿನಗೆ ಅಂಜಿ ಅಳುಕಿ ನಡೆಯುವೆನು! ಎಂಬುದು ಈ ವಚನದ ಸಾರವಾಗಿದೆ.

ಮಾನವನ ಮನಸ್ಸನ್ನು ಹತೋಟಿಯಲ್ಲಿಡಲು ಧರ್ಮದ ಅವಶ್ಯಕತೆ ಇದೆ. ಆದ್ದರಿಂದ ಹಲವಾರು ಧರ್ಮಗಳನ್ನು ಕಾಣುತ್ತೇವೆ. ಶರಣ ಧರ್ಮದಲ್ಲಿ ವ್ಯಕ್ತಿಕಲ್ಯಾಣ ಮತ್ತು ಸಮಾಜಹಿತವನ್ನು ಸಮನ್ವಯಗೊಳಿಸಲಾಗಿದೆ. ವ್ಯಕ್ತಿಯ ಉದ್ಧಾರವು ಸಮಷ್ಟಿಯ ಉದ್ಧಾರಕ್ಕೆ ಕಾರಣವಾಗಬೇಕೆಂಬುದು ಶರಣಧರ್ಮದ ಆಶಯವಾಗಿದೆ.

ಅಷ್ಟಾವರಣ, ಪಂಚಾಚಾರ ಷಟ್ಸ್ಥಲಗಳು ಶರಣ ಧರ್ಮದ ಮೂಲ ತತ್ವಗಳಾಗಿವೆ.

1. **ಅಷ್ಟಾವರಣ:** ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಅಷ್ಟಾವರಣಗಳಾಗಿವೆ. ಪ್ರತಿಯೊಬ್ಬ ಶರಣನ ಅಂತರಂಗದಲ್ಲಿ ಅರಿವು ಜಾಗೃತವಾಗಿ ಈ ಎಂಟು ನಿರಾಕಾರ ತತ್ತ್ವಗಳು ಭಕ್ತಾಂಗದಲ್ಲಿ ಕ್ರಿಯಾರೂಪದಲ್ಲಿ ಪ್ರಕಟವಾಗಿ 'ಅಷ್ಟಾವರಣ' ಎಂದು ವ್ಯಕ್ತಗೊಳ್ಳುವುದು ಹಾಗೂ ಭಕ್ತನು ಇಷ್ಟಲಿಂಗ ಪೂಜೆಯ ಮೂಲಕ ಇವೆಲ್ಲವನ್ನು ಅನುಭವಕ್ಕೆ ತಂದುಕೊಂಡು ಅಷ್ಟಾವರಣ ಸ್ವರೂಪವನ್ನು ಪಡೆಯುತ್ತಾನೆ.

2. **ಪಂಚಾಚಾರ:** ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಎಂಬ ಐದು ಪ್ರಕಾರದ ಆಚರಣೆಗಳನ್ನು ಶರಣರು ದಿನನಿತ್ಯದ ಬದುಕಿನಲ್ಲಿ ನಿಷ್ಠೆಯಿಂದ ಆಚರಿಸುತ್ತಾರೆ. ಇಷ್ಟಲಿಂಗದ ಸಿದ್ಧಾಂತಗಳನ್ನು ತಿಳಿದು ಪೂಜಿಸುವುದೇ ಲಿಂಗಾಚಾರವಾಗಿದೆ. ಸತ್ಯಶುದ್ಧ ಕಾಯಕದಿಂದ ಭಕ್ತಿಯ ದಾಸೋಹಗೈವುದೇ ಸದಾಚಾರ. ಶಿವಭಕ್ತರನ್ನು ಶಿವಸ್ವರೂಪಿಗಳೆಂದು ಕಾಣುವುದೇ ಶಿವಾಚಾರ. ಶಿವಭಕ್ತರ ನಿಂದೆಯನ್ನು ಕೇಳದಿರುವುದೇ ಗಣಾಚಾರ. ಶರಣರನ್ನು ದೊಡ್ಡವರೆಂದು, ತಾನು ಚಿಕ್ಕವನೆಂದು ತಿಳಿದು ಸೇವೆ ಮಾಡುವುದೇ ಭೃತ್ಯಾಚಾರವಾಗಿದೆ.

3. **ಷಟ್ಸ್ಥಲ:** ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ ಶರಣ, ಐಕ್ಯ ಇವು ಷಟ್ಸ್ಥಲಗಳಾಗಿವೆ. ಶರಣರು ಇಷ್ಟಲಿಂಗಾರ್ಚನೆಯ ಮೂಲಕ ಅಂತರಂಗದಲ್ಲಿ ಷಟ್ಸ್ಥಲದ ಭಕ್ತಿಗಳಿಂದ ಲಿಂಗಾಂಗಸಾಮರಸ್ಯದಲ್ಲಿ ತನ್ಮಯನಾಗುತ್ತಾನೆ.

ಶರಣರಿಗೆ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್ಸ್ಥಲವೇ ಆತ್ಮವಾಗಿ ಲಿಂಗಾಂಗಯೋಗ ಸಾಧನೆಯ ಮೂಲಕ ಲಿಂಗಾಂಗ ಸಾಮರಸ್ಯ ಹೊಂದುವ ಸ್ವಾತಂತ್ರ್ಯವನ್ನು ನೀಡಿದೆ. ಜಾತಿರಹಿತ–ವರ್ಣರಹಿತ–ವರ್ಗರಹಿತ, ಸ್ತ್ರೀ–ಪುರುಷ, ಸಂಸಾರಿ–ಸನ್ಯಾಸಿಯೆಂಬ ಭೇದವಿಲ್ಲದೆ ಧಾರ್ಮಿಕ ಸಂಸ್ಕಾರದ ಮೂಲಕ ಇಷ್ಟಲಿಂಗವನ್ನು ಪಡೆಯಲು ಸರ್ವರಿಗೂ ಅವಕಾಶವನ್ನು ಕಲ್ಪಿಸಿದವರು 12ನೆಯ ಶತಮಾನದ ಬಸವಾದಿ ಶಿವಶರಣರು.

ದೇಹ ಮತ್ತು ಮನಸ್ಸನ್ನು ನಿಯಂತ್ರಿಸಿಕೊಳ್ಳಬೇಕೆಂದವರು ಶರಣರು. ಅದಕ್ಕೆ ಸಂಬಂಧಿಸಿದ ಅಲ್ಲಮಪ್ರಭುದೇವರ ವಚನವೊಂದು ಈ ರೀತಿಯಾಗಿದೆ.

ಕಾಲುಗಳೆಂಬವು ಗಾಲಿ ಕಂಡಯ್ಯಾ
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯಾ
ಬಂಡಿಯ ಹೊಡೆಯುವವರೈವರು ಮಾನಿಸರು
ಒಬ್ಬರಿಗೊಬ್ಬರು ಸಮವಿಲ್ಲವಯ್ಯಾ
ಅದರಿಚ್ಛೆಯನರಿದು ಹೊಡೆಯದಿದ್ದಡೆ
ಅದರಚ್ಚು ಮುರಿಯಿತ್ತು ಗುಹೇಶ್ವರಾ.

ಈ ವಚನದಲ್ಲಿ ದೇಹವನ್ನು ಎತ್ತಿನ ಬಂಡಿಗೆ (ಚಕ್ಕಡಿ) ಹೋಲಿಸಲಾಗಿದೆ. ಸರಕನ್ನು ತುಂಬಿಕೊಂಡು ಹೋಗುವ ಗಾಡಿಯ (ಬಂಡಿ) ಚಲನೆಗೆ ಎರಡು ಗಾಲಿಗಳು, ಆ ಚಕ್ರಗಳು (ಗಾಲಿ) ಚಲಿಸುವಾಗ ಉರುಳದಂತೆ (ಬೀಳದಂತೆ) ಕೀಲು ಮತ್ತು ಅದನ್ನು ಎಳೆಯಲು ಎತ್ತುಗಳಿವೆ. ಆ ಎತ್ತುಗಳು ಏಕರೂಪದಲ್ಲಿ ಮುಂದೆ ಸಾಗಿ, ತಲುಪಬೇಕಾದ ಸ್ಥಳದ ಬಗ್ಗೆ ಅರಿವು ಇರಬೇಕು ಎಂಬುದರ ಅರ್ಥವನ್ನು ನಿರೂಪಿಸುತ್ತಾ, ಇದನ್ನು ಮನುಷ್ಯನ ದೇಹಕ್ಕೆ ಹೋಲಿಸಲಾಗಿದೆ. ದೇಹವು ಹಲವು ಬಗೆಯ ವಿಶೇಷ ಮತ್ತು ವಿಚಿತ್ರವಾದ ಸರಕುಗಳನ್ನು (ಸಾಮಾನು) ತುಂಬಿಕೊಂಡಿರುವ ಬಂಡಿಯಾಗಿದೆ. ಈ ಗಾಡಿಯಲ್ಲಿ (ಬಂಡಿ) ಅರಿಷಡ್ವರ್ಗಗಳು, ಅಷ್ಟಮದಗಳು, ದುರ್ಗುಣಗಳು, ಸದ್ಗುಣಗಳು, ಜ್ಞಾನ, ಅಜ್ಞಾನ ಹೀಗೆ ಏನೆಲ್ಲ ಒಳ್ಳೆಯ, ಕೆಟ್ಟ ಚಿಂತನೆಗಳು ಸಹಜವಾಗಿ ತುಂಬಿಕೊಂಡಿರುತ್ತವೆ. ಇವೆಲ್ಲವನ್ನೂ ಹೊತ್ತು ಸಾಗುವ ಗಾಡಿಗೆ ಮನುಷ್ಯನ (ದೇಹಿಯ) ಎರಡು ಕಾಲುಗಳೇ  ಚಕ್ರಗಳು (ಗಾಲಿ). ಈ ಗಾಡಿಯನ್ನು ನಡೆಸುವವರು ಐವರು ಮಾನಿಸರು (ಇಚ್ಛೆಗೆ ತಕ್ಕಂತೆ ನಡೆಸುವವರು). ಅಂದರೆ ಮನುಷ್ಯನ ಜ್ಞಾನೇಂದ್ರಿಯಗಳು. ಈ ಐದು ಇಂದ್ರಿಯಗಳನ್ನು (ಮಾನಿಸರ) ಉಳ್ಳವರೇ ಮನುಷ್ಯರು.

ಶರೀರದೊಳಗಿರುವ ಮನಸ್ಸು, ಕಣ್ಣು, ಕಿವಿ, ಮೂಗು, ಚರ್ಮ, ನಾಲಗೆ ಈ ಪಂಚೇಂದ್ರಿಯಗಳನ್ನುಅತ್ತಿತ್ತ ಹೊರಳಿಸುತ್ತಾ ಮುಂದೆ ಜೀವನ ಸಾಗಿಸಲು ಇಚ್ಛಿಸುತ್ತಿರುತ್ತದೆ. ಈ ಪಂಚೇಂದ್ರಿಯಗಳು (ಮಾನಿಸರು) ಒಬ್ಬರಿಗೊಬ್ಬರು ಸಮರಲ್ಲ ಎನ್ನುವ ಪ್ರಭುದೇವರು, ಇಂದ್ರಿಯಗಳ ಒಟ್ಟಾರೆ ಕ್ರಿಯೆಗಳನ್ನು 'ಮಾಯೆ' ಎಂದು ಕರೆಯುತ್ತಾರೆ. ಈ ಮಾಯೆಗಳ (ಪಂಚೇಂದ್ರಿಯ) ಅಧೀನರಾಗಿ ಬದುಕುವವರೇ ಭವಿಗಳು (ಲಿಂಗದೀಕ್ಷೆಯನ್ನು ಪಡೆಯದವರು ಭವಿಯಾಗಿರುತ್ತಾರೆ) ಈ ಪಂಚೇಂದ್ರಿಯಗಳಿಂದ ಅಂತರವನ್ನು ಕಾಯ್ದುಕೊಳ್ಳಬೇಕಾಗಿರುವುದು ಮನುಷ್ಯನ ಕರ್ತವ್ಯವಾಗಿದೆ. ತನ್ನ ಪರಿಮಿತಿಗಳನ್ನು ದೇಹಿಯ ಅರಿಯದೆ ಹೋದಲ್ಲಿ ತೊಂದರೆಗೆ ಒಳಗಾಗುತ್ತಾನೆ. ಪಂಚೇಂದ್ರಿಯಗಳ ಚಪಲಗಳಿಗೆ ದಾಸನಾಗಿ ಮುಂದೆ ದೇಹಿಯ ವಿನಾಶದಲ್ಲಿ ಕೊನೆಗೊಳ್ಳುತ್ತಾನೆ ಎಂಬುದು ವಚನದ ಸಾರಾಂಶ.

ರಾತ್ರಿಗೆ ಹಗಲು ಇರುವಂತೆ ಹಾಗೂ ಮನುಷ್ಯ ಪ್ರಾಣಿಗಳನ್ನು ನಿಯಂತ್ರಿಸಲು ಪ್ರಕೃತಿ ಒಂದಲ್ಲ ಒಂದು ಸಾಧನವನ್ನು ಇಟ್ಟುಕೊಂಡಿರುತ್ತದೆಂಬುದನ್ನು 'ಕರಿಯಂಜುವುದು ಅಂಕುಶಕ್ಕಯ್ಯಾ' ಎಂಬ ವಚನದಿಂದ ಅರಿಯಬಹುದು.

□

# ವಚನ ಸಾಹಿತ್ಯ

**ಎಂ.ಎಸ್. ಚಂದ್ರಶೇಖರ ಅಯ್ಯರ್**

ಗದ್ಯ ಪದ್ಯಕ್ಕಿಂತಲೂ ಪ್ರಾಚೀನವಾದುದು. ಮಾನವ ಮಾತನಾಡಲು ಕಲಿತ ಮೇಲೆ ಮೊದಲಿಗೆ ಬಂದದ್ದು ಗದ್ಯಸಾಹಿತ್ಯ, ನಂತರ ಹುಟ್ಟಿದ್ದು ಪದ್ಯ.

ಕನ್ನಡದಲ್ಲಿ "ವಚನಸಾಹಿತ್ಯ" ಉನ್ನತ ಸಾಹಿತ್ಯ ಪ್ರಕಾರವಾಯಿತು. ಹನ್ನೆರಡನೆಯ ಶತಮಾನಕ್ಕಿಂತ ಹಿಂದೆಯೇ ಹಲವಾರು ಶಿವದಾಸರು ಹಾಡುಗಳನ್ನು ಬರೆದಿದ್ದರೆಂದು ಆಧಾರವಿದ್ದರೂ, ಆ ಹಾಡುಗಳು ಈವರೆವಿಗೂ ಲಭ್ಯವಾಗಿಲ್ಲ. ವಚನ ಸಾಹಿತ್ಯ ಹಾಡುವದಂತು.

ವಚನ ಸಾಹಿತ್ಯದಲ್ಲಿ ಸರಳ ಭಾಷೆಯಲ್ಲಿ ತತ್ವಪ್ರತಿಪಾದನೆ ಹಾಗೂ ಬೋಧನಾಂಶವೇ ಪ್ರಧಾನವಾದದ್ದು. ಈ ದಿಸೆಯಲ್ಲಿ ಬಸವಣ್ಣ, ಪ್ರಭುದೇವ, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಅಕ್ಕಮಹಾದೇವಿ, ನೀಲಾಂಬಿಕೆ ಮುಂತಾದವರ ಕೊಡುಗೆ ಅಪಾರ. ಇವರುಗಳು ಭಕ್ತಿಪಂಥದ ತತ್ವಬೋಧನೆಯ ಜೊತೆಜೊತೆಗೆ ಕನ್ನಡ ಸಾಹಿತ್ಯ, ಸಂಗೀತದ ವಿಕಾಸ ಮತ್ತು ಅದರ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ಬಸವೇಶ್ವರರು ಅಧ್ಯಾತ್ಮಜೀವನದ ಸಾಹಿತ್ಯ ವಿಕಸನದ ಜೊತೆಗೆ, ಸಂಗೀತದ ಬೆಳವಣಿಗೆಯ ಹಾದಿಯಲ್ಲೂ ತಮ್ಮ ವಚನವಾಣಿಯಿಂದ ಮಹತ್ವದ ಕಾಣಿಕೆ ನೀಡಿದ್ದಾರೆ. ವಚನಗಳು ಗಾನಯೋಗ್ಯವೆಂಬುದಕ್ಕೆ ಅವರ ಒಂದು ವಚನ ಸಾಕ್ಷಿಯಾಗಿದೆ.

ಎನ್ನ ಕಾಯುವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬಕ್ತೀಸ ರಾಗವ ಹಾಡಯ್ಯ, ಉದಾರದಲೊತ್ತಿ
ಬಾರಿಸು ಕೂಡಲಸಂಗಮದೇವಾ...

ಇಲ್ಲಿ ಬಸವಣ್ಣವರ ಕಾಲದಲ್ಲಿ ಬಳಕೆಯಲಿದ್ದ ತಂತಿವಾದ್ಯದ ಹೋಲಿಕೆಯನ್ನು ಅವರು ಮಾನವದೇಹಕ್ಕೆ ಹೋಲಿಸಿರುವುದು ಕಾಣುತ್ತಿದೆ.

ಬಸವೇಶ್ವರರು ತಮ್ಮ ಕಾಲದಲ್ಲಿದ್ದ ಪ್ರಚಾರದಲಿದ್ದ ರಾಗಗಳ ಪರಿಚಯವನ್ನು ಸಹ ಮಾಡಿಕೊಟ್ಟಿದ್ದಾರೆ.

ಹಿಂದೆ ವಚನಗಳು ಸಂಗೀತಕ್ಕೆ ಅಳವಟ್ಟು ಪ್ರಸರಣಗೊಳ್ಳುತ್ತಿದ್ದವು ಎಂಬುದಕ್ಕೆ ಸಿದ್ಧರಾಮರ ಒಂದು ವಚನವನ್ನು ಉದಾಹರಿಸಬಹುದು. ಭಾರತೀಯ ಸಂಗೀತಕ್ಕೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ನಿಜಗುಣ ಶಿವಯೋಗಿಗಳು ನೀಡಿರುವ ಕಾಣಿಕೆ ಅಪಾರ.

ನಿಜಗುಣ ಶಿವಯೋಗಿಗಳು ಮಹಾಜ್ಞಾನಿಗಳು, ಜೊತೆಗೆ ಸಂಗೀತ ಮತ್ತು ಸಾಹಿತ್ಯದಲ್ಲಿ ಮಹಾವಿದ್ವಾಂಸರಾಗಿದ್ದರು. ಇವರು ರಚಿಸಿದ "ವಿವೇಕ ಚಿಂತಾಮಣಿ" ಗ್ರಂಥದಲ್ಲಿ ಎಂಬ ಸಂಗೀತಶಾಸ್ತ್ರದ ಬಗ್ಗೆ ಅನೇಕ ಮಹತ್ವಪೂರ್ಣ ಸಂಗತಿಗಳನ್ನು ವಿವರವಾಗಿ ಹೇಳಿದ್ದಾರೆ.

ಮುಪ್ಪಿನ ಷಡಕ್ಷರಿಯವರ ಪದಗಳು ಭಕ್ತಿಪ್ರಧಾನವಾದುವುಗಳು. ಇವರ ರಚನೆ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆದಿದೆ. ಅಲ್ಲದೆ ಶಿವಶರಣರಲ್ಲಿ ಸಿದ್ಧದೇವಮ್ಮ, ಅಲ್ಲಯ್ಯ, ಸಂಕಣ್ಣ, ಬಹುರೂಪಿ ಚೌಡಯ್ಯ ಮುಂತಾದವರು ಶ್ರೇಷ್ಠ ಗಾಯಕರಾಗಿದ್ದರು. ಇವರು ಸಂಗೀತ ಮಾಧ್ಯಮದಿಂದಲೇ ದೈವಾರಾಧನೆ ಮಾಡುತ್ತಿದ್ದರೆಂಬುದರ ಬಗೆಗೂ ಉಲ್ಲೇಖವಿದೆ.

ಶಿವಶರಣರು ಲೋಕಕಲ್ಯಾಣಕ್ಕಾಗಿ ವಚನಸುಧೆಯ ಅನುಪಾನ ನೀಡುತ್ತಿದ್ದರು. ಶಿವಾನುಭವ ಗೋಷ್ಠಿಗಳು ದೇವಾಲಯಗಳಲ್ಲಿ ನಡೆಯುತ್ತಿದ್ದವು. ಇಂತಹ ಗೋಷ್ಠಿಗಳಲ್ಲಿ ಶಿವಶರಣರು ತಮ್ಮ ವಿಚಾರಧಾರೆಯನ್ನು ವಚನ ಹಾಗೂ ಗೀತೆಗಳ ಮೂಲಕ ಪ್ರತಿಪಾದಿಸುತ್ತಿದ್ದರು. ಕಿನ್ನರಿ, ವೀಣೆ, ದಂಡಿಗೆ, ತಾಳ ಮುಂತಾದವುಗಳ ಹಿಮ್ಮೇಳದಲ್ಲಿ ಶರಣರು, ವಚನಗಳನ್ನು ಹಾಡುತ್ತಿದ್ದರು.

ಮರುಳು ನಿಟ್ಟಿನ ಕಿನ್ನರಿ ಸಕಲೇಶ ಮಾದರಸನ ವೀಣೆ, ಬಸವನ ದಂಡಿಗೆ, ಬಾದೂರು ಬ್ರಹ್ಮಯ್ಯನ ತಾಳ ರೂಢಿಯ ಮಾತಾಗಿದೆ. ಗಾನದಿಂದಲೇ ಶಿವನನ್ನು ಒಲಿಸಿ ಮುಕ್ತಿಯನ್ನು ಪಡೆದವರು ಇದ್ದಾರೆ. ಉದಾಹರಣೆಗೆ: ಸಿದ್ಧಮಾದಯ್ಯ, ಮಾದರಸ, ಕಿನ್ನರಿ ಬ್ರಹ್ಮಯ್ಯ, ಭದ್ರನಾಯಕ ಇತ್ಯಾದಿ

"ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲ" ಎಂಬ ಬಸವಣ್ಣನವರ ಮಾತಿನಲ್ಲಿ ನಾದ ನಿಷ್ಪ್ರಯೋಜಕವೆಂದಲ್ಲ, ಅದು ಭಕ್ತಿದಾನವಾಗಿರಬಾರದೆಂಬ ಅಶಯವಿದೆ.

ಸಕಲೇಶ ಮಾದರಸನು ಸಕಲವೀಣಾ ಪ್ರವೀಣ ಕಲಾವಿದನೂ ವಿದ್ಯಾಪಂಡಿತನೂ ಆಗಿದ್ದನು. ಶಿವನನ್ನು ಸಂಕೀರ್ತಿಸಲು ಬತ್ತೀಸಾದಿ ರಾಗಗಳಿಗೆ ಹೊಂದುವಂತೆ ದಂಡಿಗೆಗಳನ್ನೂ ನಿಯೋಜಿಸಿ ಯಾವ ರಾಗ ಸಕಲೇಶನಿಗೆ ಪ್ರಿಯವೋ ಆ ರಾಗವು ಹೊಮ್ಮಿ ಧ್ವನಿಸುವ, ರಾವಣಹಸ್ತ, ಬ್ರಹ್ಮವೀಣೆ, ಲಾವಣ್ಯವೀಣೆ, ಕೈಲಾಸವೀಣೆ, ಆಕಾಶವೀಣೆ,

ಪಿನಾಕಿವೀಣೆ, ಸಾರಂಗವೀಣೆ, ಸ್ವಾಯಂಭುವೀಣೆ, ಗೌರಿವೀಣೆ, ಕಿನ್ನರವೀಣೆ, ಜನಕವೀಣೆ ಮೊದಲಾದ ದಂಡಿಗೆಗಳನ್ನು ಹೊಂದಿಸಿಕೊಂಡು ಸಾರೋಕ್ತಿಗೀತೆಗಳನ್ನು ಹಾಡುತ್ತಾ ಶಿವನನ್ನು ಪೂಜಿಸುತ್ತಿದ್ದನು.

ವಚನ ಹಾಗೂ ಗೀತೆ ಎರಡೂ ಗೇಯ ಗುಣಗಳುಳ್ಳವೆ. ವಚನ ನಾದಪ್ರಧಾನ. ಅದಕ್ಕೆ ತಾಳ ನಿಯಮಗಳಿಲ್ಲ. ಆದರೆ ಗೀತೆಗಳಿಗೆ ನಿರ್ದಿಷ್ಟವಾದ ರಾಗ, ತಾಳಗಳು ಇವೆ. ಇಂತಹ ಗೀತೆಗಳು ಶರಣರಿಂದ ರಚಿವಾಗಿದೆ ಎಂಬುದು ಗಮನಾರ್ಹ.

ಶರಣರು ಆಸೆಯ ಮೇಲೆ ಅಂಕುಶವಿಟ್ಟುಕೊಂಡು ಸರಳತೆ, ಸೇವಾಮನೋಭಾವ ಗಳಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಶರಣರ ಮನೆಗಳು ಯಾವುದೇ ಭೌತಿಕ ವಸ್ತುಗಳ ಸಂಗ್ರಹದಿಂದ ಅಲಂಕಾರಗೊಂಡಿರಲಿಲ್ಲ. ಅವರ ಮನಸ್ಸುಗಳು ಅದನ್ನು ಬಯಸುತ್ತಿರಲಿಲ್ಲ.

ಮನೆ ನೋಡಾ ಕಡುಬಡವರು
ಮನ ನೋಡಾ ಘನ ಸಿರಿಸಂಪನ್ನರು

ಕಾಯಕ ದಾಸೋಹದೊಡನೆ ಸಮಾಜಸೇವೆಯಲ್ಲಿ ತೊಡಗಿದವರಿಗೆ ವಿನಯ, ವಿನಮ್ರತೆಗಳು ಮೈಗೂಡಿರಬೇಕೆನ್ನುವುದನ್ನು 'ಓಡುವಾತ ಲೆಂಕನಲ್ಲ (ಲೆಂಕನಲ್ಲ), ಬೇಡುವಾತ ಭಕ್ತನಲ್ಲ' ಎನ್ನುವ ಮಾತುಗಳು ಖಚಿತಪಡಿಸುತ್ತದೆ. ಶರಣಧರ್ಮವು ಪ್ರೀತಿ, ಪ್ರೇಮಗಳ ತಳಹದಿಯ ಮೇಲೆ ನಿಂತ ಮಾನವಧರ್ಮವಾಗಿದೆ. ಇಲ್ಲಿ ಪ್ರಾಣಿ, ಪ್ರೇಮ, ಪರಿಸರ ದಯೆ ಇದೆ ಅದರಿಂದಲೇ ಬಸವಣ್ಣವರು 'ದಯವೇ ಧರ್ಮದ ಮೂಲವಯ್ಯ' ಎಂದಿದ್ದಾರೆ. (Dharma) COMPASSION is the ESSENCE OF DHARMA. ಗಂಡು, ಹೆಣ್ಣುಗಳ ಶರೀರರಚನೆಯಲ್ಲಿ ವ್ಯತ್ಯಾಸಗಳಿವೆ. ಆದರೆ ಪ್ರಾಣಕ್ಕೆ, ಆತ್ಮಕ್ಕೆ ಯಾವ ವ್ಯತ್ಯಾಸವಿಲ್ಲ. ಪುರುಷರಂತೆ ಸ್ತ್ರೀಯರು. ಅಧ್ಯಾತ್ಮದ ಅರಿವಿಗೆ ಅರ್ಹರು. ಸಮಾಜದ ಮುನ್ನಡೆಗೆ ಅವರೂ ಪುರುಷರಿಗೆ ಸಮವಾಗಿ ತಮ್ಮದೇ ಆದ ಕೊಡುಗೆ ನೀಡಬಲ್ಲರು. ಆದ್ದರಿಂದ ಶೇ. 50 ಮಹಿಳಾ ಮೀಸಲು ಬೇಕೆಂದು ಪ್ರತಿಪಾದಿಸಿದಳು ಶರಣೆ ಅಕ್ಕಮಹಾದೇವಿ. ಆಕೆ ನಿಜವಾಗಿ ವಿಶ್ವದ ಪೂರ್ಣ ಪ್ರಮಾಣದ ಧಾರ್ಮಿಕ ಮಹಿಳಾ ಪ್ರತಿನಿಧಿ. ಅದರಿಂದ ಇಡೀ ಶರಣಸಂಕುಲ ಮೆಚ್ಚಿ ಗೌರವಿಸಿ ಆಕೆಯನ್ನು "ಅಕ್ಕ" ಎಂದು ಕರೆಯಿತು. ಅವಳ "ಶ್ರೀಪಾದಕ್ಕೆ ನಮೋ ನಮೋ". ಸಹಸ್ರಾರು ವರ್ಷಗಳಿಂದ ಶೋಷಣೆಗೆ ಒಳಪಟ್ಟಿದ್ದ ಮಹಿಳೆಯರು ಮೊದಲ ಬಾರಿಗೆ ಬಾಯಿ ತೆರೆದು ತಮ್ಮ ನೋವನ್ನು ಬಿಚ್ಚಿಟ್ಟು ತಮ್ಮ ಇಷ್ಟಾನಿಷ್ಟ ಗಳನ್ನು ಅಭಿವ್ಯಕ್ತಿಗೊಳಿಸಲಾರಂಭಿಸಿದರು. ನೂರಾರು ಮಹಿಳೆಯರು ವಚನಕಾರ್ತಿಯರಾದರು.

ಮಾತು-ಅರ್ಥಗಳು ಅನುಭವದ ಉತ್ಪನ್ನಗಳು ಇದಕ್ಕೆ ಸಾಕ್ಷಿಯಾಗಿ ನಮಗೆ ಬಸವಣ್ಣನವರ ಈ ವಚನವನ್ನು ಉದಾಹರಿಸಬಹುದು.

ನುಡಿದಡೆ ಮುತ್ತಿನ ಹಾರದಂತಿರಬೇಕು
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದಡೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ?

ನುಡಿ ಎಂಬುದು ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಸಲಾಕೆಯಂತೆ ಪಾರದರ್ಶಕವಾಗಿ ಇರಬೇಕಾದುದು. ಇಂತಹ ಅದ್ಭುತ ಹೊಳಪು ಅಂತಃಶಕ್ತಿ ನುಡಿಯಲಿರುತ್ತದೆ. ಇನ್ನೂ ಹೆಚ್ಚೆಂದರೆ ಕೇಳುಗರ ಗುಂಪಿನಲ್ಲಿ ಶಿವನಿದ್ದರೆ ಆತನೂ ತಲೆದೂಗುವಂತೆ ಮಾಡುತ್ತದೆ. ಇದು ಕಾವ್ಯಶಬ್ದದ ಪ್ರಭಾವದ ಪರಿ. ದೇವರು ಮಾತಿಗೆ ತಲೆದೂಗುವುದು ಬೇರೆ ಆತ ಒಲಿದು ಬರುವುದು ಬೇರೆ. ದೇವರು ಒಲಿದು ಬರಬೇಕಾದರೆ ನುಡಿ ಮತ್ತು ನಡೆ ಒಂದಾಗಬೇಕು.

ಅಲ್ಲಮಪ್ರಭುಗಳು ಮಾತೆಂಬುದು "ಜ್ಯೋತಿರ್ಲಿಂಗ" ಎಂದಿದ್ದಾರೆ. ಸಾರ್ವಕಾಲಿಕ ಮೌಲ್ಯಗಳನ್ನು ಹೊಂದಿರುವ ಶಿವಶರಣರ ತತ್ವಗಳು ಜಗತ್ತಿರುವವರೆಗೂ ಪ್ರಸ್ತುತ.

ಕೂಡಲ ಸಂಗಮದೇವ ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ

ಎಂಬುದು ಬಸವಣ್ಣವರ ಒಂದು ಮಾತು.

ವಚನ ಸಾಹಿತ್ಯ, ಸಂಗೀತವನ್ನು ಜನಪ್ರಿಯಗೊಳಿಸುವುದು ಎಲ್ಲರ ಹೊಣೆಯಾಗಬೇಕು. ಅದನ್ನು ಓದಬೇಕು, ಹಾಡಬೇಕು, ಪ್ರಚಾರ ಮಾಡಬೇಕು. ಮನೆಮನೆಗೂ ಮುಟ್ಟಿಸಬೇಕು. ಅದಕ್ಕೆ ಮಠಗಳಿವೆ, ಸಂಘಸಂಸ್ಥೆಗಳಿವೆ, ರೇಡಿಯೋ ಮತ್ತು ಟಿ.ವಿಗಳಲ್ಲಿ ಹೆಚ್ಚಿನ ರೀತಿಯಲ್ಲಿ ವಚನಗಳು ಮೂಡಿಬರಬೇಕು. ವಚನ ಇಡೀ ನಾಡಿನ ಸಂಪತ್ತು. ಅದನ್ನು ಇನ್ನೂ ಹೆಚ್ಚು ಜನಪ್ರಿಯಗೊಳಿಸುವುದು ಎಲ್ಲ ಪ್ರಾಜ್ಞರ ಕರ್ತವ್ಯ.

□

ಸುಖ ಬಂದಡೆ ಪುಣ್ಯದ ಫಲವೆನ್ನೆನು,
ದುಃಖ ಬಂದಡೆ ಪಾಪದ ಫಲವೆನ್ನೆನು ;
ನೀ ಮಾಡಿದಡಾಯಿತ್ತೆಂದೆನ್ನೆನು,
ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು,
ಉದಾಸೀನವಿಡಿದು ಶರಣೆನ್ನೆನು.
ಕೂಡಲಸಂಗಮದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲ್ಲಿ ;
ಸಂಸಾರವ ಸವೆಯೆ ಬಳಸುವೆನು.

—ಬಸವಣ್ಣ

## ಗ್ರಂಥ ಪರಾಮರ್ಶೆ

# ಶ್ರೀಮತಿ ವಸುಂಧರಾ ಫಿಲಿಯೋಜಾರವರ ಮೂರು ಕೃತಿಗಳು

**1) ಹಂಪಿ : ಸೇಕ್ರೆಡ್ ಇಂಡಿಯಾ ಗ್ಲೋರಿಯಸ್ ಇಂಡಿಯಾ**

**2) ವಾಕ್ ಅಂಡ್ ವಚನ (ದಿ ಪರ್ಲ್ಸ್ ಆಫ್ ವಿಸ್ಡಂ)**

**3) ಪಂಡಿತ ಚೆನ್ನಬಸಪ್ಪ ಕವಲಿ (ಅವರ ಜೀವನನೌಕೆಯ ಓಲಾಟ-ತೇಲಾಟ)**

---

"ಹಂಪಿ : ಸೇಕ್ರೆಡ್ ಇಂಡಿಯಾ ಗ್ಲೋರಿಯಸ್ ಇಂಡಿಯಾ" ಕೃತಿಯು ಹಂಪಿಯ ಭಗ್ನಾವಶೇಷಗಳ ಅಂತರಾಳದಲ್ಲಿ ಅಡಗಿರುವ ಐತಿಹಾಸಿಕ ವಾಸ್ತವವನ್ನು ವಸ್ತುನಿಷ್ಠವಾಗಿ ನಿರೂಪಿಸುತ್ತದೆ. ಈ ಚಿತ್ರಸಂಪುಟ ನಯನಮನೋಹರವೂ, (Visual Delight), ಚಿತ್ತಾಕರ್ಷಕವೂ ಆಗಿದೆ. ಕಲ್ಲಿನಲ್ಲಿ ಬರೆದ ಈ ಕಾವ್ಯವನ್ನು ಇಲ್ಲಿನ ಛಾಯಾಚಿತ್ರಗಳು ಮನಸೆಳೆಯುವಂತೆ ಕಡಿದಿಟ್ಟಿವೆ. ಹಲವಾರು ವರ್ಷಗಳ ಅಧ್ಯಯನದ ಫಲವಾಗಿ ಈ ಆಚಾರ್ಯಕೃತಿ ರೂಪುಗೊಂಡಿದೆಯೆಂಬುದು ನಿಸ್ಸಂಶಯ.

"ವಾಕ್ ಮತ್ತು ವಚನ" ಕೃತಿಯು ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್ ಸಂಸ್ಥೆಯು ಆಯೋಜಿಸಿದ ವಿಚಾರಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳು ಮತ್ತು ಕಲಾಪಗಳ ಸಂಕಲನವಾಗಿದೆ. ಕರ್ನಾಟಕದ ವೀರವಿರಾಗಿಣಿ ಅಕ್ಕಮಹಾದೇವಿ ಮತ್ತು ದೂರದ ಕಾಶ್ಮೀರದ ಲಲ್ಲೇಶ್ವರಿ ಅವರುಗಳ ಭಗವತ್ಪ್ರೇಮ ಮತ್ತು ಅದನ್ನು ಸಮರ್ಥವಾಗಿ ಅಭಿವ್ಯಕ್ತಿಸುವ ವಿಶಿಷ್ಟ ಕಾವ್ಯಪ್ರಕಾರಗಳನ್ನು ಕುರಿತ ಈ ವಿಚಾರಸಂಕಿರಣದ ಚಿಂತನೆಗಳು ಆಸಕ್ತಿಕರವಾಗಿವೆ. ಈ ಇಬ್ಬರು ದಾರ್ಶನಿಕರ ಮನದಾಳದ ನುಡಿಗಳೂ 'ವಾಕ್' ಆಗಿಯೇ ಇರುವುದು ಧ್ವನಿಪೂರ್ಣ. ಈ ಕೃತಿ ಕನ್ನಡಕ್ಕೆ ಅನುವಾದವಾಗಬೇಕಾದುದು ಅಗತ್ಯ.

ಜೀವನನೌಕೆಯ ಓಲಾಟ-ತೇಲಾಟಗಳನ್ನು "ಪಂಡಿತ ಚೆನ್ನಬಸವಪ್ಪ ಕವಲಿ" ಕೃತಿಯಲ್ಲಿ ಅತ್ಯಂತ ಮನೋಜ್ಞವಾಗಿ ದಾಖಲಿಸಲಾಗಿದೆ. ಕರ್ನಾಟಕದಲ್ಲಿ ಬಹಳಷ್ಟು ಜನ ಅವರ ಸಾಧನೆಗಳಿರಲಿ, ಅವರ ಹೆಸರನ್ನೂ ಕೇಳಿರದ ಅಂಧಕಾರದಲ್ಲಿದ್ದಾರೆ! ಪಂ. ಕವಲಿಯವರ ಸಾರಸ್ವತ ಸಾಧನೆಗಳು, ಮೇರೆಯಿಲ್ಲದ ಪ್ರತಿಭೆ, ಅಪಾರ ಪ್ರಮಾಣದ ಕೃತಿರಚನೆ, ಅದೂ ಆ ಕಾಲಘಟ್ಟದಲ್ಲಿ, ಅಭಿನಂದನೀಯವಾದುದು. ಅಂಥ ಪ್ರಾತಃಸ್ಮರಣೀಯರ ಬದುಕನ್ನು ಇಂದಿನವರು ಅರಿಯಬೇಕಾದುದು ಅತ್ಯಂತ ಅಗತ್ಯ.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ನಾಡಿಗೆ ನಾಲ್ವಡಿಯವರ ಕೊಡುಗೆ ಅಪಾರ

ನಾಡಿಗೆ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕೊಡುಗೆ ಅಪಾರವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 4ರಂದು ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಶತಮಾನೋತ್ಸವದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಯದುವಂಶದ ಅರಸರು ಸಾಕಷ್ಟು ಶ್ರಮಿಸಿದ್ದಾರೆ. ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ, ಕೈಗಾರಿಕೆ ಹೀಗೆ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ ಸಾಕಷ್ಟು ಒತ್ತು ನೀಡಿದರು. ವಿಶ್ವೇಶ್ವರಯ್ಯನವರು ದೂರದೃಷ್ಟಿಯುಳ್ಳವರು, ಸೂಕ್ಷ್ಮಮತಿಗಳು, ತಾಂತ್ರಿಕತೆಯಲ್ಲಿ ಅನುಭವವುಳ್ಳವರಾಗಿದ್ದರು. ನಾಲ್ವಡಿಯವರೊಂದಿಗೆ ಕೈಜೋಡಿಸಿ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದರು. ರಾಜಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಜಾರಿಗೆ ತಂದು ಜನರಿಗೆ ಅಧಿಕಾರ ನೀಡಿದ ಕೀರ್ತಿ ಮೈಸೂರು ಒಡೆಯರಿಗೆ ಸಲ್ಲುತ್ತದೆ. ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಕಾರ್ಖಾನೆ ಪುನಶ್ಚೇತನಗೊಂಡು ಮರು ಪ್ರಾರಂಭಗೊಂಡು ಅನೇಕರಿಗೆ ಬದುಕು ಕಟ್ಟಿಕೊಳ್ಳಲು ಸಹಾಯಕವಾಗಲೆಂದು ಸಾಕಷ್ಟು ಜನ ಶ್ರಮಿಸುತ್ತಿದ್ದಾರೆ. ಇಂದು ಒದಗಿ ಬಂದಿರುವ ಪರಿಸ್ಥಿತಿಯ ಕುರಿತು ಪುನರಾವಲೋಕನ ಮಾಡುವ ಅಗತ್ಯವಿದೆ. ಎಲ್ಲರೂ ಒಟ್ಟಾಗಿ ಈ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವುದು ಅಥವಾ ಪರ್ಯಾಯವಾಗಿ ಹೇಗೆ ಮಾಡಬಹುದು ಎಂಬ ಬಗ್ಗೆ ಚರ್ಚಿಸುವುದು ಸೂಕ್ತ ಎಂದು ತಿಳಿಸಿದರು.

ಮೈಸೂರು ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ನಮ್ಮ ಪೂರ್ವಿಕರ ಕೊಡುಗೆಯಾಗಿರುವ ವಿಐಎಸ್‌ಎಲ್ ಕಾರ್ಖಾನೆ ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಕಾರ್ಖಾನೆ ಉಳಿಸಿಕೊಳ್ಳುವ ಹೋರಾಟದಲ್ಲಿ ನಾನೂ ಜೊತೆಯಲ್ಲಿರುತ್ತೇನೆ. ಮೈಸೂರು ಅರಸರು ಸದಾಕಾಲ ಜನರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದರು. ಅವರು ಕೈಗೊಂಡಿರುವ ಕಾರ್ಯಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಆದಿಚುಂಚನಗಿರಿ ಜಗದ್ಗುರುಗಳು, ಆನಂದಪುರಂ ಜಗದ್ಗುರುಗಳು, ಸಿದ್ಧಗಂಗಾ

ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಉದ್ಯಮಿಗಳಾದ ಶ್ರೀ ವಿಜಯ ಸಂಕೇಶ್ವರರವರು ಮತ್ತು ಶ್ರೀ ಮೋಕ್ಷಗುಂಡಂ ಶೇಷಾದ್ರಿಯವರುಗಳನ್ನು ಸನ್ಮಾನಿಸಲಾಯಿತು. ಬೀಳಕಿ ಶ್ರೀಗಳು, ಸಚಿವರಾದ ಶ್ರೀ ಎಸ್. ಮಧು ಬಂಗಾರಪ್ಪನವರು, ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರರವರು, ಶಾಸಕರುಗಳಾದ ಶ್ರೀ ಬಿ.ಕೆ. ಸಂಗಮೇಶ್ವರರವರು, ಶ್ರೀ ರುದ್ರೇಗೌಡರು, ಕಲಾವಿದರಾದ ಶ್ರೀ ಎಸ್. ದೊಡ್ಡಣ್ಣನವರು ಮೊದಲಾದವರುಗಳು ಉಪಸ್ಥಿತರಿದ್ದರು.

**ಮನೋ ವಿಕಾಸದಿಂದ ಯಶಸ್ಸು ಸಾಧ್ಯ**

ಮನುಷ್ಯನ ಮನಸ್ಸು ವಿಕಾಸವಾದರೆ ಬದುಕಿನಲ್ಲಿ ಯಶಸ್ಸು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 3ರಂದು ಸಾಣೆಹಳ್ಳಿಯಲ್ಲಿ ಶ್ರೀ ಶಿವಕುಮಾರ ಕಲಾಸಂಘದಿಂದ ಆಯೋಜಿಸಿದ್ದ ರಾಷ್ಟ್ರೀಯ ನಾಟಕೋತ್ಸವದ ಎರಡನೇ ದಿನದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ರಂಗಭೂಮಿಯ ಮೂಲಕ ಜಡ್ಡುಗಟ್ಟಿದ ಮನಸ್ಸುಗಳಿಗೆ ಸಾಣೆ ಹಿಡಿಯುವ ಕಾರ್ಯವನ್ನು ಪಂಡಿತಾರಾಧ್ಯ ಶ್ರೀಗಳು ಮಾಡುತ್ತಿದ್ದಾರೆ. ಸಮಾಜಕ್ಕೆ ಕಲಾವಿದರನ್ನು ಕೊಡುಗೆಯಾಗಿ ನೀಡುವ ಕೆಲಸ ಮಹತ್ತರವಾದುದು. ನಾಟಕ ಜನರ ಮನಸ್ಸಿನ ಮೇಲೆ ಅತ್ಯಂತ ಪ್ರಭಾವ ಬೀರುವ ಮಾಧ್ಯಮವಾಗಿದೆ ಎಂದು ಹೇಳಿದರು.

ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ನಾಡಿನಲ್ಲಿ ಒಳ್ಳೆಯ ನುಡಿಗಳಿಗೆ ಬರವಿಲ್ಲ. ಆದರೆ ಆಡಿದಂತೆ ನಡೆಯುವವರ ಬರವಿದೆ. ಶಿಕ್ಷಣದಲ್ಲಿ ಸಂಸ್ಕಾರದ ಕೊರತೆಯಿದೆ. ರಂಗಭೂಮಿಯ ಮೂಲಕ ಅದನ್ನು ನೀಗಿಸುವ ಕೆಲಸ ಮಾಡಲಾಗುತ್ತಿದೆ. ಪ್ರತಿಯೊಬ್ಬರಲ್ಲಿ ಸಂಸ್ಕಾರ, ಪ್ರಾಮಾಣಿಕತೆ, ಸಮಾನತೆಗಳು ಬೆಳೆದರೆ ಮಾತ್ರ ಕಲ್ಯಾಣದ ಶರಣರು ಕಂಡ ಸಮಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ತಿಳಿಸಿದರು.

ಕೇಂದ್ರ ಸಚಿವರಾದ ಶ್ರೀ ಎ. ನಾರಾಯಣಸ್ವಾಮಿಯವರು ಬಸವಾದಿ ಶರಣರ ವಚನಗಳನ್ನು ಮನೆ ಮತ್ತು ಮನಗಳಿಗೆ ತಲುಪಿಸುವ ಕೆಲಸವನ್ನು ರಾಷ್ಟ್ರೀಯ ನಾಟಕೋತ್ಸವ ಮಾಡುತ್ತಿದೆ. ಬಸವಣ್ಣನವರ ವಚನಗಳು ಕೇವಲ ಕರ್ನಾಟಕಕ್ಕೆ ಸೀಮಿತವಾಗಬಾರದು. ಅವರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡವರು ಮಾತ್ರ ಜನ ಸೇವಕರಾಗಲು ಸಾಧ್ಯ ಎಂದರು.

ಶಾಸಕರಾದ ಶ್ರೀ ಹೆಚ್.ಡಿ. ತಮ್ಮಯ್ಯ, ಮಾಜಿ ಶಾಸಕರುಗಳಾದ ಶ್ರೀ ಡಿ.ಎಸ್. ಸುರೇಶ್, ಶ್ರೀ ಮಾಡಾಳ್ ವಿರೂಪಾಕ್ಷಪ್ಪ, ಕುಲಪತಿಗಳಾದ ಪ್ರೊ. ಕೆ.ಬಿ. ಗುಡಸಿ, ಸಂಗೀತ ನಿರ್ದೇಶಕರಾದ ಶ್ರೀ ವಿ. ಮನೋಹರ್, ಶ್ರೀ ಉಮೇಶ್ ಸಾಲಿಯಾನರವರುಗಳು ಉಪಸ್ಥಿತರಿದ್ದರು.

**ಹನ್ನೆರಡನೇ ಶತಮಾನ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದ್ದು**

ಹನ್ನೆರಡನೇ ಶತಮಾನ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದ್ದು ಎಂದು

ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 2ರಂದು ಬೈಲಹೊಂಗಲದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ದ್ವಿತೀಯ ಕದಳಿ ಮಹಿಳಾ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸಮಾಜದ ಸಮಗ್ರ ಪರಿವರ್ತನೆಗೆ ಕಾರಣರಾದವರು ಶರಣರು. ಅಸ್ಪೃಶ್ಯತೆ, ಅಸಮಾನತೆಗಳನ್ನು ಹೋಗಲಾಡಿಸಿದರು. ಅಕ್ಕನ ವೈರಾಗ್ಯ, ತ್ಯಾಗಗಳು ಇಡೀ ಮನುಕುಲಕ್ಕೆ ಮುಟ್ಟುವ ಮೊದಲು ಅವಳನ್ನು ವಿಧ ವಿಧವಾಗಿ ಪರೀಕ್ಷೆ ಮಾಡಲಾಯಿತು. ಕೊನೆಗೆ ಅಕ್ಕನ ಶ್ರೀಪಾದಕ್ಕೆ ನಮೋ ನಮೋ ಎನ್ನಲಾಯಿತು. ಮಹಿಳೆಗೆ ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಗೌರವವನ್ನು ಆ ಸಂದರ್ಭದಲ್ಲಿ ನೀಡಲಾಯಿತು. ದೆಹಲಿಯಲ್ಲಿ ನೂತನವಾಗಿ ಸ್ಥಾಪನೆಯಾಗಿರುವ ಸಂಸತ್ತು ಸಭಾಂಗಣಕ್ಕೆ ಭಾರತ ಮಂಟಪ ಎಂದು ಹೆಸರಡಿಲಾಗಿದೆ. 12ನೇ ಶತಮಾನದಲ್ಲಿ ಪ್ರಜಾಪ್ರಭುತ್ವದ ಮಾದರಿಯಲ್ಲಿ ಸ್ಥಾಪನೆಯಾಗಿದ್ದ ಅನುಭವ ಮಂಟಪ ಇದಕ್ಕೆ ಮಾದರಿ. ಗಾಂಧೀಜಿಯವರು ಬೆಳಗಾವಿಗೆ ಭೇಟಿ ನೀಡಿದ ಸಂದರ್ಭದಲ್ಲಿ  ಬಸವಣ್ಣನವರ ಸಂದೇಶಗಳಿಗೆ ಮನಸೋತಿದ್ದರು ಎಂದು ಹೇಳಿದರು.

ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಕದಳಿ ಮಹಿಳಾ ವೇದಿಕೆ ಮಹಿಳೆಯರಲ್ಲಿ ನಿರಂತರವಾದ ಜಾಗೃತಿಯನ್ನುಂಟು ಮಾಡುವ ಕೆಲಸವನ್ನು ಮಾಡುತ್ತಿದೆ. ಇಂತಹ ಸಮಾವೇಶಗಳನ್ನು ಆಯೋಜಿಸುವ ಮೂಲಕ ಮಹಿಳೆಯರಿಗೆ ವಿಶೇಷ ಸ್ಥಾನಮಾನ ನೀಡುತ್ತಿರುವುದು ಶ್ಲಾಘನೀಯ. ಕನ್ನಡ ಸಾಹಿತ್ಯದಿಂದ ಶರಣ ಸಾಹಿತ್ಯವನ್ನು ಹೊರೆದೆಗೆದುಬಿಟ್ಟರೆ ಅಲ್ಲಿ ಏನೂ ಉಳಿಯುವುದಿಲ್ಲ. ಶರಣ ಸಾಹಿತ್ಯ ಅಷ್ಟು ಉತ್ಕೃಷ್ಟವಾದದ್ದು. ಇದು ಜನರ ಮನೆ ಮತ್ತು ಮನಗಳಿಗೆ ತಲುಪಬೇಕು ಎಂಬ ಆಶಯವನ್ನಿಟ್ಟುಕೊಂಡು ಪೂಜ್ಯ ರಾಜೇಂದ್ರ ಶ್ರೀಗಳು ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು ಎಂದು ತಿಳಿಸಿದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀಮತಿ ಶಶಿಕಲಾ ಜೊಲ್ಲೆಯವರು ಕಾರ್ಯಕ್ರಮ ಉದ್ಘಾಟಿಸಿದರು.  ಶ್ರೀಮತಿ ವಿಜಯಲಕ್ಷ್ಮೀ ತೋಟಗಿಯವರಿಗೆ ಕದಳಿಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮುರಗೋಡ ಶ್ರೀಗಳು, ಸರ್ವಾಧ್ಯಕ್ಷರಾದ ಡಾ. ಗುರುದೇವಿ ಹುಲ್ಲೆಪ್ಪನವರಮಠ, ಶಾಸಕರಾದ ಶ್ರೀ ಮಹಾಂತೇಶ ಕೌಜಲಗಿ, ಶ್ರೀ ಅಪ್ಪಾರಾವ್ ಅಕ್ಕೋಣಿ, ಶ್ರೀಮತಿ ಸುಶೀಲಾ ಸೋಮಶೇಖರ್ ಮಾತನಾಡಿದರು.  ಶ್ರೀ ಅಶೋಕ ಮಳಗಲಿ ಸ್ವಾಗತಿಸಿದರು. ಶ್ರೀಮತಿ ಪ್ರೇಮಕ್ಕ ಅಂಗಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಮೀನಾಕ್ಷಿ ಕುಡಸೋಮನ್ನವರ ವಂದಿಸಿದರು. ಶ್ರೀಮತಿ ಗೌರಮ್ಮ ಕರ್ಕಿ ಕಾರ್ಯಕ್ರಮ ನಿರೂಪಿಸಿದರು.

**ನಿರಂತರ ಕಲಿಕೆಯಿಂದ ಮಾತ್ರ ಬೆಳವಣಿಗೆ ಸಾಧ್ಯ**

ನಿರಂತರ ಕಲಿಕೆಯಿಂದ ಮಾತ್ರ ಬೆಳವಣಿಗೆ ಸಾಧ್ಯ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಜೈವಿಕ ತಂತ್ರಜ್ಞಾನ ಇಲಾಖೆಯ ಟ್ರಾನ್ಸಲೇಷನಲ್ ಹೆಲ್ತ್

ಸೈನ್ಸ್ ಅಂಡ್ ಟೆಕ್ನಾಲಜಿ ಇನ್ಸ್ಟಿಟ್ಯೂಟ್‌ನ ಕ್ಲಿನಿಕಲ್ ಡೆವಲಪ್‌ಮೆಂಟ್ ಸರ್ವೀಸಸ್ ಏಜೆನ್ಸಿಯ ತರಬೇತಿ ವಿಭಾಗದ ಮುಖ್ಯಸ್ಥರಾದ ಡಾ. ಸುಚೇತಾ ಬ್ಯಾನರ್ಜಿ ಕುರುಂದ್ಕರ್‌ರವರು ಆಕ್ಟೋಬರ್ 31ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಅಲೈಡ್ ಹೆಲ್ತ್ ಸೈನ್ಸ್‌ಸ್‌ನ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತ ತಿಳಿಸಿದರು. ಪರಿಶ್ರಮವೇ ಯಶಸ್ಸಿನ ಗುಟ್ಟು. ಪ್ರತಿದಿನ ಕಲಿಯುವುದೇ ಜ್ಞಾನ. ಕಲಿಯುವುದನ್ನು ನಿಲ್ಲಿಸಿದರೆ ಬೆಳವಣಿಗೆ ಕುಂಠಿತವಾಗುತ್ತದೆ. ಯಶಸ್ಸಿಗೆ ಯಾವುದೇ ಅಡ್ಡ ದಾರಿಗಳಿಲ್ಲ. ಯಾವುದೇ ರಹಸ್ಯ ಸೂತ್ರಗಳೂ ಇಲ್ಲ. ಅದಕ್ಕೆ ಬೇಕಿರುವುದು ಪರಿಶ್ರಮ ಮಾತ್ರ. ಎಂದಿಗೂ ಬೀಳದೇ ಇರುವುದು ದೊಡ್ಡ ಸಾಧನೆಯಲ್ಲ. ಬಿದ್ದ ನಂತರ ಮತ್ತೆ ಎದ್ದು ನಿಲ್ಲುವುದು ನಿಜವಾದ ಸಾಧನೆ ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಡಾ. ಬಿ.ಎಲ್. ಸುಜಾತ ರಾಥೋಡ್‌ರವರು ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು ರೋಗಿಗಳನ್ನು ಪ್ರೀತಿ, ಗೌರವ, ಸಹಾನುಭೂತಿಗಳಿಂದ ಕಾಣಬೇಕು. ಹೊಸ ಸಂಶೋಧನೆಯಲ್ಲಿ ತೊಡಗಿಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದ ಸುಧಾರಣೆಗೆ ಅವಿರತವಾಗಿ ಶ್ರಮಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 313 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಸುರೀಂದರ್ ಸಿಂಗ್‌ರವರು ಉಪಸ್ಥಿತರಿದ್ದರು. ಕು. ಮೇಧಾ ಮತ್ತು ಕು. ಶ್ರದ್ಧಾ ಪ್ರಾರ್ಥಿಸಿದರು. ಡಾ. ಎಂ.ಎನ್.. ಸುಮಾ ಸ್ವಾಗತಿಸಿದರು. ಡಾ. ವಿಜಯಾ ವಾಗೀಶ ಪದಕ ಮತ್ತು ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳ ಹೆಸರು ಪ್ರಕಟಿಸಿದರು. ಡಾ. ಪ್ರವೀಣ್ ಕುಲಕರ್ಣಿ ವಂದಿಸಿದರು. ಡಾ. ಎನ್. ಅಶ್ವಿನಿ ಕಾರ್ಯಕ್ರಮ ನಿರೂಪಿಸಿದರು.

**ರಾಜೇಂದ್ರ ಶ್ರೀಗಳು ಅಂತಃಕರಣಿಗಳು ಮತ್ತು ದೂರದೃಷ್ಟಿಯುಳ್ಳವರಾಗಿದ್ದರು**

ರಾಜೇಂದ್ರ ಶ್ರೀಗಳು ಅಂತಃಕರಣಿಗಳು ಮತ್ತು ದೂರದೃಷ್ಟಿಯುಳ್ಳವರಾಗಿದ್ದರು ಎಂದು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಎನ್. ಜಯರಾಮ್‌ರವರು ನವೆಂಬರ್ 5ರಂದು ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ರಾಜೇಂದ್ರ ಶ್ರೀಗಳವರ 108ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಯಾವುದೇ ಹಣವಿಲ್ಲದೆ ನಾನು ಆಶ್ರಯಕ್ಕಾಗಿ ಶ್ರೀಗಳ ಮುಂದೆ ನಿಂತಾಗ, ನನಗೆ ಹಾಸ್ಟೆಲ್‌ನಲ್ಲಿ ಪೂರ್ಣವಾಗಿ ಉಚಿತ ಸೌಲಭ್ಯ ನೀಡಿ ಸಹಾಯ ಮಾಡಿದ್ದು ನನ್ನ ಭವಿಷ್ಯ ರೂಪುಗೊಳ್ಳಲು ಸಹಕಾರಿಯಾಯಿತು ಎಂದು ಸ್ಮರಿಸಿದರು.

ದಾವಣಗೆರೆ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್‌ರವರು ಜೆಎಸ್‌ಎಸ್ ಸಂಸ್ಥೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಿದೆ. ಈ ಸಂಸ್ಥೆಯಲ್ಲಿ ನನ್ನ ಅಮೂಲ್ಯವಾದ ಎಂಟು ವರ್ಷಗಳನ್ನು ಕಳೆದಿದ್ದೇನೆ. ಇಲ್ಲಿ ದೊರೆತ ಅನುಭವ ನನ್ನ ವ್ಯಕ್ತಿತ್ವದ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಎಲ್. ರೇವಣಸಿದ್ಧಯ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ಮಹೇಶ್ವರ ನುಡಿನಮನ ಸಲ್ಲಿಸಿದರು. ಶ್ರೀ ಎ.ಎಸ್. ಚನ್ನಬಸಪ್ಪ ಸ್ವಾಗತಿಸಿದರು. ಶ್ರೀ ಮಂಟೇಲಿಂಗಾಚಾರ್ ವಂದಿಸಿದರು.

**ಗುರುವಿನ ಮಾರ್ಗದರ್ಶನ ಅಗತ್ಯ**

ಲೌಕಿಕ ಜೀವನದಿಂದ ಮುಕ್ತಿ ಪಡೆದು ಮೋಕ್ಷ ಹೊಂದಲು ಗುರುವಿನ ಮಾರ್ಗದರ್ಶನ ಅಗತ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 7ರಂದು ಹುಬ್ಬಳ್ಳಿ ಶ್ರೀ ಶಾಂತಾಶ್ರಮದಲ್ಲಿ ಸಮಾಧಿ ಮಂದಿರ, ಮಹಾದ್ವಾರ, ಶ್ರೀ ಶಿವಪುತ್ರ ಸ್ವಾಮಿಗಳ ಹಾಗೂ ಶ್ರೀ ಅಭಿನವ ಶಿವಪುತ್ರ ಸ್ವಾಮಿಗಳ ಅಮೃತಶಿಲಾ ಮೂರ್ತಿ ಸ್ಥಾಪನೆ, ಆರೂಢಜ್ಯೋತಿ ಶ್ರೀ ಶಿವಪುತ್ರ ಸ್ವಾಮಿಗಳ ಸಮಗ್ರ ಟೀಕಾ ಸಾಹಿತ್ಯ ಲೋಕಾರ್ಪಣೆ, ಶ್ರೀ ಸಿದ್ಧಾರೂಢ ಸ್ವಾಮಿ ಹಾಗೂ ಶ್ರೀ ಶಿವಪುತ್ರ ಸ್ವಾಮಿ ಕಲಾನಿಕೇತನ ಲೋಕಾರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಾಣನು ಲೌಕಿಕ ಮತ್ತು ಪಾರಮಾರ್ಥ ಎರಡನ್ನೂ ಕೂಡಿ ಬಾಳುತ್ತಾನೆ. ಎರಡಕ್ಕೂ ಅವಕಾಶವಾದರೆ ಮಾತ್ರ ಮಾನವ ಬದುಕಿನಲ್ಲಿ ಸಾರ್ಥಕತೆ ಸಾಧ್ಯ. ಮನಸ್ಸು ಮತ್ತು ಹೃದಯಗಳು ಪ್ರಫುಲ್ಲವಾಗಿದ್ದರೆ ಜ್ಞಾನತ್ವ ಬೇಗ ಸಿದ್ಧಿಸುತ್ತದೆ. ಮನುಷ್ಯನ ವಿಕಾಸಕ್ಕೂ ಇದು ಕಾರಣವಾಗುತ್ತದೆ. ಪವಿತ್ರವಾದ ಮನಸ್ಸಿದ್ದರೆ ಮಾತ್ರ ಉತ್ತಮ ವಿಚಾರಗಳನ್ನು ಅಲ್ಲಿ ತುಂಬಲು ಸಾಧ್ಯ. ಅಂತಹ ಪವಿತ್ರವಾದ ಕೆಲಸವನ್ನು ಶ್ರೀ ಸಿದ್ಧಾರೂಢರು ಮಾಡಿದ್ದಾರೆ ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರು ಬದುಕಿನಲ್ಲಿ ಜ್ಞಾನ ಬರಬೇಕಾದರೆ ಶಿಸ್ತು ಅತ್ಯವಶ್ಯಕ. ಶಿವಪುತ್ರ ಶ್ರೀಗಳು ಭಕ್ತರು ಹೇಗಿರಬೇಕೆಂಬ ಶಿಸ್ತು ಕಲಿಸಿದವರು. ಅದೇ ಕಾರಣಕ್ಕಾಗಿಯೇ ಇಂದು ಸಾವಿರಾರು ಸಂಖ್ಯೆಯ ಭಕ್ತರು ಈ ಕಾರ್ಯಕ್ರಮದಲ್ಲಿ ಸೇರಿದ್ದಾರೆ. ನಾಡಿನ ಹಲವು ಪೂಜ್ಯರನ್ನು ಒಂದೆಡೆ ಸೇರಿಸಿ ಧರ್ಮಸಂದೇಶ ನೀಡುವ ಕಾರ್ಯ ಕೈಗೊಂಡಿರುವುದು ಅಭಿನಂದನಾರ್ಹವಾಗಿದೆ ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಗುರುವಿನ ಮಾತು ಮಂತ್ರವಿದ್ದಂತೆ. ಶಿಷ್ಯರು, ಭಕ್ತರು ಗುರುಗಳು ಹೇಳುವ ಮಾತುಗಳನ್ನು ಆಲಿಸುವುದ ರೊಂದಿಗೆ ಅದರ ಪಾಲನೆಗೆ ಒತ್ತು ನೀಡಬೇಕು. ಪ್ರತಿಯೊಬ್ಬರೂ ಮಹನೀಯರ ಆದರ್ಶಗಳನ್ನು ಅರಿತು ಜೀವನದಲ್ಲಿ ಅದರಂತೆ ನಡೆಯಬೇಕು ಎಂದು ಹೇಳಿದರು.

ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳು, ಬೀದರ ಶ್ರೀ ಚಿದಂಬರಾಶ್ರಮದ ಜಗದ್ಗುರುಗಳು, ಮುಗಳಖೋಡ ಶ್ರೀ ಯಲ್ಲಾಲಿಂಗೇಶ್ವರ ಮಠದ ಜಗದ್ಗುರುಗಳು, ಗೌರಿಗದ್ದೆಯ ಶ್ರೀ ಅವಧೂತ ವಿನಯ್ ಗುರೂಜಿಯವರು ಆಶೀರ್ವಚನ ನೀಡಿದರು. ಶ್ರೀ ಅಭಿನವ ಸಿದ್ಧಾರೂಢ ಸ್ವಾಮಿಗಳು, ಕಾಡರಕೊಪ್ಪ, ಮರೆಗುದ್ದಿ, ಹಂದಿಗುಂದ, ಶೇಗುಣಿಸಿ, ಆಲಮಟ್ಟಿ, ಗಬ್ಬೂರ ಮಠಗಳ ಶ್ರೀಗಳು ಉಪಸ್ಥಿತರಿದ್ದರು.

**ಗ್ರಂಥಗಳ ಓದಿನಿಂದ ಬದುಕಿನಲ್ಲಿ ನೆಮ್ಮದಿ ಸಾಧ್ಯ**

ಗ್ರಂಥಗಳ ಓದಿನಿಂದ ಬದುಕಿನಲ್ಲಿ ನೆಮ್ಮದಿ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 11ರಂದು ಬೆಂಗಳೂರು ಸನ್‌ಸ್ಟಾರ್ ಪಬ್ಲಿಷರ್ಸ್ ವತಿಯಿಂದ ಆಯೋಜಿಸಿದ್ದ ಶ್ರೀಮತಿ ಪ್ರಮೀಳಮ್ಮನವರ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಗ್ರಂಥಗಳ ಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಗ್ರಂಥಗಳನ್ನು ಓದುವುದರಿಂದ ಜೀವನದಲ್ಲಾಗುವ ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದೆ ಸಾಗಬಹುದು. ಮೌನದಿಂದ ಇದ್ದಾಗ ಮಾತ್ರ ಸೌಹಾರ್ದತೆ, ಸಹಬಾಳ್ವೆ ಸಾಧ್ಯ. ಈ ಎಲ್ಲ ಗುಣಗಳು ಮನುಷ್ಯನಲ್ಲಿ ಕಾಣಬೇಕಾದರೆ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಸಾರ್ವಜನಿಕ ಗ್ರಂಥಾಲಯ ನಿರ್ದೇಶಕರಾದ ಡಾ. ಸತೀಶ್‌ಕುಮಾರ್ ಹೊಸಮನಿಯವರು ಸಾಹಿತ್ಯದ ಮೂಲಕ ಸಮಾಜದಲ್ಲಿ ಬದಲಾವಣೆ ತರಬಹುದಾಗಿದೆ. ಸಮಾಜದಲ್ಲಿ ಪುಸ್ತಕ ಸಂಸ್ಕೃತಿ ಬೆಳೆಸುವ ಹಬ್ಬವಾಗಬೇಕು. ಇಲಾಖೆ ವತಿಯಿಂದ ಓದುಗರಿಗೆ ಅನುಕೂಲವಾಗಲೆಂದು ಡಿಜಿಟಲ್ ಗ್ರಂಥಾಲಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಕುಳಿತಲ್ಲಿಯೇ ನಮಗೆ ಬೇಕಾದ ಪುಸ್ತಕವನ್ನು ತಂತ್ರಜ್ಞಾನದ ಮೂಲಕ ತೆರೆದು ಒದಬಹುದಾಗಿದೆ. ಎಲ್ಲ ಓದುಗರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಶ್ರೀಮತಿ ಸೌಮ್ಯ ದಯಾನಂದರವರ "ಸಂಜೆ ಐದರ ಸಂತೆ", ಶ್ರೀ ಸದಾಶಿವ ಸೊರಟೂರುರವರ "ನಿನ್ನ ಬೆರಳು ತಾಕಿ", ಶ್ರೀ ವಿ. ಲಕ್ಷ್ಮೀನಾರಾಯಣರವರ "ನೆಲದ ಇಬ್ಬನಿ" ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಡಾ. ಸಿ.ಎನ್. ರಾಮಚಂದ್ರನ್, ಶ್ರೀ ಎಂ. ರಾಜ್‌ಕುಮಾರ್, ಶ್ರೀ ಷಡಕ್ಷರಿ, ಶ್ರೀ ಸತೀಶ್ ಹೆಗ್ಗಡೆ, ಶ್ರೀ ಡಿ.ಎನ್. ಶೇಖರ್‌ರೆಡ್ಡಿ ಉಪಸ್ಥಿತರಿದ್ದರು.

**ಗಳಿಸಿದ ಜ್ಞಾನವನ್ನು ಉತ್ತಮವಾಗಿ ಬಳಸಬೇಕು**

ಜ್ಞಾನವನ್ನು ಗಳಿಸುವುದು ಮಾತ್ರ ಮುಖ್ಯವಲ್ಲ, ಅದನ್ನು ಉತ್ತಮವಾಗಿ ಬಳಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 18ರಂದು ಮೈಸೂರು ಎಸ್‌ವಿಇಐ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನಾ

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜ್ಞಾನಿಯಾದವನು ಸದ್ಭಾವನೆ ಮತ್ತು ವಿನಯವುಳ್ಳವನೂ ಆಗಿರುತ್ತಾನೆ. ಈ ಸಂಸ್ಥೆಯು ವಿದ್ಯೆ ನೀಡುವುದರೊಂದಿಗೆ ಸಮಾಜಕ್ಕೆ ಉತ್ತಮ ನಾಗರಿಕರನ್ನು ಒದಗಿಸುವ ಕೆಲಸವನ್ನು ಮಾಡುತ್ತಿದೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಶಿಕ್ಷಕರು ಮಕ್ಕಳಿಗೆ ವೈಚಾರಿಕತೆಯ ಅರಿವು ಮೂಡಿಸುವ ಶಿಕ್ಷಣವನ್ನು ನೀಡಬೇಕು. ಎಂಟು ಶತಮಾನಗಳ ಹಿಂದೆಯೇ ಬಸವಾದಿ ಶರಣರು ಮೌಢ್ಯತೆಯ ವಿರುದ್ಧ ಜಾಗೃತಿ ಮೂಡಿಸಿದ್ದಾರೆ. ಶಿಕ್ಷಕರು ವೈಚಾರಿಕತೆಯನ್ನು ಮೈಗೂಡಿಸಿಕೊಂಡರೆ ಆಗ ಮಕ್ಕಳಲ್ಲಿಯೂ ವೈಚಾರಿಕ ಜ್ಞಾನ ಮೂಡಲು ಸಾಧ್ಯವಾಗುತ್ತದೆ. ಶಿಕ್ಷಣ ಕೇವಲ ಉದ್ಯೋಗ ಪಡೆಯುವುದಕ್ಕೆ ಅಲ್ಲ, ಸಮಾಜದ ಜವಾಬ್ದಾರಿಯನ್ನು ಅರಿಯಲು ಅಗತ್ಯವಾಗಿದೆ ಎಂದು ತಿಳಿಸಿದರು.

ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಶ್ರೀ ಕೆ. ಹರೀಶ್ ಗೌಡ, ಶ್ರೀ ಎಂ.ಕೆ. ಪೋತರಾಜ್ ಉಪಸ್ಥಿತರಿದ್ದರು. ಶ್ರೀಮತಿ ಕೋಮಲ ಪೋತರಾಜ್ ಪ್ರಾರ್ಥಿಸಿದರು. ಶ್ರೀ ಟಿ. ಪ್ರಭಾಕರ್ ಶೆಟ್ಟಿ ಸ್ವಾಗತಿಸಿದರು. ಶ್ರೀ ಕೆ.ಎಂ. ರಾಜಶೇಖರ್ ವಂದಿಸಿದರು. ಶ್ರೀಮತಿ ಸವಿತಾ ಮತ್ತು ಶ್ರೀಮತಿ ಪದ್ಮಪ್ರಿಯಾ ಕಾರ್ಯಕ್ರಮ ನಿರೂಪಿಸಿದರು.

## ರೈತ ಶಕ್ತಿದಾತನೂ ಆಗಿದ್ದಾನೆ

ರೈತನು ಈಗ ಕೇವಲ ಅನ್ನದಾತ ಮಾತ್ರವಲ್ಲ, ಆತ ಶಕ್ತಿದಾತನೂ ಆಗಿದ್ದಾನೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ನವೆಂಬರ್ 21ರಂದು ನೊಯಿಡಾದ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಆಕಾಡೆಮಿಯಲ್ಲಿ ಸೀಪಾ ಸಂಸ್ಥೆ ಆಯೋಜಿಸಿದ್ದ "ಸುಸ್ಥಿರ ಭಾರತ – 2023" ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಭಾರತದಲ್ಲಿ ಇಂದು ಎಥಿನಾಲ್ ಬಳಕೆ ಹೆಚ್ಚುತ್ತಿದೆ. ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಕಡಿಮೆಯಾಗುತ್ತಿದೆ. ರೈತರು ರಸಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಬಳಸುವುದನ್ನು ಕಡಿಮೆ ಮಾಡಬೇಕು. ಇದು ಅವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ರಾಸಾಯನಿಕಗಳಿಗೆ ಬದಲಾಗಿ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಜನರ ಆರೋಗ್ಯವು ಉತ್ತಮವಾಗಿರುತ್ತದೆ. ಆಗ ಸದೃಢವಾದ ದೇಶವನ್ನು ಕಟ್ಟಲು ಸಾಧ್ಯವಾಗುತ್ತದೆ. ಜಗತ್ತಿನಲ್ಲಿ ಯಾವ ವಸ್ತುವಾಗಲಿ, ವ್ಯಕ್ತಿಯಾಗಲಿ ಅನವಶ್ಯಕವಲ್ಲ. ಆದರೆ ಅವುಗಳನ್ನು ಹೇಗೆ ಬಳಸುತ್ತೇವೆ ಎಂಬುದು ಮುಖ್ಯವಾಗುತ್ತದೆ. ಪರಿಸರಕ್ಕೆ ಪೂರಕವಾದ ಸೌರ, ವಾಯು ಶಕ್ತಿಯನ್ನು ಹೆಚ್ಚು ಬಳಸಬೇಕು. ಶ್ರೀ ಸುತ್ತೂರು ಮಠವು ಆಧ್ಯಾತ್ಮ ಮತ್ತು ವಿಜ್ಞಾನದ ಸಮ್ಮಿಲನದ ಕೇಂದ್ರವಾಗಿದೆ. ಎರಡನ್ನೂ ಸಮತೋಲನಗೊಳಿಸಿಕೊಂಡು ಸಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ

ಪ್ರಕೃತಿ ಮತ್ತು ಮಾನವನ ನಡುವೆ ಸಾಮರಸ್ಯದ ಸಹಬಾಳ್ವೆಯನ್ನು ಸೃಷ್ಟಿಸಲು ನಾವೀನ್ಯತೆಯನ್ನು ಅಳವಡಿಸಿಕೊಳ್ಳಬೇಕಿದೆ. ಕನಸುಗಳು ಮತ್ತು ಆಕಾಂಕ್ಷೆಗಳೊಂದಿಗೆ ಸುಸ್ಥಿರ ಭವಿಷ್ಯಕ್ಕಾಗಿ ಒಂದಾಗಿ ಸಾಗಬೇಕಿದೆ. ಸುಸ್ಥಿರತೆ ಎಂಬುದು ಇಂದು ಅತ್ಯಂತ ಅರ್ಹವಾದ ನಿರ್ಣಾಯಕ ವಿಷಯವಾಗಿದೆ. ಎಲ್ಲಾ ಜೀವಿಗಳು ಇದನ್ನು ತಮ್ಮ ಆದ್ಯತೆಯಾಗಿ ಪರಿಗಣಿಸಬೇಕು. ಇಂತಹ ಸಮ್ಮೇಳನಗಳು ಪ್ರಕೃತಿ ಮತ್ತು ಆರ್ಥಿಕ ಅಭಿವೃದ್ಧಿಯ ನಡುವೆ ಸಾಮರಸ್ಯವನ್ನು ತರುವದರೊಂದಿಗೆ, ಸರ್ಕಾರ ಮತ್ತು ಸಮಾಜದ ಬದ್ಧತೆಯನ್ನು ಹೆಚ್ಚಿಸುತ್ತವೆ. ಸುಸ್ಥಿರ ಭಾರತಕ್ಕಾಗಿ 'ಸೀಪಾ'ದಂತಹ ಸಂಸ್ಥೆಗಳು ಕೈಗೊಳ್ಳುತ್ತಿರುವ ಜಾಗೃತಿಯ ಕಾರ್ಯಕ್ರಮಗಳು ಶ್ಲಾಘನೀಯ ಎಂದು ತಿಳಿಸಿದರು.

ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾದ ಅಧ್ಯಕ್ಷರಾದ ಪ್ರೊ. ಆರ್.ಪಿ. ಗುಪ್ತಾ, ಸೀಪಾ ಅಧ್ಯಕ್ಷರಾದ ಡಾ. ರಘುರಾಮ್ ಅರ್ಜುನನ್, ಎಪಿಜೆ ಅಬ್ದುಲ್ ಕಲಾಂ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ಜೆ.ಪಿ. ಪಾಂಡೆರವರುಗಳು ಮಾತನಾಡಿದರು. ಡಾ. ಸಿ.ಜಿ. ಬೆಟಸೂರಮಠರವರು ಸ್ವಾಗತಿಸಿದರು. ಪ್ರೊ. ಅಮರ್ಜಿತ್ ಸಿಂಗ್ ವಂದಿಸಿದರು. ಶ್ರೀಮತಿ ಪರವೀಣ್ ಪೊನ್‌ತರೆಂಗ್ ಕಾರ್ಯಕ್ರಮ ನಿರೂಪಿಸಿದರು.

## ಆಧ್ಯಾತ್ಮದ ಸೆಲೆಯಾಗಿರುವ ಶ್ರೀ ಶಾಂತಗಿರಿ ಆಶ್ರಮ

ಅಚಲವಾದ ಬದ್ಧತೆ, ಪ್ರೀತಿ ಮತ್ತು ವಿಶ್ವಾಸಗಳ ಹಂಚಿಕೆಯೊಂದಿಗೆ ಆಧ್ಯಾತ್ಮಿಕ ಸೆಲೆಯಾಗಿ ಶಾಂತಿಗಿರಿ ಆಶ್ರಮ ನಿಂತಿದೆ ಎಂದು ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ನವೆಂಬರ್ 20ರಂದು ನವದೆಹಲಿಯ ಸಾಕೇತ್‌ನಲ್ಲಿ ಶಾಂತಿಗಿರಿ ಆಶ್ರಮದ ರಜತ ಮಹೋತ್ಸವ ಮತ್ತು ಹೊಸ ಸಂಕೀರ್ಣದ ಉದ್ಘಾಟನಾ ಕಾಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಇಪ್ಪತ್ತೈದು ವರ್ಷಗಳ ಹಿಂದೆ ನೆಟ್ಟ ಆಧ್ಯಾತ್ಮಿಕ ಆಕಾಂಕ್ಷೆಯ ಬೀಜ ಹೆಮ್ಮರವಾಗಿ ಬೆಳದು ಅನೇಕರ ಬಾಳಿಗೆ ನೆರಳಾಗಿದೆ. ಬೆಳ್ಳಿಹಬ್ಬ ಆಶ್ರಮದ ಅಭಿವೃದ್ಧಿಯ ಮೈಲಿಗಲ್ಲು. ಶ್ರೀ ನವಜ್ಯೋತಿ ಕರುಣಾಕರ ಗುರುಗಳು ಸನಾತನ ಧರ್ಮದ ಇತಿಹಾಸದಲ್ಲಿ ಹೊಸ ಮಾರ್ಗವನ್ನು ರೂಪಿಸಿದರು. ಅವರ 'ಮಾತು ಸತ್ಯ, ಸತ್ಯವೇ ಗುರು, ಗುರುವೇ ದೇವರು' ಎನ್ನುವ ತತ್ತ್ವದ ಆಧಾರದ ಮೇಲೆ ಶಾಂತಿಗಿರಿ ಆಶ್ರಮ ಆರಂಭವಾಯಿತು.

ಈ ಆಶ್ರಮವು ಜಿಜ್ಞಾಸುಗಳಿಗೆ ಪವಿತ್ರ ಸ್ಥಳವಾಗಿದೆ, ಆಶ್ರಯ ಸ್ಥಾನವಾಗಿದೆ ಮತ್ತು ಅಸಂಖ್ಯಾತ ಜೀವಿಗಳಿಗೆ ಸ್ಫೂರ್ತಿಯ ಸೆಲೆಯಾಗಿದೆ. ಲೌಕಿಕ ಪ್ರಪಂಚದ ಗಡಿಬಿಡಿಯಲ್ಲಿ ಜೀವನ ಸಾಗಿಸುತ್ತಿರುವವರಿಗೆ ಶಾಂತಿಗಿರಿ ಆಶ್ರಮವು ಪ್ರಶಾಂತತೆಯ ನೆಲೆಯಾಗಿ ನಿಂತಿದೆ. ಜೀವನದಲ್ಲಿ ನೊಂದ ಅನೇಕರು ಇಲ್ಲಿ ಸಾಂತ್ವನವನ್ನು ಕಂಡುಕೊಂಡಿದ್ದಾರೆ. ಆತ್ಮೀಯರೊಂದಿಗೆ ಜೀವಮಾನದ ಬಂಧಗಳನ್ನು ಬೆಸೆಯುತ್ತಿದೆ.

ಇಲ್ಲಿಯ ಸಹಾನುಭೂತಿ, ತಿಳುವಳಿಕೆಯ ಮನೋಭಾವ ಮತ್ತು ನಿಸ್ವಾರ್ಥ ಸೇವಾ ಮನೋಭಾವಗಳು ಇಷ್ಟು ಸುದೀರ್ಘ ಪ್ರಯಾಣಕ್ಕೆ ಉತ್ತೇಜನ ನೀಡಿವೆ. ಸಂಸ್ಥಾಪಕರಾದ

ಶ್ರೀ ನವಜ್ಯೋತಿ ಕರುಣಾಕರ ಗುರುಗಳು ಹಾಗೂ ಸ್ವಯಂಸೇವಕರ ಅವಿರತ ಪ್ರಯತ್ನ ಫಲ ನೀಡಿದೆ. ಅವರ ಬೋಧನೆಯ ಆಳವಾದ ಪ್ರಭಾವವು ಸಾರ್ವಕಾಲಿಕವಾಗಿ ಪ್ರತಿಧ್ವನಿಸುತ್ತಿದೆ. ಆಶ್ರಮವು ಸದುದ್ದೇಶಗಳೊಂದಿಗೆ ಪ್ರೀತಿ, ಸಹಾನುಭೂತಿ ಮತ್ತು ಸಾವಧಾನತೆಯ ಸಂದೇಶವನ್ನು ಹರಡುತ್ತಿದೆ. ಏಕತೆ, ಅರಿವು ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಸಾಮರಸ್ಯದ ಅಸ್ತಿತ್ವವನ್ನು ನೆನಪಿಸುತ್ತದೆ. ಮೌಲ್ಯಗಳ ಪ್ರತಿಬಿಂಬವಾಗಿದೆ. ನೂತನವಾಗಿ ಸಮರ್ಪಣೆಯಾಗುತ್ತಿರುವ ಹೊಸ ಸಂಕೀರ್ಣವು ಆಶ್ರಮದ ವ್ಯಾಪ್ತಿಯನ್ನು ಗಮನಾರ್ಹ ರೀತಿಯಲ್ಲಿ ಹೆಚ್ಚಿಸಲಿದೆ. ಶಾಂತಿಗಿರಿ ಆಶ್ರಮದ ಆಧ್ಯಾತ್ಮಿಕ ಸೆಳೆತ ಶಾಶ್ವತವಾದ ಶಾಂತಿಯನ್ನು ಸ್ಥಾಪಿಸಲಿ ಎಂದು ಹೇಳಿದರು.

ಕಾರ್ಯದರ್ಶಿಗಳಾದ ಸ್ವಾಮಿ ಗುರುರತ್ನ ಜ್ಞಾನತಪಸ್ವಿ, ಪಾಲ್ಘಾಟ್ ಆಶ್ರಮದ ಸ್ವಾಮಿ ಸ್ನೇಹಾತ್ಮ, ಸಾಕೇತ್ ಆಶ್ರಮದ ಸ್ವಾಮಿ ಭಕ್ತರತ್ನ, ಜನನಿ ಜ್ಞಾನತಪಸ್ವಿನಿ ಹಾಗೂ ಆಶ್ರಮದ ಇತರ ಎಲ್ಲ ಸನ್ಯಾಸಿಗಳು ಉಪಸ್ಥಿತರಿದ್ದರು. ಡಾ. ಕಿರಣ್‌ರವರು ಸ್ವಾಗತಿಸಿ, ಪರಿಚಯಿಸಿದರು. ಶ್ರೀಮತಿ ಮೇಘಮಧು ವಂದನೆ ಸಲ್ಲಿಸಿದರು. ಶ್ರೀ ಪ್ರಶಾಂತ್‌ರವರು ಕಾರ್ಯಕ್ರಮ ನಿರೂಪಿಸಿದರು.

**ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು**

ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 19ರಂದು ಪಾಂಡವಪುರ ತಾಲ್ಲೂಕು ಕುಂತಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಶಂಕರಾನಂದ ಭಾರತಿ ವಿದ್ಯಾಪೀಠ ಹಾಗೂ ಕುವೆಂಪು ಪ್ರೌಢಶಾಲೆಯ ಸುವರ್ಣ ಮಹೋತ್ಸವ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಉತ್ತಮ ಸಂಸ್ಕಾರವನ್ನು ಬೆಳೆಸಿಕೊಂಡು ಪ್ರೀತಿ, ಗೌರವ ಮತ್ತು ನೈತಿಕತೆಯ ನೆಲೆಗಟ್ಟಿನಲ್ಲಿ ಸುಭದ್ರ ಸಂಸ್ಕೃತಿಯ ರಾಷ್ಟ್ರವನ್ನು ಕಟ್ಟಬೇಕು. ಹಣ, ಐಶ್ವರ್ಯ ಎಲ್ಲಕ್ಕಿಂತಲೂ ಜ್ಞಾನವೆಂಬುದು ದೊಡ್ಡ ಸಂಪತ್ತು. ಜ್ಞಾನ ಸಂಪಾದನೆಯಿಂದ ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಗೌರವಯುತವಾಗಿ ಬದುಕಬಹುದಾಗಿದೆ. ಜ್ಞಾನ ಶಾಶ್ವತವಾದದ್ದು ಎಂದು ಹೇಳಿದರು.

ಪ್ರೊ. ಎಂ. ಕೃಷ್ಣೇಗೌಡರವರು ಮಠ ಮಾನ್ಯಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಕ್ರಾಂತಿ ಮಾಡಿವೆ. ಈ ನಿಟ್ಟಿನಲ್ಲಿ ಸುತ್ತೂರು, ಸಿದ್ಧಗಂಗಾ ಮಠಗಳು ಮಹತ್ತರ ಜವಾಬ್ದಾರಿ ನಿರ್ವಹಿಸಿವೆ. ಇದೇ ದಾರಿಯಲ್ಲಿ ಸಾಗುತ್ತಿರುವ ಶ್ರೀ ಶಂಕರಾನಂದ ವಿದ್ಯಾಪೀಠವು ಮತ್ತಷ್ಟು ಬೆಳವಣಿಗೆ ಕಾಣಲಿ ಎಂದು ಹೇಳಿದರು.

ಶಾಸಕರಾದ ಶ್ರೀ ದರ್ಶನ್ ಪುಟ್ಟಣ್ಣಯ್ಯ, ಶ್ರೀ ಮಧು ಜಿ. ಮಾದೇಗೌಡ, ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಎಚ್.ಎಲ್. ನಂಜೇಗೌಡ, ಶ್ರೀ ವಿ.ಎನ್. ಗೌಡ, ಲಯನ್ ಕೆ. ದೇವೇಗೌಡ, ಶ್ರೀ ವಿ. ಬಸವರಾಜು, ಶ್ರೀ ಎಸ್.ಎ. ಮಲ್ಲೇಶ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಸಿ.ಎಂ. ಚನ್ನೇಗೌಡ ಸ್ವಾಗತಿಸಿದರು. ಶ್ರೀ ಡಿ.ಕೆ. ದೇವೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು.

### ದೇಶದ ಅಭಿವೃದ್ಧಿಗೆ ಪೂರಕವಾದ ಅಧ್ಯಯನ ಬೇಕು

ದೇಶದ ಅಭಿವೃದ್ಧಿಗೆ ಪೂರಕವಾದ ವಿಷಯಗಳ ಅಧ್ಯಯನ ಮಾಡಬೇಕು ಎಂದು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಅಧ್ಯಕ್ಷರಾದ ಪ್ರೊ. ಎಂ. ಜಗದೀಶ್ ಕುಮಾರ್‌ರವರು ನವೆಂಬರ್ 20ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 14ನೇ ಘಟಿಕೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು. ವಿದ್ಯಾರ್ಥಿಗಳನ್ನು ಜ್ಞಾನದಾಹಿಗಳನ್ನಾಗಿ ಮಾಡುವುದೇ ಆಧ್ಯಾಪಕರ ನಿಜವಾದ ಕೆಲಸ. ಇಂದಿನ ಸ್ಪರ್ಧಾತ್ಮಕಯುಗದಲ್ಲಿ ಆಧ್ಯಾಪಕರ ಹೊಣೆಗಾರಿಕೆ ಹೆಚ್ಚಿದೆ. ಕೇವಲ ಪಾಠ ಪ್ರವಚನ ಮಾಡುವುದು ಶಿಕ್ಷಕರ ಕಾಯಕವಲ್ಲ. ಅವರು ತಮ್ಮ ವಿಷಯದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿರಬೇಕು. ಸಾಕಷ್ಟು ಅನುಭವವು ಇರಬೇಕು. 2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿದೆ. ಅದನ್ನು ನನಸಾಗಿಸುವ ಸವಾಲು ವಿದ್ಯಾರ್ಥಿ ಯುವ ಸಮೂಹದ ಮುಂದಿದೆ. ದೇಶದ ಬೆಳವಣಿಗೆಗೆ ಇರುವ ಅವಕಾಶವನ್ನು ಬಳಸಿಕೊಳ್ಳಬೇಕು. ಅದರ ಸದುಪಯೋಗದಿಂದ ಯಶಸ್ಸು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 2546 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ. ಸುರೀಂದರ್ ಸಿಂಗ್ ಸ್ವಾಗತಿಸಿದರು. ಡಾ. ಬಿ. ಮಂಜುನಾಥ್ ವಂದಿಸಿದರು. ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಆರ್. ಸುಧೀಂದ್ರ ಭಟ್, ವಿವಿಧ ನಿಕಾಯಗಳ ಡೀನ್‌ರವರು ಉಪಸ್ಥಿತರಿದ್ದರು.

### ದೇವರು ಒಬ್ಬನೇ

ದೇವರು ಒಬ್ಬನೇ ಎಂದು ಭಾವಿಸಿದರೆ ಯಾವುದೇ ಸಂಘರ್ಷಗಳೇ ಇರುವುದಿಲ್ಲ ಎಂದು ಪರಮಪೂಜ್ಯ ಜಗದ್ಗುರುಗಳವರು ನವೆಂಬರ್ 22ರಂದು ಜಗಳೂರು ತಾಲ್ಲೂಕು ಸೊಕ್ಕೆ ಗ್ರಾಮದಲ್ಲಿ ಶ್ರೀ ಶಿರಡಿ ಸಾಯಿಬಾಬಾ ನೂತನ ಮಂದಿರ ಪ್ರಾರಂಭೋತ್ಸವ, ವಿಮಾನ ಗೋಪುರ ಕಳಸಾರೋಹಣ ಹಾಗೂ ನೂತನ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಸಬ್ ಕಾ ಮಾಲೀಕ್ ಏಕ್ ಎನ್ನುವ ಮೂಲಕ ಭಗವಂತ ಎಲ್ಲರಿಗೂ ಒಬ್ಬನೇ ಎಂದು ಸಾರಿದವರು ಸಂತ ಸಾಯಿಬಾಬಾ. ಅಂಥವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಸಮಾಜದಲ್ಲಿ ಸಂಘರ್ಷಗಳು ಕ್ಷೀಣವಾಗುತ್ತವೆ. ಬಸವಣ್ಣನವರು ದೇವನೊಬ್ಬ ನಾಮ ಹಲವು ಎಂದು ಹೇಳಿದ್ದಾರೆ. ಸಾಯಿ ಎಂದರೇ ಒಳ್ಳೆಯವರು, ಜಗತ್ತಿಗೆ ಒಳ್ಳೆಯದನ್ನು ಬಯಸುವವರು ಎಂದು ಹೇಳಿದರು.

ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿ ಭಾರತವು ಸಾಧು ಸಂತರು ತಪಗೈದ ಪುಣ್ಯಭೂಮಿಯಾಗಿದೆ. ಧಾರ್ಮಿಕ ಸೇವೆಯಲ್ಲಿ ತೊಡಗುವುದರಿಂದ ಪುಣ್ಯ

ಪ್ರಾಪ್ತಿಯಾಗುತ್ತದೆ. ಶ್ರೀ ತಿಪ್ಪೇಸ್ವಾಮಿಯವರು ಜನಕಲ್ಯಾಣಕ್ಕಾಗಿ ದೇವಸ್ಥಾನ ನಿರ್ಮಿಸಿದ್ದಾರೆ. ಹಲವು ಜನಪರ ಕಾರ್ಯಗಳನ್ನು ಕೈಗೊಂಡಿದ್ದಾರೆ ಎಂದು ಶ್ಲಾಘಿಸಿದರು.

ನೊಣವಿನಕೆರೆ, ಕಣ್ವಕುಪ್ಪೆ ಮಠಗಳ ಶ್ರೀಗಳು, ಶಾಸಕರುಗಳಾದ ಶ್ರೀ ಬಿ. ದೇವೇಂದ್ರಪ್ಪ, ಶ್ರೀ ಪಿ. ರವಿಕುಮಾರ್, ಶ್ರೀ ಬಸವರಾಜು ಶಿವಗಂಗಾ, ಮಾಜಿ ಶಾಸಕರುಗಳಾದ ಶ್ರೀ ಎಸ್.ವಿ. ರಾಮಚಂದ್ರ, ಶ್ರೀ ಹೆಚ್.ಪಿ. ರಾಜೇಶ್, ಕಲಾವಿದರಾದ ಶ್ರೀ ಧನಂಜಯ, ಶ್ರೀ ಎನ್. ತಿಪ್ಪೇಸ್ವಾಮಿ, ಡಾ. ಸತೀಶ್ ಕುಮಾರ್ ಹೊಸಮನಿ, ಶ್ರೀ ಆಸಗೋಡು ಜಯಸಿಂಹ, ಶ್ರೀ ಮಿಮಿಕ್ರಿ ಗೋಪಿ, ಶ್ರೀಮತಿ ಸ್ವಾತಿ ತಿಪ್ಪೇಸ್ವಾಮಿ ಮೊದಲಾದವರುಗಳು ಉಪಸ್ಥಿತರಿದ್ದರು.

**ಸರ್ಕಾರದಿಂದ ಕ್ಷಯರೋಗಿಗಳ ದತ್ತು**

ಸರ್ಕಾರದಿಂದ ಕ್ಷಯ ರೋಗಿಗಳನ್ನು ದತ್ತು ಪಡೆದು ಪೋಷಿಸುವ ಯೋಜನೆಯನ್ನು ಜಾರಿಗೊಳಿಸಲಾಗಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯ ಖಾತೆ ಸಚಿವರಾದ ಶ್ರೀ ಭಗವಂತ ಖೂಬಾರವರು ನವೆಂಬರ್ 22ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಮೂರು ದಿನಗಳ ಅಂತಾರಾಷ್ಟ್ರೀಯ ಕ್ಷಯರೋಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಕ್ಷಯವು ಬಡವರನ್ನು ಕಾಡುವ ಕಾಯಿಲೆ. ಅಪೌಷ್ಟಿಕತೆ ಇದಕ್ಕೆ ಪ್ರಮುಖ ಕಾರಣ. ಇತ್ತೀಚಿನ ದಿನಗಳಲ್ಲಿ ಸರ್ಕಾರ ಇದಕ್ಕೆ ಉಚಿತವಾಗಿ ಚಿಕಿತ್ಸೆ ನೀಡುತ್ತಿದೆ. ಪ್ರತಿ ರೋಗಿಯನ್ನು ಆರು ತಿಂಗಳ ಕಾಲ ದತ್ತು ಪಡೆದು ಪೋಷಿಸುವ ಯೋಜನೆಗೆ ಸರ್ಕಾರ ಚಾಲನೆ ನೀಡಿದೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಕ್ಷಯರೋಗವು ಜಾಗತಿಕವಾಗಿ ಎದುರಿಸುತ್ತಿರುವ ಆರೋಗ್ಯ ಸವಾಲುಗಳಲ್ಲಿ ಒಂದು. ಕಾಯಿಲೆ. ವೈದ್ಯಕೀಯ ವಿಜ್ಞಾನದ ಪ್ರಗತಿಯ ಹೊರತಾಗಿಯೂ ವಿಶ್ವದಾದ್ಯಂತ ಲಕ್ಷಾಂತರ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುವ ಪ್ರಮುಖ ಕಾಯಿಲೆಯಾಗಿದೆ. ಆರಂಭಿಕ ಪತ್ತೆ ಮತ್ತು ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡುವುದರೊಂದಿಗೆ ಇದನ್ನು ಪರಿಣಾಮಕಾರಿಯಾಗಿ ಎದುರಿಸುವುದು ಅತ್ಯಗತ್ಯ. ಸಾರ್ವಜನಿಕ ಜಾಗೃತಿಯು ಇದನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನೈರ್ಮಲ್ಯ, ಶುದ್ಧವಾದ ಗಾಳಿ ಸೇವನೆ, ಸೋಂಕಿತ ವ್ಯಕ್ತಿಗಳೊಂದಿಗಿನ ನಿಕಟ ಸಂಪರ್ಕದಿಂದ ದೂರವಿರುವುದು, ನಿಯಮಿತ ಆರೋಗ್ಯ ತಪಾಸಣೆಗಳಿಂದ ಇದನ್ನು ಹರಡದಂತೆ ತಡೆಯಬಹುದು ಎಂದು ತಿಳಿಸಿದರು.

ಪಾಂಡಿಚೇರಿ ಗೃಹ ಸಚಿವರಾದ ಶ್ರೀ ಎ. ನಮಃಶಿವಾಯಂರವರು ಕೋವಿಡ್ ಕಾರಣದಿಂದ ಇಡೀ ಮನುಕುಲ ತತ್ತರಿಸಿದೆ. ಆನಂತರದಲ್ಲಿ ವೈದ್ಯಕೀಯ ಸಂಶೋಧನೆಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಅಪೌಷ್ಟಿಕತೆಯಂತಹ ಕಾರಣಗಳಿಂದಾಗಿ ಕೆಳವರ್ಗದ

ಸಮುದಾಯಗಳಲ್ಲಿ ಈ ಸಮಸ್ಯೆಗಳು ಹೆಚ್ಚಾಗಿವೆ. ಜನರಲ್ಲಿ ಆರೋಗ್ಯ ಕಾಳಜಿ ಕಡಿಮೆಯಾಗುತ್ತಿದೆ ಎಂದು ಹೇಳಿದರು.

ಭೋಪಾಲ್‌ನ ಗಾಂಧಿ ವೈದ್ಯಕೀಯ ಕಾಲೇಜಿನ ಡೀನ್‌ರಾದ ಡಾ. ಸಲೀಲ್ ಭಾರ್ಗವ ಮಾತನಾಡಿದರು. ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಸುರೀಂದರ್ ಸಿಂಗ್, ಡಾ. ಬಿ. ಮಂಜುನಾಥ್ ಉಪಸ್ಥಿತರಿದ್ದರು. ಡಾ. ಡಿ. ಸುನೀಲ್‌ಕುಮಾರ್ ಸ್ವಾಗತಿಸಿದರು. ಡಾ. ಬಿ.ಎಸ್. ಜಯರಾಜ್, ಡಾ. ಎಂ.ಎನ್. ಸುಮಾ, ಡಾ. ಪ್ರವೀಣ್ ಕುಲಕರ್ಣಿ ಅತಿಥಿಗಳನ್ನು ಪರಿಚಯಿಸಿದರು. ಡಾ. ಸೌಪಾಕೀಯಾ ಮನಿಮೋಝಿ ಪ್ರಾರ್ಥಿಸಿದರು. ಡಾ. ನಯನಾ ಶಾಬಾದಿ ವಂದಿಸಿದರು.

**ಬಸವಕಲ್ಯಾಣ ಸಮಾನತೆಯ ಕೇಂದ್ರ ಸ್ಥಾನ**


ಬಸವಕಲ್ಯಾಣ ಸಮಾನತೆಯ ಕೇಂದ್ರ ಸ್ಥಾನವಾಗಿ ಬೆಳೆಯಲಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ದಿನಾಂಕ 25ರಂದು ಬಸವಕಲ್ಯಾಣದ ವಿಶ್ವ ಬಸವಧರ್ಮ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 44ನೆಯ ಶರಣ ಕಮ್ಮಟ ಮತ್ತು ಅನುಭವ ಮಂಟಪ ಉತ್ಸವ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣನವರು ಸಮಾಜ ಸುಧಾರಣೆ, ಧರ್ಮ ಚಿಂತನೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳ ಬೀಜ ಬಿತ್ತಿದ್ದು ಬಸವಕಲ್ಯಾಣದಿಂದ. ಹೀಗಾಗಿ ಇದು ವಿಶ್ವದ ಜನರ ಸಮಾನತೆಯ ಕೇಂದ್ರವಾಗಲಿದೆ. ಶರಣರ ವಚನಗಳು ನುಡಿಯುವುದಕ್ಕಿಂತಲೂ ನಡೆಯುವುದಕ್ಕೆ ಪ್ರೇರಣೆಯಾಗುತ್ತವೆ. ಇಂದು ವಿಶ್ವದಲ್ಲಿ ಎದುರಾಗಿರುವ ಅನೇಕ ಸಮಸ್ಯೆಗಳಿಗೆ ವಚನಗಳಲ್ಲಿ ಪರಿಹಾರವಿದೆ. ವಿಶ್ವದ ಇತರ ಭಾಷೆಗಳಿಗೂ ವಚನಗಳನ್ನು ಭಾಷಾಂತರಿಸುವ ಕಾರ್ಯವಾಗಬೇಕಿದೆ ಎಂದು ಹೇಳಿದರು.

ಭಾಲ್ಕಿಯ ಡಾ. ಶ್ರೀ ಬಸವಲಿಂಗ ಪಟ್ಟದ್ದೇವರು ಬಸವಣ್ಣನವರು ಕರ್ನಾಟಕದ ಸಾಂಸ್ಕೃತಿಕ ನಾಯಕ. ಸರ್ಕಾರ ವಚನ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕಿದೆ. ಅನೇಕ ಮೌಲಿಕ ತತ್ತ್ವಗಳು ವಚನ ಸಾಹಿತ್ಯದಲ್ಲಿವೆ. ಶರಣ ಸ್ಮಾರಕಗಳಿಗೆ ರಕ್ಷಣೆ ನೀಡಬೇಕು. ಇಲ್ಲದಿದ್ದರೆ ಅವು ಮುಂದಿನ ದಿನಗಳಲ್ಲಿ ಕಣ್ಮರೆಯಾಗಲಿವೆ ಎಂದರು.

ನ್ಯಾ. ಶಿವರಾಜ್ ಪಾಟೀಲ್‌ರವರಿಗೆ ಡಾ. ಶ್ರೀ ಚನ್ನಬಸವ ಪಟ್ಟದ್ದೇವರ ಅನುಭವ ಮಂಟಪ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ ಪುರಸ್ಕೃತರಾದ ಶ್ರೀ ಸಂದೀಪ್ ಪಾಟೀಲ್‌ರವರನ್ನು ಸನ್ಮಾನಿಸಲಾಯಿತು. ಹಾರಕೂಡ, ಹುಲಸೂರು ಮಠಗಳ ಶ್ರೀಗಳು, ವಿಧಾನಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ, ಸಚಿವರಾದ ಶ್ರೀ ಈಶ್ವರ ಖಂಡ್ರೆ, ಶ್ರೀ ರಹೀಂ ಖಾನ್, ಶಾಸಕರುಗಳಾದ ಶ್ರೀ ಶರಣು ಸಲಗರ, ಶ್ರೀ ಚಂದ್ರಶೇಖರ ಪಾಟೀಲ, ಶ್ರೀ ಭೀಮರಾವ ಪಾಟೀಲ, ಮಾಜಿ ಶಾಸಕರಾದ ಶ್ರೀ ಬಸವರಾಜ ಪಾಟೀಲ ಸೇಡಂ ಮೊದಲಾದವರು ಉಪಸ್ಥಿತರಿದ್ದರು.

□

# ಪ್ರಸಾದ



**ಕೃತಿ-ಸ್ವೀಕೃತಿ**

---

**ಅನುಭವ ಮಂಟಪ ಸಂಸ್ಕೃತಿ**
ಡಾ. ವೀರಣ್ಣ ದಂಡೆ
ಡಾ. ಜಯಶ್ರೀ ದಂಡೆ
ಪ್ರ.: ವಿಶ್ವ ಬಸವಧರ್ಮ ಟ್ರಸ್ಟ್
ಅನುಭವ ಮಂಟಪ
ಬಸವಕಲ್ಯಾಣ, ಬೀದರ್ ಜಿಲ್ಲೆ
ಪು: 112, ಬೆಲೆ: 100/–

**ಶ್ರೀಕೃಷ್ಣ ಪಾರಿಜಾತ ಪ್ರಯೊಗ**
**(ಉತ್ತರ ಕರ್ನಾಟಕದ ಹೆಮ್ಮೆಯ ಬೈಲಾಟ)**
ಶ್ರೀ ಈಶ್ವರಚಂದ್ರ ಎಸ್. ಬೆಟಗೇರಿ
ಪ್ರ.: ಪುಷ್ಪಾ ಎಂಟರ್‌ಪ್ರೈಸಸ್
ಶ್ರೀನಿವಾಸ ನಗರ, ಬೆಂಗಳೂರು
ಪು: 556, ಬೆಲೆ: 575/–

**ಡಾ. ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ)**
**ಸಮಗ್ರ ಗದ್ಯ – ಭಾಗ 1, ಶರಣ ಚರಿತಾಮೃತ**
ಡಾ. ಸಿದ್ಧಯ್ಯ ಪುರಾಣಿಕ
ಪ್ರ.: ನಿರ್ದೇಶಕರು, ಕನ್ನಡ ಮತ್ತು
ಸಂಸ್ಕೃತಿ ಇಲಾಖೆ, ಕನ್ನಡ ಭವನ
ಜೆ.ಸಿ.ರಸ್ತೆ, ಬೆಂಗಳೂರು
ಪು: 918, ಬೆಲೆ: 255/–

**ಎಲ್ಲಿದ್ದಾರೆ ಸಿದ್ಧೇಶ್ವರ ಶ್ರೀಗಳು**
ಶ್ರೀ ಎಸ್.ಎನ್. ಸಿಂಪಿಗೇರ
ಪ್ರ.: ಶ್ರೀರಾಮ ಪ್ರಕಾಶನ
ವಿಜಯಪುರ
ಪು: 96, ಬೆಲೆ: 100/–

**ನಾರಾಯಣ ನಮನ**
**(ಡಾ. ವಿ. ಲಕ್ಷ್ಮೀನಾರಾಯಣ ಅವರ ಅಭಿನಂದನ ಗ್ರಂಥ)**
ಸಂ.: ಡಾ. ಎಂ.ಜಿ.ಆರ್. ಅರಸ್
ಡಾ. ನೀಲಗಿರಿ ತಳವಾರ್
ಪ್ರ.: ಸಂಸ್ಕೃತಿ ಏಜೆನ್ಸೀಸ್
ಪು: 412, ಬೆಲೆ: 425/–

**ನಾದಬ್ರಹ್ಮರಚನಾಮೃತ (ಭಾಗ–3)**
ಡಾ. ಗೀತಾ ಸೀತಾರಾಮ್
ಪ್ರ.: ಸ್ವಾತಿ ಪ್ರಕಾಶನ
ಸಿಎಫ್‌ಟಿಆರ್‌ಐ ಲೇಔಟ್
ಮೈಸೂರು
ಪು: 79, ಬೆಲೆ: 100/–

**ನೆನಪಿನ ಭಂಡಾರ**
**(ಡಾ. ಎಸ್.ಆರ್. ಗುಂಜಾಳರ ಗೌರವ ಗ್ರಂಥ)**
ಸಂ.: ಶ್ರೀ ಈರಪ್ಪ ಜಾಲಿಕಟ್ಟಿ
ಬೈಲಹೊಂಗಲ
ಪು: 332, ಬೆಲೆ: 500/–

**ನಿಮ್ಮ ಬುತ್ತಿ**
ಪ್ರೊ. ಶಂಕರಗೌಡ ಮ. ಬಿರಾದಾರ
ಪ್ರ.: ಅನಿರುದ್ಧ ಪ್ರಕಾಶನ
ಖಿಲ್ಲೆ ಮೊಹಲ್ಲಾ, ಮೈಸೂರು 570004
ಪು: 260, ಬೆಲೆ: 280/–

**ಅಂಕನಾಥನ ಸಂತೆ (ಮುಕ್ತಕ ಮಾಣಿಕ್ಯ)**
ಡಾ. ಎಸ್. ಪುಟ್ಟಪ್ಪ ಮುಡಿಗುಂಡ
ಪ್ರ.: ಶ್ರೀ ರಾಜೇಂದ್ರ ಪ್ರಿಂಟರ್ಸ್
ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ
ಮೈಸೂರು
ಪು: 104, ಬೆಲೆ: 90/–

**ಭಕ್ತಿಸುಧಾ (ಶ್ರೀ ಶಿವಕುಮಾರ ಗೀತಾಮೃತ)**
ಡಾ. ಎಸ್. ಪುಟ್ಟಪ್ಪ ಮುಡಿಗುಂಡ
ಪ್ರ.: ಕಾಯಕ ಪ್ರಕಾಶನ
ರಾಮಾನುಜ ರಸ್ತೆ, ಮೈಸೂರು
ಪು: 64, ಬೆಲೆ: 50/–

# ಲೇಖಕರ ವಿಳಾಸ

**ಡಾ. ಎಂ.ಎನ್. ನಂದೀಶ್ ಹಂಚೆ**
# 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಪ್ರಾಧ್ಯಾಪಕರು, ಮುಖ್ಯಸ್ಥರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ
ಮೈಸೂರು 570023
ಮೊ: 9845309081

**ಪ್ರೊ. ಮೊರಬದ ಮಲ್ಲಿಕಾರ್ಜುನ**
#3/1288, 12ನೇ ಮೇನ್
ವಿಜಯನಗರ 4ನೇ ಹಂತ
ಮೈಸೂರು 570017
ಮೊ: 9986137389

**ಶ್ರೀ ಪ್ರಕಾಶ ಗಿರಿಮಲ್ಲನವರ**
ಐ.ಟಿ.ಐ. ಕಾಲೇಜು, ಶಿವಬಸವನಗರ
ಬೆಳಗಾವಿ 590010
ಮೊ: 9902130041

**ಶ್ರೀ ನಗರ್ಲೆ ಶಿವಕುಮಾರ**
ಬಿನ್ ಲೇಟ್ ಪಟೇಲ್ ರಾಜಶೇಖರ
ನಗರ್ಲೆ ಗ್ರಾಮ
ನಂಜನಗೂಡು ತಾ.
ಮೈಸೂರು ಜಿಲ್ಲೆ
ಮೊ: 9845609652

**ಶ್ರೀ ಎಂ.ಎಸ್. ಚಂದ್ರಶೇಖರ ಅಯ್ಯರ್**
#302, 3ನೇ ಮಹಡಿ
ನವರತ್ನ ಎನ್‌ಕ್ಲೇವ್
ಕೃಷ್ಣರಾಜ ಬೂಲ್ ವಾರ್ಡ್ ರಸ್ತೆ
ಚಾಮರಾಜಪುರಂ
ಮೈಸೂರು 570005
ಮೊ: 9845232094

**ಹಿಂಬದಿ ಪುಟದ ಚಿತ್ರ**

ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಮೂರು ದಿನಗಳ ಅಂತಾರಾಷ್ಟ್ರೀಯ ಕ್ಷಯರೋಗ ಸಮಾವೇಶವನ್ನು ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾರವರು ಉದ್ಘಾಟಿಸಿದರು. ಡಾ. ಬಿ. ಸುರೇಶ್, ಡಾ. ಬಿ.ಎಸ್. ಜಯರಾಜ್, ಡಾ. ಸಲೀಲ್ ಭಾರ್ಗವ್, ಶ್ರೀ ಎ. ನಮಃಶಿವಾಯಂ, ಶ್ರೀಮತಿ ವಾಸಂತಿ ನಮಃಶಿವಾಯಂ, ಡಾ. ಸಿ.ಜಿ. ಬೆಟಸೂರಮಠ, ಡಾ. ರಾಜೇಂದ್ರ ಪಾಂಡುರಂಗ ಜೋಶಿ, ಡಾ. ಸುರೀಂದರ್ ಸಿಂಗ್, ಡಾ. ಬಿ. ಮಂಜುನಾಥ್‌ರವರುಗಳಿದ್ದಾರೆ (22 ನವೆಂಬರ್ 2023)



ಹೈದರಾಬಾದ್‌ನಲ್ಲಿ ಭಕ್ತಿ ಟಿವಿ ವತಿಯಿಂದ ಏರ್ಪಡಿಸಿದ್ದ ಕೋಟಿ ದೀಪೋತ್ಸವಂ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಗೌ.ನ್ಯಾ. ಶ್ರೀಮತಿ ಪಿ. ಶ್ರೀಸುಧಾ, ವಾಹಿನಿ ಮುಖ್ಯಸ್ಥರಾದ ಶ್ರೀ ನರೇಂದ್ರ ಚೌದರಿ ಮೊದಲಾದವರುಗಳಿದ್ದಾರೆ (14 ನವೆಂಬರ್ 2023)



ಮೈಸೂರು ಎಸ್‌ವಿಇಐ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವ ಹಾಗೂ ನೂತನ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಎಂ.ಕೆ. ಪೋತರಾಜ್, ಶ್ರೀ ಬಿ. ಶಿವಲಿಂಗಪ್ಪ, ಶ್ರೀ ಬಾಲಾಜಿ ಪೋತರಾಜ್, ಶ್ರೀ ಟಿ. ಪ್ರಭಾಕರ್ ಶೆಟ್ಟಿಯವರುಗಳಿದ್ದಾರೆ (18 ನವೆಂಬರ್ 2023)




ಬಸವಕಲ್ಯಾಣದ ವಿಶ್ವ ಬಸವಧರ್ಮ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 44ನೆಯ ಶರಣ ಕಮ್ಮಟ ಮತ್ತು ಅನುಭವ ಮಂಟಪ ಉತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿಯವರು ಉದ್ಘಾಟಿಸಿದರು. ಹುಲಸೂರು, ಹಾರಕೂಡ, ಭಾಲ್ಕಿಯ ಮಠಗಳ ಶ್ರೀಗಳು, ನ್ಯಾ. ಶ್ರೀ ಶಿವರಾಜ್ ಪಾಟೀಲ್, ಶ್ರೀ ಈಶ್ವರ ಖಂಡ್ರೆ, ಶ್ರೀ ರಹೀಂ ಖಾನ್, ಶ್ರೀ ಚಂದ್ರಶೇಖರ್ ಪಾಟೀಲ್ ಹಾಗೂ ಶ್ರೀ ಶರಣು ಸಲಗರ ಮೊದಲಾದವರುಗಳಿದ್ದಾರೆ (25 ನವೆಂಬರ್ 2023)



ನವದೆಹಲಿಯ ಸಾಕೇತ್‌ನಲ್ಲಿ ಶಾಂತಿಗಿರಿ ಆಶ್ರಮದ ರಜತ ಮಹೋತ್ಸವ ಹಾಗೂ ನೂತನ ಸಂಕೀರ್ಣದ ಉದ್ಘಾಟನೆಯ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಜನನಿ ಜ್ಞಾನ ತಪಸ್ವಿನಿ, ಸ್ವಾಮಿ ಸ್ನೇಹಾತ್ಮ, ಸ್ವಾಮಿ ಗುರುರತ್ನ ಜ್ಞಾನ ತಪಸ್ವಿ, ಸ್ವಾಮಿ ಭಕ್ತರತ್ನ, ಆಶ್ರಮದ ಇತರ ಸನ್ಯಾಸಿಗಳು ಹಾಗೂ ಸನ್ಯಾಸಿನಿಯರುಗಳು ಇದ್ದಾರೆ (20 ನವೆಂಬರ್ 2023)




ಸಾಣೆಹಳ್ಳಿಯಲ್ಲಿ ಶ್ರೀ ಶಿವಕುಮಾರ ಕಲಾಸಂಘದಿಂದ ಆಯೋಜಿಸಿದ್ದ ರಾಷ್ಟ್ರೀಯ ನಾಟಕೋತ್ಸವದಲ್ಲಿ ಶ್ರೀ ತಿಪ್ಪೇಸ್ವಾಮಿ, ಶ್ರೀ ಎನ್.ಎಂ. ಬಸವರಾಜಪ್ಪ ಮತ್ತು ಶ್ರೀ ಶಿವಕುಮಾರ್‌ರವರುಗಳನ್ನು ಸನ್ಮಾನಿಸಲಾಯಿತು. ಶ್ರೀ ಡಿ.ಎಸ್. ಸುರೇಶ್, ಶ್ರೀ ಹೆಚ್.ಡಿ. ತಮ್ಮಯ್ಯ, ಶ್ರೀ ಮಾಡಾಳ್ ವಿರೂಪಾಕ್ಷಪ್ಪ, ಶ್ರೀ ಎ. ನಾರಾಯಣಸ್ವಾಮಿ, ಪರಮಪೂಜ್ಯ ಜಗದ್ಗುರುಗಳು, ಸಾಣೆಹಳ್ಳಿ ಶ್ರೀಗಳು, ಪ್ರೊ. ಕೆ.ಬಿ. ಗುಡಸಿ, ಶ್ರೀ ವಿ. ಮನೋಹರ್, ಶ್ರೀ ಉಮೇಶ್ ಸಾಲಿಯಾನ ಮತ್ತು ಶ್ರೀಮತಿ ಕೆ.ಎಸ್. ವಿಮಲರವರುಗಳಿದ್ದಾರೆ (3 ನವೆಂಬರ್ 2023)



ಮೈಸೂರು ಸಂವಹನ ಪ್ರಕಾಶನ ಮತ್ತು ಜಿಲ್ಲಾ ವೀರಶೈವ–ಲಿಂಗಾಯತ ಮಹಾಸಭಾ ವತಿಯಿಂದ ಏರ್ಪಡಿಸಿದ್ದ ಪ್ರೊ. ಚಂದ್ರಶೇಖರಯ್ಯನವರ ವ್ಯೋಮ ಮೂರುತಿ ಅಲ್ಲಮ ಮತ್ತು ಜಗದ ನಂಟ ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ಎಂ. ಚಂದ್ರಶೇಖರ್, ಡಾ. ನಂದೀಶ್ ಹಂಚೆ, ಪ್ರೊ. ಚಂದ್ರಶೇಖರಯ್ಯ, ಡಾ. ಸಿ.ಪಿ. ಕೃಷ್ಣಕುಮಾರ್, ಡಾ. ಶರತ್‌ಚಂದ್ರ ಸ್ವಾಮಿಗಳು, ಡಾ. ಡಿ. ತಿಮ್ಮಯ್ಯ, ಡಾ. ಬಿ.ವಿ. ವಸಂತಕುಮಾರ್, ಶ್ರೀ ಡಿ.ಎನ್. ಲೋಕಪ್ಪ ಹಾಗೂ ಶ್ರೀ ಎಸ್. ಶಿವಮೂರ್ತಿ ಕಾನ್ಯರವರುಗಳಿದ್ದಾರೆ (12 ನವೆಂಬರ್ 2023)



ಹುಬ್ಬಳ್ಳಿ ಶ್ರೀ ಶಾಂತಾಶ್ರಮದಲ್ಲಿ ಸಮಾಧಿ ಮಂದಿರ, ಮಹಾದ್ವಾರ, ಶ್ರೀ ಶಿವಪುತ್ರ ಸ್ವಾಮಿಗಳ ಹಾಗೂ ಶ್ರೀ ಅಭಿನವ ಶಿವಪುತ್ರ ಸ್ವಾಮಿಗಳ ಅಮೃತಶಿಲಾ ಮೂರ್ತಿ ಸ್ಥಾಪನೆ, ಆರೂಢಜ್ಯೋತಿ ಶ್ರೀ ಶಿವಪುತ್ರ ಸ್ವಾಮಿಗಳ ಸಮಗ್ರ ಟೀಕಾ ಸಾಹಿತ್ಯ ಲೋಕಾರ್ಪಣೆ, ಶ್ರೀ ಸಿದ್ಧಾರೂಢ ಸ್ವಾಮಿ ಹಾಗೂ ಶ್ರೀ ಶಿವಪುತ್ರ ಸ್ವಾಮಿ ಕಲಾನಿಕೇತನವನ್ನು ಸುತ್ತೂರು, ಆದಿಚುಂಚನಗಿರಿ, ಗದಗ, ಬೀದರ ಹಾಗೂ ಇತರ ಪೂಜ್ಯರುಗಳ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ವಿವಿಧ ಮಠಾಧೀಶರುಗಳು ಹಾಗೂ ಭಕ್ತರುಗಳಿದ್ದಾರೆ (7 ನವೆಂಬರ್ 2023)



ಬೈಲಹೊಂಗಲದಲ್ಲಿ ಏರ್ಪಡಿಸಿದ್ದ ಜಿಲ್ಲಾಮಟ್ಟದ ದ್ವಿತೀಯ ಕದಳಿ ಮಹಿಳಾ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಅಶೋಕ ಮಳಗಲಿ, ಶ್ರೀ ಮಹಾಂತೇಶ್ ಕೌಜಲಗಿ, ಡಾ. ಗುರುದೇವಿ ಹುಲ್ಲೆಪ್ಪನವರಮಠ, ಶ್ರೀಮತಿ ಮೀನಾಕ್ಷಿ ಕಡುಸೋಮನ್ನವರ, ಶ್ರೀ ಅಪ್ಪಾರಾವ್ ಅಕ್ಕೋಣಿ, ಶ್ರೀ ವಿಜಯಲಕ್ಷ್ಮೀ ತೋಟಗಿ, ಶ್ರೀಮತಿ ಶಶಿಕಲಾ ಜೊಲ್ಲೆಯವರು, , ಶ್ರೀಮತಿ ಸುಶೀಲ ಸೋಮಶೇಖರ್, ಶ್ರೀಮತಿ ಪ್ರೇಮಕ್ಕ ಅಂಗಡಿ ಮತ್ತು ಮುರಗೋಡ ಶ್ರೀಗಳಿದ್ದಾರೆ (2 ನವೆಂಬರ್ 2023)



ಮೈಸೂರು ವಿಶ್ವವಿದ್ಯಾಲಯನಿಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ 'ವಚನಬೋಧಿ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಪ್ರೊ. ನೀಲಗಿರಿ ತಳವಾರ, ಲೇಖಕರಾದ ಡಾ. ಶಿವಕುಮಾರ್, ಶ್ರೀ ಶಂಕರ ದೇವನೂರು, ಪ್ರೊ. ಅರವಿಂದ ಮಾಲಗತ್ತಿ ಹಾಗೂ ಪ್ರೊ. ವಿಜಯಕುಮಾರಿ ಕರಿಕಲ್‌ರವರುಗಳಿದ್ದಾರೆ (8 ನವೆಂಬರ್ 2023)




ಸ್ಕೋಪ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಮೈಸೂರು ನಾಗರಿಕರ ನಡಿಗೆ ಮುಖಾಂತರ ಭೂದೇವಿಗೆ ನಮನ ಕಾರ್ಯಕ್ರಮಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ರಾಜವಂಶಸ್ಥರಾದ ಶ್ರೀಮತಿ ತ್ರಿಷಿಕಾಕುಮಾರಿ ದೇವಿಯವರು ಹಾಗೂ ಶ್ರೀ ಶಿವಮೂರ್ತಿ ಕಿಲಾರರವರುಗಳಿದ್ದಾರೆ (29 ಅಕ್ಟೋಬರ್ 2023)




ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಅಲೈಡ್ ಹೆಲ್ತ್ ಸೈನ್ಸ್‌ಸ್‌ನ ಪದವೀಧರರ ದಿನಾಚರಣೆಯಲ್ಲಿ ಡಾ. ಪ್ರವೀಣ್ ಕುಲಕರ್ಣಿ, ಡಾ. ಎಂ.ಎನ್. ಸುಮಾ, ಡಾ. ಹೆಚ್. ಬಸವನಗೌಡಪ್ಪ, ಡಾ. ಸಿ.ಜಿ. ಬೆಟಸೂರಮಠ, ಡಾ. ಸುಚೇತಾ ಬ್ಯಾನರ್ಜಿ ಕುರುಂದ್ಕರ್, ಡಾ. ಬಿ.ಎಲ್. ಸುಜಾತ ರಾಥೋಡ್, ಡಾ. ಸುರೀಂದರ್ ಸಿಂಗ್, ಡಾ. ಸುಧೀಂದ್ರ ಭಟ್, ಡಾ. ವಿಶಾಲ್ ಕುಮಾರ್ ಗುಪ್ತ, ಡಾ. ಅಮಿತಾಬ್ ದ್ವಿವೇದಿಯವರುಗಳೊಂದಿಗೆ ಪದಕ ಮತ್ತು ಪ್ರಶಸ್ತಿ ವಿಜೇತರುಗಳಿದ್ದಾರೆ (31 ಅಕ್ಟೋಬರ್ 2023)




ಬೆಂಗಳೂರು ಸನ್‌ಸ್ಟಾರ್ ಪಬ್ಲಿಷರ್ಸ್ ವತಿಯಿಂದ ಪ್ರಕಟಿಸಿದ ಶ್ರೀಮತಿ ಪ್ರಮೀಳಮ್ಮನವರ 'ರಾಮಾಯಣ', 'ಮಹಾಭಾರತ' ಮತ್ತು 'ಭಗವದ್ಗೀತೆ' ಗ್ರಂಥಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ಸತೀಶ್ ಹೆಗ್ಗಡೆ, ಶ್ರೀಮತಿ ಪ್ರಮೀಳಮ್ಮ, ಶ್ರೀ ಡಿ.ಎನ್. ಶೇಖರ್ ರೆಡ್ಡಿ, ಡಾ. ಸಿ.ಎನ್. ರಾಮಚಂದ್ರನ್, ಡಾ. ಸತೀಶ್‌ಕುಮಾರ್ ಎಸ್. ಹೊಸಮನಿ, ಶ್ರೀ ಬಿ.ಪಿ. ಷಡಕ್ಷರಿ ಹಾಗೂ ಶ್ರೀ ಎಂ. ರಾಜ್‌ಕುಮಾರ್‌ರವರುಗಳಿದ್ದಾರೆ (11 ನವೆಂಬರ್ 2023)



ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ರಾಜೇಂದ್ರ ಶ್ರೀಗಳವರ 108ನೇ ಜಯಂತಿ ಮಹೋತ್ಸವವನ್ನು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಎನ್. ಜಯರಾಮ್‌ರವರು ಉದ್ಘಾಟಿಸಿದರು. ಶ್ರೀ ಎಂ.ಎಂ. ಸ್ವಾಮಿ, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ, ಶ್ರೀ ಷಡಕ್ಷರಿ, ಶ್ರೀ ಎ.ಎಸ್. ಚನ್ನಬಸಪ್ಪ, ಡಾ. ಎಂ. ನಂಜುಂಡಪ್ಪ, ಶ್ರೀಮತಿ ಉಮಾ ಪ್ರಶಾಂತ್, ಶ್ರೀ ಕೆ.ಎಲ್. ಪುಟ್ಟಬುದ್ಧಿ, ಶ್ರೀ ಎಲ್. ರೇವಣಸಿದ್ಧಯ್ಯ, ಡಾ. ಮಹೇಶ್ವರಿಯವರುಗಳಿದ್ದಾರೆ (5 ನವೆಂಬರ್ 2023)



ಜಗಳೂರು ತಾಲ್ಲೂಕು ಸೊಕ್ಕೆ ಗ್ರಾಮದಲ್ಲಿ ಶ್ರೀ ಶಿರಡಿ ಸಾಯಿಬಾಬಾ ನೂತನ ಮಂದಿರ ಪ್ರಾರಂಭೋತ್ಸವ, ವಿಮಾನ ಗೋಪುರ ಕಳಸಾರೋಹಣ ಹಾಗೂ ನೂತನ ಶಿಲಾಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿ ಉದ್ಘಾಟಿಸಿದರು. ಶ್ರೀ ಎಸ್.ವಿ. ರಾಮಚಂದ್ರ, ಶ್ರೀ ಸತೀಶ್‌ಕುಮಾರ್ ಹೊಸಮನಿ, ಶ್ರೀ ಪಿ. ರವಿಕುಮಾರ್, ಶ್ರೀ ತಿಪ್ಪೇಸ್ವಾಮಿ, ನೊಣವಿನಕೆರೆ ಶ್ರೀಗಳು, ಕು. ಗ್ರಿಹಿಕ, ಶ್ರೀಮತಿ ಕೆ. ಜಯಲಕ್ಷ್ಮೀ ತಿಪ್ಪೇಸ್ವಾಮಿ, ಕಣ್ವಕುಪ್ಪೆ ಮಠದ ಶ್ರೀಗಳು, ಶ್ರೀಮತಿ ಸ್ವಾತಿ ತಿಪ್ಪೇಸ್ವಾಮಿ, ಶ್ರೀ ಬಿ. ದೇವೇಂದ್ರಪ್ಪ, ಶ್ರೀ ಬಸವರಾಜು ಶಿವಗಂಗಾ ಮೊದಲಾದವರುಗಳಿದ್ದಾರೆ (22 ನವೆಂಬರ್ 2023)




ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಶತಮಾನೋತ್ಸವವನ್ನು ಸುತ್ತೂರು, ಆದಿಚುಂಚನಗಿರಿ, ಸಿದ್ಧಗಂಗಾ ಮತ್ತು ಆನಂದಪುರಂ ಮಠಗಳ ಪೂಜ್ಯರುಗಳ ದಿವ್ಯ ಸಾನ್ನಿಧ್ಯಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಿ.ಕೆ. ಸಂಗಮೇಶ್, ಬೀಳಕಿ ಶ್ರೀಗಳು, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು, ಶ್ರೀ ಬಿ.ಎಸ್. ಯಡಿಯೂರಪ್ಪನವರು, ಶ್ರೀ ವಿಜಯ ಸಂಕೇಶ್ವರ, ಶ್ರೀ ಬಿ.ವೈ. ರಾಘವೇಂದ್ರ ಮತ್ತು ಶ್ರೀ ರುದ್ರೇಗೌಡ, ಶ್ರೀ ಎಸ್. ದೊಡ್ಡಣ್ಣ ಮೊದಲಾದವರುಗಳಿದ್ದಾರೆ (4 ನವೆಂಬರ್ 2023)

Registered with the Registrar of Newspapers in India Under No. 50622 / 1986
'Prasada' Monthly, Vol. 38 Issue No. 11, November 2023




ISSN 2583-7648
9 772583 764006

ಬಿಡಿ ಪ್ರತಿ : ರೂ.10/-

e-mail: prasadamagazine@gmail.com * www.jssonline.org